ಸಂಪುಟ 22 ಸಂಚಿಕೆ 8-9
ಫೆಬ್ರವರಿ 27, 2000 ಬೆಲೆ ರೂ. 4.00

ದುಡಿವ ಜನರ ಪ್ರಾಣಮಿತ್ರ


ಪೆಕ್ಷ್ಯಾರಂಗ



ಪಂಚಾಯತ್ ಚುನಾವಣೆಗಳು

ಸರ್ಕಾರಕ್ಕೆ ಚಡ್ಡಿ





ಬ್ಯಾಂಕ್ ನುಂಗುವ ಭೂಪರು

ಪಂಚಾಯತ್ ಚುನಾವಣೆ ಮತ್ತು ಪಾಯಿಖಾನೆ ರಾಜಕಾರಣ

ಮೀನಮೇಷಗಳಲ್ಲಿ ಕಾಲನೂಕುವ ಕಸರ್ಸ್‌ ಕೊನೆಗೊಂಡು ಕರ್ನಾಟಕದಲ್ಲಿ ಗ್ರಾಮ ಪಂಚಾಯತ್ ಚುನಾವಣೆಗಳ ಪ್ರಕ್ರಿಯೆ ಆರಂಭಗೊಂಡಿದೆ. ರಾಜ್ಯದ ಬಳ್ಳಾರಿ ಜಿಲ್ಲೆ ಹಾಗೂ ಬೆಳಗಾವಿ ರಾಯಭಾಗ ತಾಲೂಕಗಳನ್ನುಳಿದು ಒಟ್ಟು 5316 ಗ್ರಾಮ ಪಂಚಾಯ್ತುಗಳಿಗಾಗಿ ಚುನಾವಣೆ ನಡೆಯಲಿದೆ. ಜನತೆಯ ಕೈಗೆ ಅಧಿಕಾರ ನೀಡುವ ಅಧಿಕಾರ ವಿಕೇಂದ್ರಿಕರಣದ ಪ್ರಕ್ರಿಯೆಯಲ್ಲಿ ಮಹತ್ವದ ಚುನಾವಣೆಗಳಿವು. ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಪಂಚಾಯ್ತಿ ವ್ಯವಸ್ಥೆಗಳು ಅಸ್ತಿತ್ವದಲ್ಲಿ ಇರುವುದಾದರೂ ಪ.ಬಂಗಾಳ, ಕೇರಳ, ತ್ರಿಪುರಾಗಳ ಅನುಭವ ಮತ್ತು ಸಾಧನೆಗಳು ಗಮನಾರ್ಹ. ಇಲ್ಲಿ ನಿಜವಾದ ಅರ್ಥದಲ್ಲಿ ದುರ್ಬಲರು, ದುಡಿಯುವ ಜನರ ಕೈಗೆ ಅಧಿಕಾರ ನೀಡುವ, ಅವರನ್ನು ಎಲ್ಲಾ ಹಂತಗಳಲ್ಲಿಯೂ ಪಾಲ್ಗೊಳ್ಳುವ ಪ್ರಜಾಸತ್ತಾತ್ಮಕ ಕೆಲಸ ನಡೆದಿದೆ. ನೈಜ ಪರ್ಯಾಯ ನೀಡಿದ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಅಭಿನಂದನಾರ್ಹ. ಉಳಿದ ಕೆಲವು ರಾಜ್ಯಗಳಲ್ಲಿ ಮಸೂದೆಯ ಸ್ವರೂಪದಲ್ಲೇ ವಂಚಿತ ಜನಸಮೂಹಗಳಿಗೆ ಅಧಿಕಾರ ತಪ್ಪಿಸುವ ಇಲ್ಲವೇ ನಾಮಾಕಾವಸ್ತೆ ಮಾಡುವ ಅಧಿಕಾರವನ್ನು ಹಲ್ಲಿಲ್ಲದ ಹಾವನ್ನಾಗಿಸುವ ಪ್ರಯತ್ನಗಳನ್ನು ಯಥೇಚ್ಛವಾಗಿ ಕಾಣಬಹುದು. ಇಷ್ಟೆಲ್ಲಾ ಮಿತಿಗಳಿದ್ದರೂ, ದೌರ್ಬಲ್ಯಗಳಿದ್ದರೂ ಜನರನ್ನು ತೊಡಗಿಸುವ ಕ್ರಿಯೆ ಸ್ವಾಗತಾರ್ಹ.

ಜನತಾದಳ ಅಥವಾ ಕಾಂಗ್ರೆಸ್ ಪಕ್ಷಗಳು ಕರ್ನಾಟಕದಲ್ಲಿ ಒಂದೊಂದು ಬಾರಿ ಅಧಿಕಾರಕ್ಕೆ ಬಂದಾಗ ಅವರವರ ಮೂಗಿನ ನೇರಕ್ಕೆ ಅಥವಾ ಭೂಮಾಲೀಕರು, ಶ್ರೀಮಂತರ ಹಿತಾಸಕ್ತಿಗಳಿಗೆ ಅನುಗುಣವಾಗಿ ಪಂಚಾಯತ್ ಮಸೂದೆಗೆ ತಿದ್ದುಪಡಿಗಳನ್ನು ತರಲಾಗಿದೆ. ಇಲ್ಲಿ ಜನರ ಅಗತ್ಯತೆ, ಅಧಿಕಾರದ ವಿಕೇಂದ್ರೀಕರಣದ ಬದಲು ಈಗಾಗಲೇ ಸಮಾಜದಲ್ಲಿ ಪ್ರತಿಷ್ಠಿತ ಅಥವಾ ಹಿಡಿತ ಮತ್ತು ಧ್ವನಿ ಗಟ್ಟಿಯಾಗಿರುವ ವಿಭಾಗಗಳ ಕೈಗೇ ಅಧಿಕಾರ ದಕ್ಕಿಸುವ ಯತ್ನಗಳೇ ಮುಖ್ಯವಾಗಿವೆ. ದುರ್ಬಲರು, ಜನಸಾಮಾನ್ಯರು ಪ್ರವೇಶಿಸದಂತೆ ತಡೆಯುವ ಪ್ರಯತ್ನಗಳೇ ಲೆಕ್ಕವಿಲ್ಲದಷ್ಟು.

ಈ ಬಾರಿಯ ಚುನಾವಣೆ ಘೋಷಿತವಾದಾಗ ಯಾವುದೇ ವಿಷಯಗಳಿಗಿಂತ ಅತೀ ಹೆಚ್ಚು ಚರ್ಚೆಯಾಗಿ, ಜನಸಾಮಾನ್ಯರಲ್ಲಿ ಆತಂಕ ಮೂಡಿಸಿದ್ದ ಪಾಯಿಖಾನೆ ವಿಷಯ. ಪಂಚಾಯತ್‌ನ ಚುನಾವಣೆಗಳಲ್ಲಿ ಅಭ್ಯರ್ಥಿಯಾಗಲು ಕಡ್ಡಾಯವಾಗಿ ತಮ್ಮ ಹಾಗೂ ಮನೆ ಮಂದಿಗಳ ಉಪಯೋಗಕ್ಕೆಂದು ಪಾಯಿಖಾನೆ ಸ್ವಂತ ಹೊಂದಿರಬೇಕೆಂಬ ಅಧಿನಿಯಮವು ಪಂಚಾಯತ್ ರಾಜ್ ಕಾಯ್ದೆಯಲ್ಲಿದೆ. ಇದನ್ನು ಪೂರೈಸದೇ ಸ್ಪರ್ಧಿಸುವುದು ಅಸಾಧ್ಯವೆಂದು ಚುನಾವಣಾ ಅಧಿಕಾರಿಗಳು ತಾಕೀತು ಮಾಡಿದರು. ಈ ಪ್ರಕರಣವು ರಾಜ್ಯದ ಉಚ್ಚ ನ್ಯಾಯಾಲಯದವರೆಗೂ ಹೋಗಿ, ಇದೀಗ ಸ್ಪರ್ಧೆಗೆ ಕಡ್ಡಾಯ ಅಗತ್ಯ ಅಲ್ಲವೆಂದೂ, ನಂತರದ ಆರು ತಿಂಗಳೊಳಗೆ ಪಾಯಿಖಾನೆ ಕಟ್ಟಿಸಿಕೊಳ್ಳುವದಾಗಿ ಮುಚ್ಚಳಿಕೆ ಪತ್ರ ಬರೆಯಬೇಕು ಎಂದು ಸ್ಪರ್ಧಿಗಳ ಕತ್ತಿನ ಮೇಲೆ ತೂಗುಕತ್ತಿಯನ್ನು ನ್ಯಾಯಾಲಯವು ಇಳಿ ಬಿಟ್ಟಿದೆ. ಈ ಪ್ರಕರಣ ರಾಜ್ಯದಲ್ಲಿ ಎಷ್ಟೆಲ್ಲಾ ತಲ್ಲಣಗಳನ್ನು ಉಂಟು ಮಾಡಿ ದಿನನಿತ್ಯ ಚರ್ಚೆ ಆಗುತ್ತಿದ್ದರೂ ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು, ಮಂತ್ರಿಗಳು ಮಧ್ಯಪ್ರವೇಶಿಸದೆ, ಏನೊಂದೂ ಪ್ರತಿಕ್ರಿಯೆಯನ್ನು ಕೂಡ ನೀಡದೇ ನಿರ್ಲಿಪ್ತರಾಗಿದ್ದುದು ವಿರೋಧ ಪಕ್ಷಗಳು ಸುಮ್ಮನಿದ್ದವು. ಹಿಂದೆ ಜನತಾದಳದ ಪಟೇಲ್ ಸರ್ಕಾರ ವಿಧಾನ ಸಭೆಯಲ್ಲಿ ತಿದ್ದುಪಡಿ ತಂದಿತು. ನಿರ್ಮಲ ಕರ್ನಾಟಕವೆಂಬ 'ಪಾಯಿಖಾನೆ(ನುಂಗುವ) ಪ್ರಾಜೆಕ್ಟ್'ನ ಗುಂಗಿನಲ್ಲಿದ್ದ ಸಮಾಜವಾದಿ ಎಂ.ಪಿ.ಪ್ರಕಾಶರು ಅಂತಹ ಹಾಸ್ಯಾಸ್ಪದ ನಿಲುವಿನ ಪರವಾಗಿ ನಿಂತರು. ಬಹಳಷ್ಟು ಶಾಸಕರು, ಸಚಿವರು ಶ್ರೀಮಂತ ಅಥವಾ ಅನುಕೂಲಸ್ಥರಾಗಿದ್ದು, ಇದು ಅವರಿಗೆ ಸಮಸ್ಯೆಯಾಗಲಿಲ್ಲ. ಬಹಳ ಸುಲಭವಾಗಿ ಪಾಯಿಖಾನೆ ಇಲ್ಲವಾದರೆ ಹೇಗೆ? ಎಂದೆಲ್ಲಾ ಉಡಾಫೆ ಮಾತನಾಡಿ ವಿಧಾನಸೌಧದಲ್ಲಿ

ಸಂಪಾದಕೀಯ

ನಿದ್ದೆ ಹೋದರು. ಪ್ರತಿಭಟಿಸಿದ್ದು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿ, ರೈತ ಸಂಘದ ಪುಟ್ಟಣ್ಣಯ್ಯನಂತಹವರು ಮಾತ್ರ. ಸುಮಾರು 75,000 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು ಈ ಸಮಸ್ಯೆ ಗಂಭೀರ ಅರಿವು, ಸತ್ವದ ನೆಲಗಟ್ಟಿನ ಮೇಲೆ ಕಾರ್ಯವೆಸಗುವ ಮನಸ್ಸು, ಬುದ್ಧಿ ಇಲ್ಲದೇ ಇರುವುದು ಕಂಡು ಬರುತ್ತದೆ. ನಯ ಮಾತಿನ ಹೈಟೆಕ್ ಕೃಷ್ಣರಿಗೆ ಸಮಸ್ಯೆ ಅನ್ನಿಸುವುದೇ ಅಸಾಧ್ಯವಾಗಿದೆಯೆನಿಸುತ್ತದೆ.

ಸರ್ಕಾರವೇ ಪ್ರಕಟಿಸಿರುವ ವರದಿಯಂತೆ ಗ್ರಾಮಾಂತರದಲ್ಲಿ ಸುಮಾರು ಶೇಕಡಾ 95 ರಿಂದ 96 ಹಳ್ಳಿಗಳಲ್ಲಿ, ಇನ್ನೂ ಗುಲಬರ್ಗ, ಬಳ್ಳಾರಿ, ವಿಜಾಪುರದಂತಹ ಕಡೆ ಶೇ 98-99 ರಷ್ಟು ಹಳ್ಳಿಗಳಲ್ಲಿ ಪಾಯಿಖಾನೆಗಳೇ ಇಲ್ಲ. ಇದರಲ್ಲಿ ಕೋಟ್ಯಾಂತರ ಜನಕ್ಕೆ ಸ್ವಂತ ಮನೆಯಿಲ್ಲ, ಜಾಗ ಇಲ್ಲ. ಬಿದ್ದ ತಡಿಕೆ, ಕೋಡೆ ಕಟ್ಟಿಸಿಕೊಳ್ಳುವುದು ಅಸಾಧ್ಯದ ಸ್ಥಿತಿಯಲ್ಲಿದ್ದಾರೆ. ಇನ್ನು ಪಾಯಿಖಾನೆ ಹೊಂದುವುದೆಲ್ಲಿ? ಇಂತಹ ಧಾರುಣ ಸ್ಥಿತಿ ಕಣ್ಣೆದುರು ಇದ್ದರೂ ಸರ್ಕಾರ ಮಧ್ಯ ಪ್ರವೇಶಿಸದೇ ಉಳಿದದ್ದೇಕೆ? ನಾಮಪತ್ರ ಸಲ್ಲಿಸಿರುವವರು ಆಕ್ಷೇಪಣೆ ಎತ್ತದಿದ್ದರೆ ವಿನಾಯ್ತಿಯಂತೆ ಮತ್ತು ಆರುತಿಂಗಳ ನಂತರ ಕಟ್ಟಿಸುವ ಮುಚ್ಚಳಿಕೆ.... ಇಲ್ಲವೇ ಇದೆಯೆಂದು ಬರೆದುಕೊಟ್ಟರಾಯ್ತು ಎಂಬ ಅಧಿಕಾರಿಗಳ ಸಲಹೆ... ಇವು ನಿಜಕ್ಕೂ ಬೇಕಾದವರಿಗೆ ಒಂದು, ಬೇಡದವರಿಗೆ ಇನ್ನೊಂದು ಕ್ರಮ ಅನುಸರಿಸುವ ತಾರತಮ್ಯದ್ದು. ಹೀಗೆ ದುರ್ಬಲರು, ಸಾಮಾನ್ಯರು ಚುನಾವಣೆಗಳಲ್ಲಿ ಸ್ಪರ್ಧಿಸದೇ ದೂರ ಉಳಿಸಿ, ಇದ್ದ ಭೂಮಾಲೀಕರು, ಶ್ರೀಮಂತರನ್ನು ಅಧಿಕಾರ ವಿಕೇಂದ್ರೀಕರಣದ ಹೆಸರಲ್ಲಿ ಗದ್ದುಗೆಗೆ ಕೂಡಿಸುವುದು. ಇನ್ನೊಂದೆಡೆ ದೇಶದ ಪ್ರಜೆಯಾಗಿ, ಚುನಾವಣೆಗಳಲ್ಲಿ ಸ್ಪರ್ಧಿಸುವ ಮೂಲಭೂತ ಪ್ರಜಾಪ್ರಭುತ್ವದ ಹಕ್ಕನ್ನೇ ಮೊಟಕುಗೊಳಿಸುವ ಹುನ್ನಾರವಿದು. ಗ್ರಾಮಾಂತರದ ಸ್ಥಾಪಿತ ಹಿತಾಸಕ್ತಿಗಳು ಜನಸಾಮಾನ್ಯರು ಸ್ಪರ್ಧಿಸದಂತೆ ತಡೆಯೊಡ್ಡುವಂತೆ, ಸರ್ಕಾರವೂ ಇಂತಹ ಕ್ರಮಗಳನ್ನು ಅನುಸರಿಸಿದರೆ ಹೇಗೆ? ಇದು ಜನರ ಸರ್ಕಾರವಾಗುವುದಾದರೂ ಹೇಗೆ? ಅಧಿಕಾರದ ವಿಕೇಂದ್ರೀಕರಣ, ಜನರ ಕೈಗೆ ಅಧಿಕಾರ ನೀಡಿದ ಸಾಧನೆಗಳ ಡಾಣಾ ಢಂಗುರ ಸಾರುವವರ ನಿಜವಾದ ಉದ್ದೇಶ ಬಯಲಾಗುತ್ತಿದೆ. ಇನ್ನು ಕೇರಳ, ಬಂಗಾಳದಂತ ಪಂಚಾಯತ್‌ನಂತಹ ಸಮಿತಿಗಳಿಗೆ ಭೂಮಿ, ಸಂಪನ್ಮೂಲಗಳ ಕ್ರೋಢೀಕರಣ, ಸ್ಥಳೀಯವಾಗಿ ಜನ ರೂಪಿಸುವ ಯೋಜನೆಗಳ ಅನುಷ್ಠಾನದಂತಹ ಅಧಿಕಾರ-ಅವಕಾಶ ನೀಡುವುದು ಕನಸಿನ ಮಾತು. ಕೃಷ್ಣರ ಸರ್ಕಾರದ ಸ್ಥಾನ ಮೀಸಲಾತಿ ನೀತಿ ಹಲವಾರು ಕಡೆಗಳಲ್ಲಿ ಅಸಮರ್ಪಕ, ಅವೈಜ್ಞಾನಿಕವಾಗಿರುವ ವರದಿಗಳು ಬರುತ್ತಿವೆ. ಆ ಜಾತಿ ಜನಾಂತ ಅಲ್ಲಿ ಇಲ್ಲವಾದರೂ ಸ್ಥಾನಗಳನ್ನು ಸೃಷ್ಟಿಸಲಾಗಿದೆ. ಅವರನ್ನು ಎಲ್ಲಿಂದ ತರುವುದು? ಇಲ್ಲವಾದರೆ ಆ ಸ್ಥಾನಕ್ಕೆ ಬೇರೆಯವರನ್ನು ಆಯ್ಕೆ ಮಾಡುವುದು? ಅಲ್ಲದೇ ತಮ್ಮ ರಾಜಕೀಯ ಪ್ರಾಬಲ್ಯ ಜಾತಿ, ಮೇಲುಗೈ ಉಳಿಸಿಕೊಳ್ಳಲು ಮನಬಂದಂತೆ ತಾಲೂಕು ಅಧಿಕಾರಿಗಳ ಮೂಲಕ ಸ್ಥಾನಗಳನ್ನು ಮೀಸಲಿಡಲಾಗಿದೆ. ರಾಜಕೀಯ ಸೇಡು ತೀರಿಸಿಕೊಳ್ಳಲಾಗುತ್ತಿದೆ. ಕೆಲವೆಡೆ ಜನಸಂಖ್ಯೆ ಆಧಾರದಲ್ಲಿ ಪಂಚಾಯತ್ ಸದಸ್ಯರ ಪ್ರಮಾಣ ನಿಗದಿಯಾಗಿರುವುದು ಅಸಂಬದ್ಧತೆಯಿಂದ ಕೂಡಿವೆ ಎನ್ನಲಾಗುತ್ತಿದೆ.

ಇಂತಹವುಗಳ ಬಗ್ಗೆ ಕಿಂಚಿತ್ತೂ ಚಿಂತಿಸದ, ಪರಿತಪಿಸದ ಇಂತಹ ಸರ್ಕಾರ, ಪ್ರಜಾತಂತ್ರದ ಬೇರುಗಳನ್ನೇ ದುರ್ಬಲಗೊಳಿಸುತ್ತಿದೆ. ಮತನಿರಪೇಕ್ಷಿತ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವವುಳ್ಳ ಸಂವಿಧಾನವನ್ನೇ ಬುಡಮೇಲುಗೊಳಿಸಿಲು ಸಂಘ ಪರಿವಾರ ಆರ್ಭಟಿಸುತ್ತಿರುವಾಗ ಅದನ್ನು ಎದುರಿಸುವ, ಸೈದ್ಧಾಂತಿಕ, ಸಂಘಟನಾ ಹೆಜ್ಜೆಯನ್ನು ಸೆಕ್ಯುಲರ್ ಶಕ್ತಿಗಳು ಇರದೇ ಹೋದರೆ ಅಪಾಯ ಇನ್ನೂ ಗಂಭೀರವಾಗಲಿದೆ. ಇದು ಪಾಯಿಖಾನೆಯ ವಿಷಯಕ್ಕೆ ಮಾತ್ರವಲ್ಲ, ಜನರೆಂದರೆ ಕೇವಲ ಓಟು ಎಂದು ಪರಿಗಣಿಸುವ ಮನೋಭಾವದ ಬಗೆಗೂ ಸಂಬಂಧಿಸಿದ್ದು.

ಓದುಗರ ಗಮನಕ್ಕೆ

ವಿದ್ಯುತ್‌ಚ್ಛಕ್ತಿಯ ಪೂರೈಕೆಯಲ್ಲಿನ ತೀವ್ರ ಅಡಚಣೆಯಿಂದಾಗಿ ಫೆಬ್ರವರಿ 20ರ ಸಂಚಿಕೆ 7 ಪ್ರಕಟಗೊಳ್ಳಲಿಲ್ಲ. ಇದರಿಂದ ಓದುಗರಿಗೆ ಮತ್ತು ಏಜೆನ್ಸಿದಾರರಿಗೆ ಆದ ತೊಂದರೆಗೆ ವಿಷಾಧಿಸುತ್ತಿವೆ.

7 ಮತ್ತು 8 ಎರಡೂ ಸಂಚಿಕೆಯೂ ಸೇರಿ 16 ಪುಟಗಳಲ್ಲಿ ಪ್ರಕಟಗೊಂಡಿದೆ. ಬೆಲೆ ರೂ. 4.00. ಸಹಕರಿಸಬೇಕಾಗಿ ಕೋರುವ

- ವ್ಯವಸ್ಥಾಪಕರು

ಮಾರ್ಚ್ 9 ದಿಲ್ಲಿ ಚಲೋ

ಮಹಾ ಹೋರಾಟದ ಕರೆಗಾಗಿ ಮಹಾ ರ್‍ಯಾಲಿ

21ನೆಯ ಶತಮಾನಕ್ಕೆ ಹಾರುವ ಸುಂದರ ಕನಸುಗಳನ್ನು ಬಿತ್ತಿ, ಆಧುನೀಕರಣದ ಮರುಳುಗೊಳಿಸುವ ಮಾತುಗಳಿಂದ ಮೆಲ್ಲ ಮೆಲ್ಲನೇ ತೆವಳುತ್ತಾ ಬಂದ 'ಹೊಸ ಆರ್ಥಿಕ ನೀತಿಯೆಂಬ' ವಿಷ ಜಂತು, ದೇಶದಲ್ಲಿ ಜಾಗ ಮಾಡಿಕೊಂಡದ್ದು ರಾಜೀವ್ ಗಾಂಧಿಯವರ ಕಾಲದಲ್ಲಿ. ಅಲ್ಲಿಂದ ಇಲ್ಲಿಯವರೆಗೆ- ಸುಮಾರು ಒಂದೂವರೆ ದಶಕದಲ್ಲಿ ಎಷ್ಟೆಲ್ಲಾ ಜನತೆಯ ಪ್ರತಿರೋಧಗಳ ನಡುವೆಯೂ, ವಿವಿಧ ಸರ್ಕಾರಗಳ ಆರೈಕೆಯಲ್ಲಿ ಕೊಬ್ಬಿ ದೆಹಲಿಯ ಗದ್ದುಗೆಯನ್ನೇ ಘಟಸರ್ಪದಂತೆ ತಬ್ಬಿ ನಿಂತಿದೆ. ಈ ಘಟಸರ್ಪದ ಹಾವಳಿ-ಅನಾಹುತಗಳ ಚೀತ್ಕಾರ ಕೇಳಿಬರದಂತೆ ಮರೆ ಮಾಚಲು ಹಿಂದುತ್ವ, ಸ್ವದೇಶಿ ಮುಂತಾದ ಮದೋ(ತೋ)ನ್ಮತ್ತ ಸಂಗೀತವೂ ಹರಿದಿದೆ. ವಾಜಪೇಯಿ, ಅಡ್ವಾಣಿಯಾದಿಯಾಗಿ ಹಲವರ ಕೂಟವು ಮತ್ತು ಖಾಸಗಿ ಕಂಪನಿಗಳು, ಜಮೀನ್ದಾರರು ಅದರ ಹೆಡೆ ಅಡಿಯಲ್ಲಿ ಆಶ್ರಯ ಪಡೆಯುತ್ತಿದ್ದಾರೆ.

ಕಳೆದ 13 ತಿಂಗಳ ವಾಜಪೇಯಿ ಸರ್ಕಾರ, ನಂತರ ಮತ್ತೆ ಅಧಿಕಾರಕ್ಕೆ ಬಂದ ಎನ್.ಡಿ.ಎ. ಕೂಟವೆಂಬ ಆರ್.ಎಸ್.ಎಸ್. ನಿರ್ದೇಶನದ ಗುಪ್ತ ಕಾರ್ಯಕ್ರಮದ ಸರ್ಕಾರ, ಉದಾರೀಕರಣ, ಜಾಗತೀಕರಣವನ್ನು ತೀವ್ರಗೊಳಿಸಿದೆ. ದೇಶದ ಆರ್ಥಿಕ ಸ್ವಾವಲಂಬನೆ, ಸಾರ್ವಭೌಮತ್ವದ ಕೋಟ್ಯಾಂತರ ಜನ ಕಟ್ಟಿ ಬೆಳೆಸಿದ ಭವ್ಯ ಸೌಧವನ್ನು ಆತುರಾತುರವಾಗಿ ಉರುಳಿಸಿ, ನವರತ್ನ ಸಂಪನ್ಮೂಲಗಳನ್ನು ವಿದೇಶಿ-ಸ್ವದೇಶಿ ಖಾಸಗಿ ಕಂಪನಿಗಳಿಗೆ ಅಗ್ಗಕ್ಕೆ ಧಾರೆ ಎರೆಯ ತೊಡಗಿದ್ದಾರೆ. ಈ ಘಾತಕ ಕೆಲಸ ಕಾಣಿಸಬಾರದೆಂದು ಮತ್ತೇ ಹಿಂದುತ್ವ, ಕೋಮುವಿಭಜನೆ-ದಳ್ಳುರಿ, ಯುದ್ಧ ಮುಂತಾದ ಆಟ ಆಡುತ್ತಲೇ ಭಾರತದ ಪ್ರಜಾಸತ್ತಾತ್ಮಕ ಸಂವಿಧಾನವನ್ನೇ ಬುಡಮೇಲು ಮಾಡಲು ಹೊರಟಿದ್ದಾರೆ. ದೇಶ ಒಡೆಯುವ , ಮಾರುವ ಈ ಅಟ್ಟಹಾಸದೆದುರು ಪ್ರತಿರೋಧ ಒಡ್ಡುತ್ತಲೇ ಬರಲಾಗಿದೆ. ದೇಶ ಉಳಿಸಿಕೊಳ್ಳಲು ಹಲವು ತ್ಯಾಗ ಪೂರ್ಣ ಹೋರಾಟಗಳು ಬೆಳೆದುಬಂದಿವೆ. ಆದ್ದರಿಂದಲೇ ಕರಾಳ ಶಕ್ತಿಗಳ ಹೂಂಕಾರಕ್ಕೆ ಒಂದಿಷ್ಟು ಕಡಿವಾಣ ಹಾಕಲಾಗಿದೆ. ಹೀಗಿರುವಾಗಲೂ ಇನ್ನೂ ದೊಡ್ಡ ಪ್ರಮಾಣದಲ್ಲಿ ಪ್ರತಿರೋಧ ಒಡ್ಡಲೇಬೇಕಿದೆ.

ರಾಜ್ಯ ಸಮಾವೇಶ 19.2.2000 ರಂದು ಬೆಂಗಳೂರಿನಲ್ಲಿ ಎನ್.ಜಿ.ಓ. ಸಭಾಂಗಣದಲ್ಲಿ ನಡೆಯಲಿದೆ

ಈ ಹೊಸ ಸವಾಲುಗಳನ್ನು ಕೈಗೆತ್ತಿಕೊಂಡು ಹೋರಾಟದಲ್ಲಿ ರಚಿತಗೊಂಡಿರುವ 'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ' (NPMO) ಮತ್ತೊಂದು ಮಹಾಸಂಗ್ರಾಮಕ್ಕೆ ದುಮುಕಿದೆ. ಅದಕ್ಕೆಂದೇ ದೇಶದ ದುಡಿಯುವ ಜನತೆ, ರೈತ-ಕಾರ್ಮಿಕರು, ಕೂಲಿಕಾರರು, ಜನಸಾಮಾನ್ಯರು ಮಹಿಳೆಯರು, ಯುವಜನ, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ನೌಕರರು ಮುಂತಾದ ಜನರುಳ್ಳ ವಿಶಾಲ ನೆಲೆಯ ಬೃಹತ್ ಸಮಾವೇಶ ನವದೆಹಲಿಯಲ್ಲಿ ಇದೇ ಜನವರಿ 20 ರಂದು ಜರುಗಿದೆ. ಸುಮಾರು 60 ಕ್ಕೂ ಅಧಿಕ ಸಂಘಟನೆಗಳನ್ನು ಪ್ರತಿನಿಧಿಸಿ ದೇಶದ ಮೂಲೆ ಮೂಲೆಗಳಿಂದ ಬಂದ ಸುಮಾರು 5000 ಪ್ರತಿನಿಧಿಗಳ ಸಮಾವೇಶ ಒಕ್ಕೊರಲಿನಿಂದ ಸಮರದ ಕಹಳೆಯನ್ನು ಮೊಳಗಿಸಿದ್ದಾರೆ. ಆಳುವವರ ಎದೆ ನಡುಗಿಸುವ ಕಾಳಗದ ಕರೆ ಘೋಷಿಸಿದ್ದಾರೆ.

ಉದಾರೀಕರಣ ವೇಗಕ್ಕೆ ಕಡಿವಾಣ

ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳನ್ನು ತರಲು ... ನೇತೃತ್ವದ ಕೇಂದ್ರ ಸರಕಾರದ ಧೋರಣೆಗಳನ್ನು ವಿರೋಧಿಸಿದ್ದ ಸಿಐಟಿಯು ಅವುಗಳನ್ನು ಜಾರಿಗೊಳಿಸ ತೊಡಗಿದಂತೆ ದೇಶವ್ಯಾಪಿ ಮುಷ್ಕರಕ್ಕೆ ದುಮುಕಿದ್ದ ಸಿಐಟಿಯು ಈ ಹೋರಾಟದ ವಿಶಾಲ ವ್ಯಾಪ್ತಿಯಲ್ಲಿ ನಡೆಯಬೇಕಾದ್ದನ್ನು ಮನಗಂಡು 1991 ರಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ರಚನೆಯಾಗಿ ಕಾರ್ಮಿಕ ವರ್ಗ ವಿಶಾಲನೆಲೆಯಲ್ಲಿ ಪ್ರತಿರೋಧ ಒಡ್ಡತೊಡಗಿತು. ಹೊಸ ಹೊಸ ಜನಸಮೂಹಗಳು, ರಾಜಕೀಯ ಶಕ್ತಿಗಳು ಸೆಳೆಯಲ್ಪಟ್ಟವು. ಈ ಆರ್ಥಿಕ ನೀತಿಗಳು ಮತ್ತು ಕೋಮುವಾದದ ಎರಡು ತಲೆಯ ಹಾವು ಒಂದರೊಡನೆ ಇನ್ನೊಂದು ಬೆಸಗೊಂಡು ಬುಸುಗುಟ್ಟುವಾಗ, ಬೆಳೆದು ಬಂದ ವಿಶಾಲ ಪ್ರತಿರೋಧ ಹೊಸ ಜನಸಮೂಹಗಳ ಕಾರ್ಮಿಕರ ಜೊತೆಗೆ ರೈತರು, ಕೂಲಿಕಾರರು ಮಧ್ಯಮವರ್ಗದ ನೌಕರರು, ವಿದ್ಯಾರ್ಥಿಗಳು ಮೊದಲಾದವರ ಭಾಗವಹಿಸುವಿಕೆಯನ್ನು ಲಕ್ಷ್ಯದಲ್ಲಿರಿಸಿ, ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳು ವೇದಿಕೆ (NPMO) ರಾಷ್ಟ್ರಮಟ್ಟದಲ್ಲಿಯೂ ಮತ್ತು ಬಹುತೇಕ ರಾಜ್ಯಗಳಲ್ಲಿ ರಚನೆಗೊಂಡವು. ಈ ವೇದಿಕೆಯಲ್ಲಿ ಸುಮಾರು 60 ಕ್ಕೂ ಅಧಿಕ ವಿವಿಧ ಜನಸಮೂಹಗಳ ಸಾಮೂಹಿಕ ಸಂಘಟನೆಗಳು, ಅಲ್ಲದೇ ವ್ಯಕ್ತಿ-ಶಕ್ತಿಗಳು ಒಳಗೊಂಡ ಅತ್ಯಂತ ಪ್ರಬಲ, ಜನತೆಯ ಹೋರಾಟದ ವೇದಿಕೆಯಾಗಿ ರೂಪುಗೊಂಡಿದೆ.

ಹೊಸ ಹೊಸ ಜನವಿಭಾಗಗಳು ಹೋರಾಟದತ್ತ

30 ಲಕ್ಷ ಸದಸ್ಯ ಬಲದ ಸಿಐಟಿಯು, ಒಂದೂವರೆ ಕೋಟಿ ಸದಸ್ಯತ್ವದ ರೈತ ಸಂಘಟನೆ ಎಐಕೆಎಸ್, ಒಂದು ಕೋಟಿ ಹತ್ತು ಲಕ್ಷ ಸದಸ್ಯತ್ವದ ಯುವಜನ ಸಂಘಟನೆ ಡಿವೈಎಫ್‌ಐ, 25 ಲಕ್ಷ ಸದಸ್ಯತ್ವದ ಕೃಷಿಕೂಲಿಕಾರ ಸಂಘಟನೆ AIAWU, 25 ಲಕ್ಷ ಸದಸ್ಯರ ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ, 60 ಲಕ್ಷ ಸದಸ್ಯತ್ವದ ಮಹಿಳಾ ಸಂಘಟನೆ AIDWA ಅಲ್ಲದೇ ಹಲವಾರು ಲಕ್ಷ ಲಕ್ಷ ಬಲದ ಇತರ ಕಾರ್ಮಿಕ ಸಂಘಟನೆಗಳಾದ AITUC, ಬ್ಯಾಂಕ್, ವಿಮಾ ನೌಕರರ ಸಂಘಟನೆಗಳು, ಸಾರ್ವಜನಿಕ ವಲಯದ ನೌಕರರು, AISF, AIYF ವಿವಿಧ ವಿದ್ಯಾರ್ಥಿ- ಯುವಜನ ಮಹಿಳಾ ಸಂಘಟನೆಗಳ - ಒಳಗೊಂಡು ಕೋಟ್ಯಾಂತರ ಜನ ಬಲದ ಸಂಘಟನೆಗಳು ಒಂದು ವೇದಿಕೆಯಲ್ಲಿ ಅಣಿನೆರೆದಿವೆ. ದೇಶದ ಆರ್ಥಿಕತೆಯ ಹೃದಯ ಕೇಂದ್ರವಾಗಿರುವ ಎಲೆಕ್ಟ್ರಾನಿಕ್ಸ್, ಕಬ್ಬಿಣ ಉಕ್ಕು, ರೈಲ್ವೆ, ಟೆಲಿಕಾಂ, ವಿಮಾನ, ಪೆಟ್ರೋಲ್, ಡೀಸೆಲ್, ವಿದ್ಯುತ್‌ಚಕ್ತಿ, ಸಾರಿಗೆ, ರಸಾಯನಿಕ ಗೊಬ್ಬರ, ಔಷಧಿ, ಆಹಾರ ಸಂಸ್ಕರಣೆ, ಬ್ಯಾಂಕ್, ವಿಮಾ, ಬಂದರು, ಕಲ್ಲಿದ್ದಲು ಮುಂತಾದ ಕೈಗಾರಿಕೆಗಳು ಹೊಲ ಗದ್ದೆಗಳಲ್ಲಿ ದುಡಿಯುವ ರೈತ-ಕೂಲಿಕಾರರು, ಸರ್ಕಾರಿ ನೌಕರರು, ಲಕ್ಷಾಂತರ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಅದ್ಯಾಪಕರು, ವಕೀಲರು ಹೀಗೆ.... ಎಲ್ಲಾ ರಂಗಗಳ ಜನತೆ ಭಾಗವಹಿಸುತ್ತಿದ್ದಾರೆ.

ಈ ಆರ್ಥಿಕ ನೀತಿಗಳ ಅಪಾಯವನ್ನು ಅರಿತು ಅದನ್ನು ಹಿಮ್ಮೆಟ್ಟಿಸಲು ಸಣ್ಣ ಪ್ರಮಾಣದಲ್ಲಿ ಆರಂಭಗೊಂಡು, ಇದೀಗ ಅತ್ಯಂತ ವಿಶಾಲವಾದ, ಪ್ರಬಲ ಆಂದೋಲನವಾಗಿ ಬೆಳೆಯುತ್ತಿದೆ. ಕೋಟಿ ಕೋಟಿ ಹೊಸ ಹೊಸ ಜನವಿಭಾಗಗಳಲ್ಲಿ ಜಾಗೃತಿ ಉಂಟುಮಾಡಿ, ಕ್ರಿಯಾಶೀಲವಾಗಲು ಅನುವು ಮಾಡಿರುವುದು

ಸಂವಿಧಾನದ ಪರಾಮರ್ಶೆ ಅಭಿಪ್ರಾಯಗಳು

ಸಂವಿಧಾನದ ಪರಾಮರ್ಶೆ ಹೆಸರಿನಲ್ಲಿ ಅದರ ಮೂಲ ಆಶಯಗಳನ್ನು ಬುಡಮೇಲು ಮಾಡುವ 'ಬಚ್ಚಿಟ್ಟ ಅಜೆಂಡಾ'ವನ್ನು ಜಾರಿಗೊಳಿಸುವ ಕೇಂದ್ರದ ಬಿಜೆಪಿ ಸರ್ಕಾರ ಮುಂದಾಗಿದೆ. ಈ ಪರಾಮರ್ಶೆ ಅಗತ್ಯವೆಂದೂ ಒಪ್ಪಿಸಲು ಪತ್ರಿಕೆ, ಟಿ.ವಿ. ಮುಂತಾದ ಮಾಧ್ಯಮಗಳ ಹಾಗೂ 'ಪಿಸುಮಾತಿನ' ಪ್ರಚಾರವನ್ನು ಸಂಘ ಪರಿವಾರ ನಡೆಸಿದೆ. ಆದರೆ ಈ ಕೃತ್ಯಗಳನ್ನು ವಿರೋಧಿಸುವ, ಅದನ್ನು ಬಯಲುಗೊಳಿಸುವ ಅಭಿಪ್ರಾಯಗಳು ನಮ್ಮ ನಾಡಿನಲ್ಲಿ ಪ್ರಬಲವಾಗಿವೆ. ಕೇವಲ ವಿವಿಧರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ಮುಖಂಡರು ಮಾತ್ರವಲ್ಲ ಜನಸಾಮಾನ್ಯರು ತೀವ್ರವಾದ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ನಮ್ಮ ದಿನಪತ್ರಿಕೆಗಳ ಓದುಗರು ಪತ್ರಗಳ ಮೂಲಕ ದಿಟ್ಟವಾಗಿ ಉತ್ತರಿಸಿದ್ದಾರೆ. ಆಯ್ದ ಕೆಲವು ಇಲ್ಲಿವೆ.

ನಮ್ಮ ಆಯೋಗ ಸಂವಿಧಾನವನ್ನು ಬದಲಾಯಿಸುವಂತಿಲ್ಲ. ಜನ ಪ್ರತಿನಿಧಿಗಳಷ್ಟೇ ಈ ಕಾರ್ಯವನ್ನು ಮಾಡಲು ಸಾಧ್ಯ. ನಮ್ಮ ಕೆಲಸವೇನಿದ್ದರೂ ಕಾರ್ಯಸೂಚಿಯ ಮಟ್ಟಕ್ಕಷ್ಟೇ.

ಈ ಆಯೋಗದ ಅಧ್ಯಕ್ಷನಾಗಿ ಕೆಲಸ ಮಾಡಲು ನನ್ನ ಎರಡು ಶರತ್ತುಗಳಿವೆ. ಒಂದು ಈಗಿರುವ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಒಳಗೊಂಡು ಮೂಲಭೂತ ಮಾರ್ಪಾಡು ಆಗಕೂಡದು, ಎರಡನೆಯದಾಗಿ ಈ ಆಯೋಗದ ಇತರ ಸದಸ್ಯರು ರಾಜಕೀಯ ವ್ಯಕ್ತಿಗಳಾಗಿರಬಾರದು.

ಜಾಗತಿಕ ಆರ್ಥಿಕತೆಯನ್ನು ನಿಭಾಯಿಸಬೇಕಾದ ಪರಿ ಹಾಗೂ ವಿಜ್ಞಾನ, ತಂತ್ರಜ್ಞಾನ, ಅನುವಂಶೀಯತೆ, ಮಾಹಿತಿ ತಂತ್ರಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ದೇಶವನ್ನು ಸಿದ್ಧಗೊಳಿಸುವ, ತಯಾರಿಯಲ್ಲಿರಿಸುವ ದೃಷ್ಟಿಯಲ್ಲಿ ಅಧ್ಯಯನ ನಡೆಸಬೇಕಾಗಿದೆ ಹಾಗೂ ಸಂದರ್ಭ ಅದನ್ನು ಬೇಡುತ್ತಿದೆ ಹಾಗೂ ಒತ್ತಾಯಿಸುತ್ತಿದೆ.

- **ಮಾಜಿ ನ್ಯಾಯಮೂರ್ತಿ ಎಂ.ಎಸ್ ವೆಂಕಟಚಾಲಯ್ಯ**

★ ★ ★

ಸಂವಿಧಾನದ ಮೂಲ ಆಶಯವಾದ ಜಾತ್ಯಾತೀತಗೆ ಧಕ್ಕೆ ತರುವ ರೀತಿಯಲ್ಲಿ ಸಂವಿಧಾನಕ್ಕೆ ಬದಲಾವಣೆ ತರುವ ಪ್ರಯತ್ನ ಸಾಗಿದೆ. ಜಾತ್ಯಾತೀತತೆ ಎಂಬುದು ನಮ್ಮ ರಾಜ್ಯಾಂಗದ ಮೂಲತತ್ವವಾಗಿದ್ದು ಈ ಹಿಂದೆ ಪ್ರಜಾಪ್ರಭುತ್ವಕ್ಕೆ ಆತಂಕತಂದ ರೀತಿಯಲ್ಲಿ ಈಗ ಜಾತ್ಯಾತೀತತೆಗೆ ಆತಂಕ ಎದುರಾಗಿದೆ. ಬೊಮ್ಮಾಯಿ ಪ್ರಕರಣವೊಂದನ್ನು ಮುಂದೆ ಮಾಡುತ್ತಾ 365ನೇ ಕಲಂನ ಮಾರ್ಪಾಟಿನ ಕುರಿತು ಮಂಡಿಸುತ್ತಿರುವ ವಾದ ಸರಿಯಾಗಿಲ್ಲ. ಪ್ರಜಾಪ್ರಭುತ್ವ ಮತ್ತು ಜಾತ್ಯಾತೀತತೆಯ ಬಲವಾದ ಹಿನ್ನೆಲೆಯಿರುವುದರಿಂದಲೇ ಭಾರತದ ಸ್ವಾತಂತ್ರ್ಯತೆ ಇಲ್ಲಿಯವರೆಗೂ ಉಳಿದುಕೊಂಡು ಬರಲು ಸಾಧ್ಯವಾಗಿದೆ.

ಕುಲದೀಪ್ ನಯ್ಯರ್, ಹಿರಿಯಪತ್ರಕರ್ತ

★ ★ ★

ಈಗಿರುವ ಸಂವಿಧಾನದಲ್ಲಿ ಯಾವುದೇ ರೀತಿಯ ಲೋಪ ಇದೆ ಎಂದು ನನಗನ್ನಿಸುತ್ತಿಲ್ಲ. ಕಳೆದ 45 ವರ್ಷಗಳಿಂದ ಸಂವಿಧಾನದ ವಿದ್ಯಾರ್ಥಿಯಾಗಿ ನನಗೆ ಇದರ ಎಲ್ಲಾ ಅಂಶಗಳೂ ಗೊತ್ತು. ಕೇಂದ್ರ ಸರ್ಕಾರ ಇದರ ಬದಲಾವಣೆಗಾಗಿ ಮಂಡಿಸುತ್ತಿರುವ ವಾದ ಅರ್ಥಹೀನ ಎನಿಸುತ್ತದೆ.

ಉದಾರೀಕರಣವನ್ನು ಅತ್ಯಂತ ಉತ್ಸಾಹದಿಂದ ಜಾರಿಗೊಳಿಸಿ ಭಾರತದ ವರ್ಗ ಮತ್ತು ಜಾತಿ ವ್ಯವಸ್ಥೆಯಲ್ಲಿರುವ ಅಂತರಗಳನ್ನು ಉಲ್ಬಣಗೊಳಿಸುತ್ತಿರುವ ಹಿಂದುತ್ವವಾದಿಗಳು ಸಂವಿಧಾನದ ಪರಾಮರ್ಶೆಯ ಹೆಸರಿನಲ್ಲಿ ಈ ಅಂತರಗಳನ್ನು ಶಾಶ್ವತಗೊಳಿಸುವ ಮುಸುಕಿನ ಕಾರ್ಯಕ್ರಮ ನಡೆಸಿದ್ದಾರೆ.

- **ಪ್ರೊ. ಎಂ.ಡಿ.ನಂಜುಂಡಸ್ವಾಮಿ**,
ರಾಜ್ಯ ರೈತ ಸಂಘದ ಅಧ್ಯಕ್ಷ

★ ★ ★

ರಾಷ್ಟ್ರಪತಿಯವರು ಹೇಳಿರುವಂತೆ ಈ ವೈಫಲ್ಯ ಹೇಗಾಯಿತು? ಎಲ್ಲಿ ಸೋತೆವು? ಈ ಪ್ರಶ್ನೆಗಳಿಗೆ ಉತ್ತರ ಹುಡುಕುವ ಬದಲು ಸಂವಿಧಾನದತ್ತ ಬೆರಳು ಮಾಡುವುದು ಈಗಿನ ರಾಜಕಾರಣದ ಒಂದು ಶೋಕಿಯೇ ಆಗಿದೆ.

.... ಸಂವಿಧಾನದ ಮೂಲಕ ರಾಜಕೀಯ ಸಿದ್ಧಾಂತಗಳು ಮತ್ತು ಪಕ್ಷಗಳನ್ನು ನಿಯಂತ್ರಿಸುವ ಅಪ್ರಜಾಸತ್ತಾತ್ಮಕ ಕ್ರಮಕ್ಕಿಂತ ರಾಜಕೀಯ ಧ್ರುವೀಕರಣ ಮತ್ತು ಪಕ್ಷಗಳ ವಿಚಾರವನ್ನು ಮತದಾರರುಮತ್ತು ರಾಜಕಾರಣಿಗಳೇ ನಿರ್ಧರಿಸುವುದು ಉತ್ತಮ ಮಾರ್ಗವಾಗುತ್ತದೆ. ಇದಕ್ಕೆ ಸಂವಿಧಾನದ ತಿದ್ದುಪಡಿಯಾಗಲೀ ಪರಿಷ್ಕರಣೆಯಾಗಲೀ ಅಗತ್ಯವಿಲ್ಲ. ಇನ್ನು ಲೋಕಸಭೆಗೆ ನಿಶ್ಚಿತ ಕಾಲಾವಧಿ ಇರಬೇಕೆಂಬುದು ಪ್ರಜಾಪ್ರಭುತ್ವದ ಮೂಲ ಸ್ವರೂಪಕ್ಕೆ ಧಕ್ಕೆ ತರುವಂಥ ಮಾತು. ಇದೆಲ್ಲ ಸಂವಿಧಾನ ಪರಿಷ್ಕರಿಸುವ ನೆಪದಲ್ಲಿ ಅದರ ಜಾತ್ಯಾತೀತ ಸ್ವರೂಪವನ್ನು ಬದಲಿಸಿ ಹಿಂದುತ್ವದ ರಹಸ್ಯ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುವ ಹುನ್ನಾರ ಎಂಬ ಶಂಕೆಯೂ ಗಾಢವಾಗಿದೆ.

ವಾಸ್ತವವಾಗಿ ನಮ್ಮ ಸಂವಿಧಾನಕ್ಕೆ ಅಂಥ ವ್ಯಾಪಕ ಪರಿಷ್ಕಾರ ಬೇಕಾಗಿಲ್ಲ. ರಾಷ್ಟ್ರಪತಿಯವರು ಸೂಚಿಸುವ ನ್ಯಾಯಗಳನ್ನೊದಗಿಸಲು ಈಗಿನ ಸ್ವರೂಪದಲ್ಲೇ ಸಂವಿಧಾನದಲ್ಲಿ ಸಾಕಷ್ಟು ಆಸ್ಪದ, ಅವಕಾಶಗಳಿದ್ದು ನಮ್ಮ ಸಂವಿಧಾನ ಜಾತ್ಯಾತೀತ ಮೌಲ್ಯಗಳು ಹಾಗೂ ಜನಪರ ಆಶಯಗಳನ್ನು ಹೊಂದಿರುವ ಮಾನವೀಯ ಸಂವಿಧಾನವಾಗಿದೆ.

ಪ್ರಜಾವಾಣಿ,
ಜನವರಿ 27 ರ ಸಂಪಾದಕೀಯ

★ ★ ★

ಸಂವಿಧಾನದ ಆರ್ಥಿಕ-ಸಾಮಾಜಿಕ ನೆಲೆಗಟ್ಟನ್ನು ಬದಲಿಸುವ ಯಾವುದೇ ಯತ್ನಗಳು ಬಿಎಸ್‌ಪಿ ಸಹಿಸುವುದಿಲ್ಲ. ಸಂಸದೀಯ ವ್ಯವಸ್ಥೆಯ ಸರಕಾರದ ಹೊಣೆಗಾರಿಕೆ ಸೇರಿದಂತೆ ಸಂವಿಧಾನದ ಮೂಲ ಕಲ್ಪನೆಯನ್ನು ರಕ್ಷಿಸಲು ತಮ್ಮ ಪಕ್ಷ ಕೈಲಾದ ಪ್ರಯತ್ನ ಮಾಡುವುದು .

ಸಮಾಜದ ಕೆಳವರ್ಗಗಳನ್ನು ರಕ್ಷಿಸುವ ಸಂವಿಧಾನದ ಪ್ರಮುಖ ಅಂಶಗಳನ್ನು ಬದಲಿಸುವ ಮೂಲಕ ಅಧಿಕಾರದಲ್ಲಿ ಮುಂದುವರಿಯಲು ಅಲ್ಪಸಂಖ್ಯಾತ ಬಿಜೆಪಿ ಸರಕಾರ ಮಾಡಿರುವ ಸಂಚನ್ನು ಸಂಸತ್ತಿನಲ್ಲಿ ಬೀದಿಗಳಲ್ಲಿ ಬಹಿರಂಗಗೊಳಿಸಲಾಗುವುದು ಸಂವಿಧಾನ ಪುನರಾವಲೋಕನಕ್ಕೆ ಬಿಜೆಪಿ ತೋರುತ್ತಿರುವ 'ಅವಸರ' ಕುರಿತು ಸಂಶಯವಿದೆ. ಸರಕಾರ ತನ್ನ ಉದ್ದೇಶವನ್ನು ಸಂಸತ್ತಿನಲ್ಲಿ ಯಾಕೆ ಪ್ರಸ್ತಾಪಿಸಲಿಲ್ಲ, ಯಾಕೆ ಸರ್ವ ಪಕ್ಷ ಸಭೆ ಕರೆಯಲಿಲ್ಲ.

- **ಕಾನ್ಶಿರಾಂ**, ಬಿಎಸ್‌ಪಿ ಮುಖಂಡರು.

★ ★ ★

50 ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಲು ವಿಫಲವಾಗಿರುವ ಕೇಂದ್ರ ಸರ್ಕಾರವು ಇದರ ಪರಾಮರ್ಶೆಯ ಮಾತನ್ನು ಆಡುತ್ತಿರುವುದು ಮನುವಿನ ಕಾಲಕ್ಕೆ ಹಿಂದಿರುಗುವ ಮಾರ್ದನಿಯಾಗಿ ಕೇಳಿಬರುತ್ತಿದೆ. ಪರಾಮರ್ಶೆ ಮಾತನ್ನು ಆಡುತ್ತಿರುವುದು ಕೋಮುವಾದದ ಮುಂದುವರೆದ ರೂಪದ ಕರಾಳ ಛಾಯೆಯಲ್ಲದೆ ಮತ್ತೇನೂ ಅಲ್ಲ ಎಂಬುದು ಮಿಡಿನಾಗರುಗಳ ಹರಿದಾಡುವಿಕೆಯಲ್ಲಿ ಸ್ಪಷ್ಟವಾಗುತ್ತಿದೆ.

ಕಾ.ವೆಂ.ಶ್ರೀನಿವಾಸಮೂರ್ತಿ, ಕೋಲಾರ

★ ★ ★

ಸಂವಿಧಾನಕ್ಕೆ ಅನೇಕ ಸಲ ತಿದ್ದುಪಡಿ ತರಲಾಗಿದೆ. ಈಗ ಅದನ್ನು ಸಂಪೂರ್ಣ ಮಾರ್ಪಾಟು ಮಾಡಲು ಹೊರಟಿರುವುದು ಸರಿಯಲ್ಲ.

ಎಸ್.ಎಂ.ಕೃಷ್ಣ
ಮುಖ್ಯಮಂತ್ರಿಗಳು

★ ★ ★

ರಾಷ್ಟ್ರಪತಿಗಳ ವಿರೋಧದ ನಡುವೆಯೂ ಸಂವಿಧಾನ ಪರಿಶೀಲನೆಗೆ ಕೈಹಾಕಿರುವ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ತಕ್ಷಣ ತನ್ನ ನಿರ್ಧಾರದಿಂದ ಹಿಂದಕ್ಕೆ ಸರಿಯಬೇಕು. ಸಂವಿಧಾನ ರಕ್ಷಣೆಗೆ ಎಲ್ಲಾ ದಲಿತ, ಹಿಂದುಳಿದ ಹಾಗೂ ಪ್ರಗತಿಪರ ಶಕ್ತಿಗಳು ಮುಂದಾಗಬೇಕು. ಸಂವಿಧಾನದ ಆಶಯಗಳು ಇನ್ನು ಜಾರಿಗೊಂಡಿಯೇ ಇಲ್ಲ ಅಷ್ಟರೊಳಗೆ ಅದನ್ನು ವಿಮರ್ಶೆಪಡಿಸುವುದು ಬೇಕಿಲ್ಲ. ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಬಹುಮಟ್ಟಿಗೆ ಸಾಧಿಸಲು ನಮ್ಮ ಸಂವಿಧಾನ ಪುಷ್ಟಿ ನೀಡುತ್ತದೆ.

- **ಡಿ.ಜಿ.ಸಾಗರ್**, ಡಿಎಸ್‌ಎಸ್ ಮುಖಂಡರು.

★ ★ ★

ಸಂವಿಧಾನದ ಪರಿಷ್ಕರಣೆಗೆ ಕೈಹಾಕಿರುವ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ಸಂವಿಧಾನದ ಸ್ಥಾನದಲ್ಲಿ ಮನುಸ್ಮೃತಿ, ಪಂಚಾಂಗವನ್ನು ತರಲು ಬಿಜೆಪಿ ಪ್ರಯತ್ನಿಸುತ್ತಿದೆ.

ಸಂವಿಧಾನದ ಪುನರ್ ಪರಿಷ್ಕರಣೆ ಈಗ ಅಗತ್ಯವಿಲ್ಲ. ಬೇಕಾದರೆ ತಿದ್ದುಪಡಿ ತರಲಿ. ಸಂವಿಧಾನ ಪರಿಷ್ಕರಣೆ ಹಿಂದೆ ವ್ಯವಸ್ಥಿತ ವಾದ ಷಡ್ಯಂತರವಿದೆ. ಮನುಧರ್ಮವನ್ನು ತರಲು ಸಂಘ ಪರಿವಾರ ಬಿಜೆಪಿ ಮೇಲೆ ಒತ್ತಡ ಹೇರುತ್ತಿದ್ದು, ವಿಶ್ವಹಿಂದೂ ಪರಿಷತ್, ಆರ್.ಎಸ್.ಎಸ್.ನ ಕೈಗೊಂಬೆಯಂತೆ ಕೇಂದ್ರ ಸರ್ಕಾರ ಆಡಳಿತ ನಡೆಸುತ್ತಿದೆ. ತಾನು ಮಾಡಿದ ತಪ್ಪುಗಳನ್ನು ಮುಚ್ಚಿಕೊಳ್ಳಲು ಹಾಗೂ ಜನರ ಗಮನವನ್ನು ಬೇರೆಡೆ ಸೆಳೆಯಲು ಕೇಂದ್ರ ಸರ್ಕಾರ ಸಂವಿಧಾನ ಪರಿಷ್ಕರಣೆ ಕಾರ್ಯಕ್ಕೆ ಕೈಹಾಕಿದೆ. ಅಧ್ಯಕ್ಷೀಯ ಮಾದರಿಯ ಸರ್ಕಾರ ತರಲು ಸಂವಿಧಾನ ಪರಿಷ್ಕರಣೆ ಮೂಲಕ ಯತ್ನಿಸುತ್ತಿದೆ. ಬಸವಣ್ಣನ ಅನುಯಾಯಿಗಳಾಗಿ ಶಿವನನ್ನು ಆರಾಧಿಸಬೇಕಾದವರು, ಅಯೋಧ್ಯೆಯಲ್ಲಿ ರಾಮನನ್ನು ಆರಾಧಿಸಲು ಹೊರಟಿದ್ದು ಅವರಿಗಿರುವ ಅಧಿಕಾರ ಲಾಲಸೆಯನ್ನು ತೋರಿಸುತ್ತದೆ.

- **ಎ.ಕೆ.ಸುಬ್ಬಯ್ಯ**

★ ★ ★

ಪ್ರಪಂಚದಲ್ಲಿಯೇ ಅತ್ಯುತ್ತಮ ಸಂವಿಧಾನವಾದ ನಮ್ಮ ದೇಶದ ಸಂವಿಧಾನ ಪುನರ್ ವಿಮರ್ಶೆ ಅನಾವಶ್ಯ. ಸಂವಿಧಾನ ಪುನರ್ರಚನೆಗೆ ವಾಜಪೇಯಿ ಒಂದು ಮತದಲ್ಲಿ ವಿಶ್ವಾಸ ಮತ ಸೋತ ಸಂದರ್ಭದಲ್ಲಿ ಅವರಲ್ಲಿ ಅಧ್ಯಕ್ಷೀಯ ಮಾದರಿ ಸರಕಾರ ಅಸ್ತಿತ್ವ ತರಬೇಕು ಎಂಬ ವಿಚಾರ ಬಂತು. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿ ಈ ಬಗ್ಗೆ ಚಿಂತನೆ ನಡೆಸಿದಾಗ ಅದನ್ನು ಪ್ರಬಲವಾಗಿ ವಿರೋಧಿಸಿದ ವಾಜಪೇಯಿ ಈಗ ಅದರತ್ತ ಒಲವು ಏಕೆ ತೋರುತ್ತಾರೆ.

ಆರ್.ಎಸ್.ಎಸ್.ಗೆ ಸಂವಿಧಾನ ಪುನರ್‌ವಿಮರ್ಶೆ ಅಗತ್ಯ ಇತ್ತು. ಆದರೆ ರಾಷ್ಟ್ರಪತಿಗಳು ಗಣರಾಜ್ಯೋತ್ಸವ ಸಂದರ್ಭ ಆಡಿದ ಮಾತುಗಳು ಸರಕಾರ ಕೈ ಇರುಸುಮುರುಸು ಉಂಟು ಮಾಡಿತು. ಆ ನಂತರವಷ್ಟೇ ಅದು ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ಬಾರದಂತೆ ಪುನರ್‌ವಿಮರ್ಶೆ ಮಾಡುವ ಬಗ್ಗೆ ಸ್ಪಷ್ಟೀಕರಣ ನೀಡಿತು. ಈಗ ಆಯೋಗ ರಚಿಸಿ ಅಧ್ಯಕ್ಷರ ನೇಮಕಾತಿ ಆಗಿದ್ದು, ಇದರ ನಿಬಂಧನೆಗಳು ಏನು ಎಂಬ ಬಗ್ಗೆ ಪ್ರಧಾನಿಗಳು ಉಭಯ ಸದನಗಳ ಜಂಟಿ ಸಮಿತಿ ರಚಿಸಿ ತೀರ್ಮಾನ ತೆಗೆದುಕೊಳ್ಳಲಿ. ಒಟ್ಟಿನಲ್ಲಿ ನಾನು ಸಂವಿಧಾನದ ವಿಧಿವಿಧಾನದಲ್ಲಿ ಸಣ್ಣಪುಟ್ಟ ಬದಲಾವಣೆಗೆ ಒಪ್ಪುವವನಿದ್ದು ಆಮೂಲಾಗ್ರ ಬದಲಾವಣೆಗೆ ಅಲ್ಲ.

- **ಎಂ.ಸಿ.ನಾಣಯ್ಯ**
ಮಾಜಿ ಕಾನೂನು ಸಚಿವ, ಕೊಡಗು

★ ★ ★

ಸಂವಿಧಾನ ನಮ್ಮ ಕೈಬಿಟ್ಟಿದೆಯೋ ಅಥವಾ ನಾವು ಸಂವಿಧಾನಕ್ಕೆ ದ್ರೋಹ ಬಗೆದಿದ್ದೇವೆಯೋ?' ಎಂಬ ರಾಷ್ಟ್ರಪತಿಗಳ ವಿಹ್ವಲತೆ ಈ ನಿಟ್ಟಿನಲ್ಲಿ ವೇದ್ಯವಾಗುವಂತಹದು!

ಆರ್.ಕೆ.ದಿವಾಕರ್, ಬೆಂಗಳೂರು

ಪುಟ 4 ಕ್ಕೆ

ವಾಸ್ತು ಚಿಕಿತ್ಸೆ

ಕಾಣಲಾಗಲಿಲ್ಲವಂತೆ ದೇಶ
ಇಲ್ಲಿತನಕ ಅಭಿವೃದ್ಧಿ,
ಸಿಕ್ಕಲಿಲ್ಲವಂತೆ ದೇಶದ
ಜನಕೆಲ್ಲ ನೆಮ್ಮದಿ!

ಅದಕ್ಕಾಗಿ ಸಂವಿಧಾನದ ಪರಾಮರ್ಶೆಯಂತೆ
ಗೌಡನ ಬಿಟ್ಟು ಅವನ
ಕಂಬಳಿಗೆ ಕಾಯಕಲ್ಪವಂತೆ!

ಕುಣಿಯೋಕೆ ಬಾರದವರು
ನೆಲ ಡೊಂಕೆಂದಂತೆ
ನಡೆ ನುಡಿ ಬದ್ಧತೆ ಇಲ್ಲದ ಜನಕೆ
ಸಂವಿಧಾನವೇ ಸೊಟ್ಟಂತೆ

ಕೈಲಾಗದವನು ಕೂತಲ್ಲೇ
ಮೈಪರಚಿಕೊಂಡ ಹಾಗೆ
ವಾಸ್ತು ದೋಷಾಂತ ಮನೆ ಬಾಗಿಲು
ಕಿಟಕಿ ಬದಲಾಯಿಸಿದ ಹಾಗೆ.

- **ಮಧು ಪೀಹಳ್ಳಿ**

ಸಂವಿಧಾನ ಅಂಗೀಕಾರಕ್ಕೆ ಸಹಿ ಹಾಕುತ್ತಿರುವ ಅಂಬೇಡ್ಕರ, ವಲ್ಲಭಾ ಭಾಯಿ ಪಟೇಲ್ ಮತ್ತಿತರರು



ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ:

ಪ.ಬಂಗಾಳದ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಸರಕಾರದ ಮುಂದೆ ಮಂಡಿಸಿದರು. ಮುಖ್ಯಮಂತ್ರಿ ಡಾ.
ರಾಯ್‌ರವರುಬಿಡಿಕೆ ಬಗ್ಗೆ ಸಹಾನುಭೂತಿ ತೋರಿಸುವುದಿರಲಿ ಹಿಂದಿನ ಒಪ್ಪಂದವನ್ನು
ಜಾರಿಗೊಳಿಸಲಾಗದೆಂದರು. ಮುಖ್ಯಮಂತ್ರಿಯೊಂದಿಗೆ ಚರ್ಚೆ ವಿಫಲವಾದಾಗ ಮುಷ್ಕರ ನಡೆಸುವ
ನಿರ್ಧಾರಕ್ಕೆ ಬಂದರು. ಮುಷ್ಕರ ಐತಿಹಾಸಿಕ, ಅಭೂತಪೂರ್ವವಾಗಿತ್ತು. ನಾಗರೀಕರೂ, ವಿವಿಧ
ಸಂಘಟನೆಗಳೂ ಬೆಂಬಲಕ್ಕೆ ನಿಂತವು. ಮುಷ್ಕರ ಮುರಿಯಲು ಹಲವು ಪ್ರಯತ್ನಗಳು, ದಬ್ಬಾಳಿಕೆ
ವಿಫಲವಾದವು. ಇದನ್ನು ಬೆಂಬಲಿಸಿದ ಜ್ಯೋತಿಬಸುರವರನ್ನು ಅಸೆಂಬ್ಲಿಯಿಂದ ಹೊರಬರುತ್ತಿದ್ದಂತೆ
ಬಂಧಿಸಲು ಪೋಲೀಸರು ಸಿದ್ಧತೆ ನಡೆಸಿದ್ದು ಕಳೆದವಾರ ಓದಿದ್ದೀರಿ. ಜನರ ಮೇಲೆ ಪೋಲೀಸರ
ಗೋಲಿಬಾರ್, ಆಳುವ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರಗಳು, ಜ್ಯೋತಿಬಸು ಬಂಧನ..... ಸೆರೆಮನೆ
ವಾಸ..... ಓದಿ

ಅಸೆಂಬ್ಲಿಯಲ್ಲೇ ವಾರ ಕಳೆದ ಬಸು

ಅಸೆಂಬ್ಲಿ ಆವರಣದಲ್ಲಿ ಫೆಬ್ರವರಿ 16 ರಂದು ನಡೆಯಬೇಕಿದ್ದ ಬೃಹತ್ ರ‍್ಯಾಲಿಯ ಯೋಜನೆಯಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ಸರಕಾರ 144ನೇ ಸೆಕ್ಷನ್ ಜಾರಿ ಮಾಡಿತು; ಇಡೀ ಪ್ರದೇಶ ಪೋಲೀಸ್ ಶಿಬಿರದಂತೆ ಕಾಣಿಸುತ್ತಿತ್ತು. ಲಾಠಿ, ರೈಫಲ್ ಮತ್ತು ಅಶ್ರುವಾಯುಗಳಿಂದ ಸನ್ನದ್ಧರಾಗಿದ್ದ ಪಡೆ ರ‍್ಯಾಲಿಯನ್ನು ವಿಫಲಗೊಳಿಸಲು ಸರ್ವಪ್ರಯತ್ನ ಮಾಡುತ್ತಿತ್ತು.

ಸದನದಲ್ಲಿ ಪ್ರಶ್ನೋತ್ತರ ಅವಧಿ ಮುಗಿದ ನಂತರ ನಾನು ಹೀಗೆಂದೆ 'ಪೋಲೀಸರು ಇಂದು ಮುಂಜಾನೆ ನಾಲ್ಕು ಗಂಟೆಗೆ ಬಂಧನದ ವಾರೆಂಟ್‌ನೊಂದಿಗೆ ನನ್ನ ಮನೆ ಮೇಲೆ ದಾಳಿ ಮಾಡಿದರು. ಇದು ಇಂಥ ಮೊದಲ ಘಟನೆಯಲ್ಲ; ನಾನು ನಿನ್ನೆ ರಾತ್ರಿ ಮನೆಯಲ್ಲಿ ಇಲ್ಲದಿದ್ದುದು ಹಾಗೂ ನನ್ನನ್ನು ಬಂಧಿಸಲು ಪೋಲೀಸರಿಗೆ ಆಗದಿದ್ದುದು ನನ್ನ ಅದೃಷ್ಟ ಹಾಗೂ ಈ ಸರಕಾರದ ದುರಾದೃಷ್ಟ. ಇವತ್ತಿನ ಅಧಿವೇಶನ ಮುಗಿಯುತ್ತಲೇ ನನ್ನ ಬಂಧನಕ್ಕೆ ಮುಖ್ಯಮಂತ್ರಿ ಕಾತರರಾಗಿದ್ದಾರೆ ಎಂಬುದು ನನಗೆ ಗೊತ್ತು".

ಆಗ ಮಧ್ಯ ಪ್ರವೇಶಿಸಿದ ಸ್ಪೀಕರ್ "ಈ ಸದನದಿಂದಲೇ" ಎಂದು ಪ್ರಶ್ನಿಸಿದರು. ಅದಕ್ಕೆ ನನ್ನ ಉತ್ತರ "ಇಲ್ಲ, ನಾನು ಈ ಸ್ಥಳ ಬಿಟ್ಟ ನಂತರ ನನ್ನನ್ನು ಬಂಧಿಸಲಾಗುತ್ತದೆ. ಮಣಿಕುಂತಲ ಸೇನ್, ಕನಯ್‌ಲಾಲ್ ಭಟ್ಟಾಚಾರ್ಯ ಮತ್ತು ಜ್ಯೋತಿಶ್ ಜೌವಾದ್‌ದಾರ್ ಅವರನ್ನು ಇದೇ ಕಾನೂನಿನ್ವಯ ಆಗಲೇ ಬಂಧಿಸಿರುವುದು ನಿಮಗೆ ಗೊತ್ತಿರಬಹುದು. ಇಂಥ ಸನ್ನಿವೇಶದಲ್ಲಿ, ಕೆಲವು ದಿನಗಳ ಕಾಲ ಅಸೆಂಬ್ಲಿ ಆವರಣದೊಳಗೆ ಇರಲು ನನಗೆ ಅನುಮತಿ ನೀಡಬೇಕೆಂದು ನಿಮ್ಮನ್ನು ಕೋರುತ್ತೇನೆ. ಬಜೆಟ್ ಅಧಿವೇಶನ ನಡೆಯುತ್ತಿದೆ. ಒಬ್ಬ ಶಾಸಕನಾಗಿ ನನ್ನ ಕ್ಷೇತ್ರ ಮತ್ತು ಜನತೆಯ ವಿಚಾರದಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಬೇಕು. ನನ್ನ ವಿರುದ್ಧದ ವಾರೆಂಟ್ ವಾಪಸು ಪಡೆಯುವವರೆಗೆ ಈ ಕೋಣೆಯಲ್ಲೇ ಇರಲು ನನಗೆ ಅನುಮತಿಯನ್ನು ಮಂಜೂರು ಮಾಡುತ್ತೀರೆಂದು ನಿರೀಕ್ಷಿಸುತ್ತೇನೆ"

ಕಾಂಗ್ರೆಸ್ಸಿಗರನ್ನು ದಂಗುಬಡಿಸಿದ ತೀರ್ಪು

'ಈ ಸದನ ನನ್ನದಲ್ಲ, ನಿಮ್ಮದು ಎಂದು ಶಾಸಕರಿಗೆ ನಾನು ಭರವಸೆ ನೀಡಬಲ್ಲೆ. ಯಾವುದೇ ಸದಸ್ಯ ಆಶ್ರಯಕ್ಕಾಗಿ ನನ್ನನ್ನು ಕೋರಿದರೆ ಅವರು ಇಲ್ಲಿ ಸುರಕ್ಷಿತವಾಗಿರುತ್ತಾರೆ, ಅವರು ಬಂಧಿತರಾಗುವುದಿಲ್ಲ. ಇದು ಎಲ್ಲ ಶಾಸಕರಿಗೆ ಅನ್ವಯವಾಗುತ್ತದೆ. ಇತರ ಶಾಸಕರಂತೆ ನಿಮಗೂ ಹಕ್ಕಿದೆ" ಎಂದು ಸ್ಪೀಕರ್ ಉತ್ತರಿಸಿದರು.

ಸ್ಪೀಕರ್‌ರ ಈ ಉತ್ತರದಿಂದ ಕಾಂಗ್ರೆಸ್ ಸದಸ್ಯರು ವಿಚಲಿತರಾದರು. ಮುಖ್ಯಮಂತ್ರಿ ಡಾ. ರಾಯ್ ಸ್ಪೀಕರ್‌ರನ್ನು ಖಂಡಿಸಿದರು ಎಂಬುದೂ ನನಗೆ ತಿಳಿದು ಬಂತು.

ಇಂತ ಸನ್ನಿವೇಶಗಳಲ್ಲಿ ನನ್ನನ್ನು ಬಂಧಿಸಬಹುದೇ ಎಂಬ ಬಗ್ಗೆ ಡಾ. ರಾಯ್ ಅಡ್ವಕೇಟ್ ಜನರಲ್ ಜತೆ ಚರ್ಚಿಸಿದರು. ನಮ್ಮ ಶಾಸಕ ಬಂಕಿಮ್ ಮುಖರ್ಜಿ ಈ ಮಾಹಿತಿ ನೀಡಿದರು. ನನ್ನನ್ನು ಬಂಧಿಸಲು ಕಾನೂನು ಪ್ರಕಾರ ಯಾರ ಅಡ್ಡಿಯೂ ಇಲ್ಲ; ಆದರೆ ಹಾಗೆ ಮಾಡುವುದು ವಿವೇಕದ ಕ್ರಮವಲ್ಲ ಎಂದು ಅಡ್ವಕೇಟ್ ಜನರಲ್ ಸಲಹೆ ಮಾಡಿದರು.

ಸುಮಾರು ಒಂದು ವಾರ ಕಾಲ ನಾನು ಅಸೆಂಬ್ಲಿಯಲ್ಲೇ ಉಳಿದೆ. ನನ್ನ ಮನೆ ಮತ್ತು ಸಂಗಾತಿಗಳು ಆಹಾರ ಕಳಿಸುತ್ತಿದ್ದರು. ನಾನೇನಾದರೂ ಕೈ ಕೊಡುವೆನೋ ಎಂಬ ಭಯದಿಂದ ಪೋಲೀಸರು ಅಸೆಂಬ್ಲಿ ಆವರಣದಿಂದ ಕಾಲ್ತೆಗೆಯಲಿಲ್ಲ.

ಫೆಬ್ರವರಿ 16 ರಂದು ಸುಮಾರು 40 ಸಾವಿರ ಜನರಿದ್ದ ರ‍್ಯಾಲಿಯನ್ನು ಅಸೆಂಬ್ಲಿ ಗೇಟಿನ ಹೊರಗಡೆ ತಡೆಯಲಾಯಿತು; ಪೋಲೀಸರು ಕಟ್ಟೆಚ್ಚರದಿಂದ ಇದ್ದರು. ಪ್ರತಿಭಟನಾಕಾರರು ನಿಷೇದಾಜ್ಞೆಯನ್ನು ಶಾಂತಿಯುತವಾಗಿ ಉಲ್ಲಂಘಿಸುತ್ತಿದ್ದಂತೆ ಪೋಲೀಸರು ಆಕ್ರಮಣ ಮಾಡಿದರು. ಆರಂಭದಲ್ಲಿ ಕಮ್ಯುನಿಸ್ಟ್ ಪಕ್ಷದ ಅಂಬಿಕಾ ಚಕ್ರವರ್ತಿ ಮತ್ತು ಎಸ್‌ಯುಸಿಐನ ಸುಬೋಧ್ ಬ್ಯಾನರ್ಜಿ ಮೊದಲಾದ ಮುಖಂಡರನ್ನು ಬಂಧಿಸಲಾಯಿತು.

ಆರು ಜನರ ಹತ್ಯೆ

ಇದಾದ ಮೇಲೆ ಯದ್ವಾತದ್ವಾವಾಗಿ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗ ಮಾಡಲಾಯಿತು. ಗೋಲೀಬಾರ್ ಕೂಡ ಮಾಡಲಾಯಿತು. ಅಸೆಂಬ್ಲಿ ಗೇಟಿನ ಹೊರಗಡೆ ಇವೆಲ್ಲ ನಡೆದದ್ದರಿಂದ ಅವೆಲ್ಲಕ್ಕೂ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ. ಪೋಲೀಸರ ದೌರ್ಜನ್ಯಕ್ಕೆ ಆರು ಜನರು ಬಲಿಯಾದರು. 157 ಮಂದಿ ಗಾಯಗೊಂಡರು. ಇಡೀ ನಗರದಲ್ಲಿ 144ನೇ ಸೆಕ್ಷನ್ ಅನ್ವಯ ನಿಷೇಧಾಜ್ಞೆ ಜಾರಿ ಮಾಡಲಾಯಿತು. ಆದರೆ ಅದರಿಂದ ಪ್ರತಿಭಟನೆಯ ಅಲೆಯನ್ನು ತಡೆಯಲು ಆಗಲಿಲ್ಲ.

ಮರುದಿನ ಕೂಡ ಸೇನೆ ಮತ್ತು ಪೋಲೀಸರು ತಮ್ಮ ಬರ್ಬರ ಕೃತ್ಯವನ್ನು ಮುಂದುವರಿಸಿದರು. ಗೋಲೀಬಾರ್ ಘಟನೆಗಳು ಮುಂದುವರಿದವು, 160 ಜನರನ್ನು ಬಂಧಿಸಲಾಯಿತು. ಅವುಗಳಿಗೆ ಪ್ರತಿಭಟನೆಯಾಗಿ ಬೀದಿ ಬದಿ ಸಭೆ, ರ‍್ಯಾಲಿಗಳು ನಡೆದವು. ಗಲ್ಲಿಗಳಲ್ಲಿ, ರಸ್ತೆಗಳಲ್ಲಿ ಜನರು ಅಡೆತಡೆಗಳನ್ನು ನಿರ್ಮಿಸಿದರು.

ಫೆ. 17 ರಂದು ಎಲ್ಲ ಪ್ರತಿಪಕ್ಷ ಗುಂಪುಗಳ ನಾಯಕರು ನಿಲುವಳಿ ಸೂಚನೆಗಳನ್ನು ಮಂಡಿಸಿದರು; ಸ್ಪೀಕರ್ ನನ್ನ ಸೂಚನೆಯನ್ನು ಅಂಗೀಕರಿಸಿದರು. 1952 ರಲ್ಲಿ ಅಸೆಂಬ್ಲಿ ರಚನೆ ಆದಂದಿನಿಂದ ನಿಲುವಳಿ ಸೂಚನೆಯೊಂದು ಅಂಗೀಕಾರವಾಗಿದ್ದು ಇದೇ ಮೊದಲು. ಪೋಲೀಸ್ ದೌರ್ಜನ್ಯವನ್ನು ನಾನು ಖಂಡ ತುಂಡವಾಗಿ ವಿರೋಧಿಸಿ ಖಂಡಿಸಿದಾಗ ಇಡೀ ಪ್ರತಿಪಕ್ಷ ನನ್ನನ್ನು ಬೆಂಬಲಿಸಿತು.

ನನ್ನ ಭಾಷಣ ಆದ ನಂತರ, ನಮ್ಮ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ಸಿಗರನ್ನು ನಾನು ಕೋರಿದೆ. ನಗರದಲ್ಲಿ ಪೋಲೀಸ್ ದೌರ್ಜನ್ಯ ನಡೆದ ಅವಧಿಯುದ್ದಕ್ಕೂ ವಿಧಾನಸಭೆಯ ಒಳಗೆ ನಾವು ಜವಾಬ್ದಾರಿಯುತ ಪ್ರತಿಪಕ್ಷವಾಗಿ ಕೆಲಸ ಮಾಡಿದೆವು.

ಮತ್ತೆ ಸೆರೆಮನೆಗೆ...

ಬಜೆಟ್ ಮೇಲಿನ ಚರ್ಚೆಗಳು ಮುಗಿದ ನಂತರ, ನಾನು ಅಸೆಂಬ್ಲಿಯಿಂದ ಹೊರಬರಲು ಇದು ಸಕಾಲ ಎಂದು ಪಕ್ಷ ನಿರ್ಧರಿಸಿತು. ಆ ಹೊತ್ತಿಗೆ ನಾನು ಸಾಧಿಸಬೇಕು ಎಂದಿದ್ದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದ್ದೆ. ನನ್ನ ವಿರುದ್ಧದ ಬಂಧನದ ವಾರೆಂಟ್ ಇನ್ನು ಜಾರಿಯಲ್ಲಿತ್ತು. ನಾನು ಡಾ|. ನಾರಾಯಣನ್ ರಾಯರ ಕಾರಿನಲ್ಲಿ ಮೈದಾನದತ್ತ ತೆರಳಿದೆ. ತಕ್ಷಣವೇ ಕೆಲವು ಪೋಲೀಸ್ ವಾಹನಗಳು ರೆಡ್ ರೋಡಿನಲ್ಲಿ ನಮ್ಮ ಕಾರನ್ನು ಸುತ್ತುವರಿದವು. ನನ್ನನ್ನು ಬಂಧಿಸಿ ಸೆರೆಮನೆಗೆ ಕಳಿಸಲಾಯಿತು. ವಿಚಾರಣೆಯಿಲ್ಲದೆಯೇ ನಾನು ಒಂದು ವಾರ ಜೈಲಿನಲ್ಲಿದ್ದೆ. ಅದರ ನಂತರ ಇತರರ ಜತೆ ನನ್ನನ್ನು ಬಿಡುಗಡೆ ಮಾಡಲಾಯಿತು. ಶಿಕ್ಷಕರ 12 ದಿನಗಳ ಮುಷ್ಕರ ಫೆಬ್ರವರಿ 21 ರಂದು ಅಂತ್ಯಗೊಂಡಿತು. ಎಲ್ಲ ಶಿಕ್ಷಕರು ಮತ್ತು ಇತರ ಸತ್ಯಾಗ್ರಹಿ ಪ್ರತಿಭಟನಾಕಾರರನ್ನು ಮುಖ್ಯಮಂತ್ರಿ ಬಿಡುಗಡೆ ಮಾಡಿದರು.

ಶಿಕ್ಷಕರ ಮುಷ್ಕರ ವಿಫಲವಾಗಿರಲಿಲ್ಲ. ಎಲ್ಲ ಬೇಡಿಕೆಗಳು ಈಡೇರದಿದ್ದರೂ ಮನಸ್ಸಿಲ್ಲದ ಸರಕಾರವನ್ನು ಮಣಿಸಿ ಸ್ವಲ್ಪವಾದರೂ ಪಾಲನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದೆವು ಎಂದು ಶಿಕ್ಷಕ ವೃಂದ ಹೆಮ್ಮೆಯಿಂದ ಹೇಳಿಕೊಳ್ಳಬಹುದಿತ್ತು. ಇದರಲ್ಲಿ ನಮ್ಮ ಪಕ್ಷ ಮಹತ್ವದ ಪಾತ್ರ ವಹಿಸಿತು.

(ಮುಂದುವರಿಯುವುದು)

ಸಂವಿಧಾನ ಪರಾಮರ್ಶೆ: ಅಭಿಪ್ರಾಯಗಳು

ಪುಟ 3 ರಿಂದ

ರಾಜಕೀಯ ಅಸ್ಥಿರತೆಯನ್ನು ನಾವು, ಮಹೋನ್ನತ ನಾಯಕರು ರಾಷ್ಟ್ರದ ಸರ್ವಹಿತಕ್ಕಾಗಿ ರಚಿಸಿದ ಸಂವಿಧಾನದೊಂದಿಗೆ ಹೋಲಿಸುವುದು ಸಮಂಜಸವೆನಿಸದು, ರಾಜಕಾರಣಿಗಳ ಅವಕಾಶವಾದಿತನದ ನಡವಳಿಕೆ, ಸ್ವಾರ್ಥಗಳಿಂದಾಗಿ ಬದಲಾದ ರಾಜಕೀಯ ವ್ಯವಸ್ಥೆಯಾವುದೇ ರೀತಿಯ ಸಂವಿಧಾನ ಅಸ್ತಿತ್ವಕ್ಕೆ ಬಂದರೂ ಕೂಡಾ ಅಭದ್ರ ಸ್ಥಿತಿ, ಅಸ್ಥಿರತೆ ಮುಂದುವರೆಯುವುದು ಖಂಡಿತ.

ಹೆಚ್ಚುತ್ತಿರುವ ಭ್ರಷ್ಟಾಚಾರ, ಅಪರಾಧ, ಕೊಲೆ-ಸುಲಿಗೆಗಳನ್ನು, ಅನೇಕಾನೇಕ ಹಗರಣಗಳು ಇತ್ಯಾದಿಗಳಿಂದ ಜನಮನಕ್ಕೆ ರೋಸಿಹೋಗಿವೆ. ಇಂತಹ ಸಂದರ್ಭಗಳಲ್ಲಿ ಬಿಗಿಯಾದ ಧೋರಣೆಯನ್ನು ಅನುಸರಿಸುವ ಅಗತ್ಯವಿದೆ. ಇವೆಲ್ಲಕ್ಕಿಂತ ಮಿಗಿಲಾಗಿ ನಮ್ಮ ಸಂವಿಧಾನದ ಮೂಲತತ್ವಗಳನ್ನು ಸರಿಯಾದ ನಿಟ್ಟಿನಲ್ಲಿ ಜಾರಿಗೆ ತರುವ ಅಗತ್ಯವಿದೆ. ಸಂವಿಧಾನ ತಿದ್ದುಪಡಿ ಯಾವುದೇ ಕಾರಣಕ್ಕೂ ರಾಜಕೀಯವಾಗಬಾರದು.

- ಗುಮ್ಮಹೊಲ ನವೀನ್ ಅಲೋಸಿಯಸ್,
ಕುಂದಾಪುರ.

★ ★ ★

ನಮ್ಮ ಸಂವಿಧಾನಕ್ಕೆ 80 ತಿದ್ದುಪಡಿಗಳನ್ನು ಮಾಡಿಕೊಂಡಿದ್ದಾಗಿದೆ. ಆದರೂ ಸಹ ಸಮಾನತೆಯ ಹಕ್ಕು ಇದುವರೆಗೂ ಲಭ್ಯವಾಗದೇ ಇರುವುದು ಖೇದದ ಸಂಗತಿ. ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಒಂದೊಂದು ಉದ್ಯೋಗ, ಒಂದು ಸೂರು ಒದಗಿಸಿದರೆ ಸಾಕು. ಕೇಂದ್ರ ಸರ್ಕಾರ ಪರಾಮರ್ಶೆ ಆಯೋಗವನ್ನು ಮುಂದುವರಿಸಿದರೆ, ಈ ದೇಶದ ಬಡಜನತೆಯ ಆಕ್ರೋಶಕ್ಕೆ ಬಲಿಯಾಗುವ ಕಾಲ ದೂರವಿಲ್ಲ.


- ಆಟೋರಾಜು, ಅಶೋಕ್ ಕುಮಾರ್.ಜಿ.,
ಬೆಂಗಳೂರು

★ ★ ★

ಐವತ್ತು ವರ್ಷಗಳಾಗಿವೆ ಎಂಬ ಕಾರಣಕ್ಕೆ ಇದನ್ನು ಬದಲಾಯಿಸಬೇಕೆಂದರೆ, ಇನ್ನೂರು ವರ್ಷಗಳ ಇತಿಹಾಸವುಳ್ಳ ಅಮೆರಿಕಾ ಸಂವಿಧಾನವನ್ನು ಎಷ್ಟು ಬಾರಿ ಬದಲಾಯಿಸಬೇಕಿತ್ತು. ಈಗಿನ ಕೇಂದ್ರ ಸರ್ಕಾರಕ್ಕೆ ಯಾವುದೇ ರೀತಿಯ ಸ್ಪಷ್ಟ ಕಾರ್ಯಕ್ರಮಗಳಿಲ್ಲ. ಜನರ ಗಮನ ಬೇರೆಡೆ ಸೆಳೆಯುವ ದೃಷ್ಟಿಯಿಂದ ಇಂತಹ ಪ್ರಯತ್ನ ಮಾಡುತ್ತಿದೆ. ಅಣುಬಾಂಬ್, ಕಾರ್ಗಿಲ್ ಮತ್ತು ಕಂದಹಾರ್ ನಂತರ ಈಗ ಈ ವಿಷಯ ಸಿಕ್ಕಿದೆ ಅಷ್ಟೇ

- ಎಲ್.ಜಿ.ಹಾವನೂರು,
ಕಾನೂನು ತಜ್ಞರು.

★ ★ ★



ಸಂವಿಧಾನ ಬದಲಾವಣೆ ಮಾಡಬೇಕೆನ್ನುವ ಪರಿಸ್ಥಿತಿಈಗ ಉದ್ಭವಿಸಿಲ್ಲ. ಸಂವಿಧಾನದ ಮೂಲತತ್ವಗಳನ್ನು ಜಾರಿಗೆ ತರಲಾಗದ ಸರ್ಕಾರ ಅಣುಬಾಂಬ್ ನಂತರ ಅಪಾಡಭೂತಿ ಕಾರ್ಯಕ್ರಮಗಳಲ್ಲಿ ನಿರತವಾಗಿದೆ. ಸಂವಿಧಾನ ಇರುವುದು ಸರ್ಕಾರಕ್ಕೆ ಸ್ಥಿರತೆ ನೀಡಲು ಅಲ್ಲ. ಬದಲಾಗಿ ಒಂದು ಸಮಾಜಕ್ಕೆ ಸ್ಥಿರತೆ ನೀಡಲು. ಸಂವಿಧಾನ ರಕ್ಷಣೆಯ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸುವ ಯಾರೇ ಆಗಲಿ ಸಂವಿಧಾನ ಬದಲಾವಣೆಯಂತಹ ಮಾತು ಆಡಬಾರದು.

ಪ್ರೊ. ರವಿವರ್ಮ ಕುಮಾರ್, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು.

★ ★ ★

ಸಂವಿಧಾನದ ರಾಜ್ಯ ನಿರ್ದೇಶನ ತತ್ವಗಳನ್ನಾದರೂ ಸಮಗ್ರವಾಗಿ ಜಾರಿಗೊಳಿಸಿದ್ದಿದ್ದರೆ ನಮ್ಮೆಲ್ಲರ ಬದುಕು ಕೂಡಾ ಹೀಗಿರುತ್ತಿರಲಿಲ್ಲ. ಅಂದ ಮೇಲೆ ಈಗ ಸಂವಿಧಾನ ಪರಾಮರ್ಶೆಯ ಅವಶ್ಯಕತೆ ಕೂಡ ಉದ್ಭವಿಸಿಲ್ಲ. ಅದಕ್ಕಿಂತ ಮೊದಲು ದೇಶದಲ್ಲಿ ಇಲ್ಲಿ ತನಕ ಸಾಧಿಸಲಾಗದ್ದನ್ನು ಸಾಧಿಸಲಿ. ಪ್ರತಿಯೊಂದಕ್ಕೂ ಸಂವಿಧಾನವನ್ನೇ ದೂಷಿಸಿದರೆ ತಪ್ಪಾದೀತು. ಆವಾಗ ನಮ್ಮ ಸ್ಥಿತಿ ಹೇಗಿರುತ್ತದೆ ಎಂದರೆ 'ನಯವಾದ ಕತ್ತರಿ ಇದ್ದರೂ ಸುಂದರವಾದ ಅರವಿ ಕತ್ತರಿಸಲಾಗದ ಮೂರ್ಖನಿಗೆ ಇವೆರಡೂ ಡೊಂಕಾಗಿ ಕಾಣಿಸುತ್ತದೆ' ಹೀಗೆ ನಮ್ಮ ಪರಾಮರ್ಶೆ ಕಾರ್ಯ ನಡೆಯಬಾರದು.

- ದಾಸನೂರು ಕೂಸಣ್ಣ

★ ★ ★

ಸಾಮಾಜಿಕ ವ್ಯವಸ್ಥೆಯ ಜತೆ ರಾಷ್ಟ್ರಪತಿಗಳು ಕೇಂದ್ರದಲ್ಲಿನ ಬಿಜೆಪಿ ಸರ್ಕಾರವನ್ನು ಸಹ ತರಾಟೆಗೆ ತೆಗೆದುಕೊಂಡಿದ್ದಾರೆ. ಮಹಿಳೆಯರು ಮತ್ತು ದಲಿತ ವರ್ಗದವರಿಗೆ ನ್ಯಾಯ ದೊರಕಿಸಿಕೊಡುವ ಬದಲು ರಾಜ್ಯಾಂಗದಲ್ಲಿ ಮಾರ್ಪಾಡಿಗೆ ಸರ್ಕಾರ ಹುನ್ನಾರ ನಡೆಸಿರುವುದು ಯಾವ ವಿಧದಲ್ಲಿಯೂ ಸಮರ್ಥನೀಯವಾಗಿಲ್ಲ ಎಂದು ಅವರು ಹೇಳಿದಂತಿದೆ. ಸಂವಿಧಾನ ಕರ್ತೃಗಳ ದೂರದೃಷ್ಟಿಗೆ ಅವರ ಸಲ್ಲಿಸಿದ ನಮನವು ಅದರಲ್ಲಿ ಬದಲಾವಣೆ ಮಾಡಲು ಹೊರಟಿರುವ ಚಿಂತನೆಗೆ ಛೀಮಾರಿ ಎಂದು ಅರ್ಥೈಸಬಹುದು.

ಸಂಯುಕ್ತ ಕರ್ನಾಟಕ, ಜನವರಿ 27 ರ ಸಂಪಾದಕೀಯ

ಈಗಾಗಲೇ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡಲಾಗಿದೆ ಎಂಬ ನೆಪವೊಡ್ಡಿ ಪರಾಮರ್ಶೆಗೆ ಕೈಹಾಕಿರುವುದು ಕುತಂತ್ರವೇ ಸರಿ. ಸಂವಿದಾನದಲ್ಲಿ ಯಾವುದೇ ಕುಂದುಕೊರತೆಗಳು ಗೋಚರವಾಗಿದ್ದರೆ ಮೊದಲು ಅವುಗಳನ್ನು ಚರ್ಚೆಗೆ ಒಳಪಡಿಸಬೇಕು. ಆದರೆ ಇತ್ತೀಚಿಗಷ್ಟೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಸಂವಿಧಾನದಲ್ಲಿನ ಕುಂದುಕೊರತೆಗಳ ಸ್ಪಷ್ಟ ಅರಿವು ಇರಲು ಸಾಧ್ಯವೇ ಇಲ್ಲ. ತಿದ್ದುಪಡಿಗಳು ಜೀವನದ ಬದುಕಿನಲ್ಲಿ ಸಾಮರಸ್ಯ ಕಾಣಲು ಅನಿವಾರ್ಯ. ಆದರೆ ಪರಾಮರ್ಶೆ ಎಂಬುದು ದಿಕ್ಕು ತಪ್ಪಿಸುವ ವಿಚಾರವಾಗಿದೆ.

- ರಾಷ್ಟ್ರೀಯ ರಂಗ, ಕರ್ನಾಟಕ

★ ★ ★

ಸಂವಿಧಾನ ಪುನರ್ ವಿಮರ್ಶೆ ಪ್ರಯತ್ನವನ್ನು ದೇಶದ ಹಿಂದುಳಿದ ವರ್ಗಗಳು ತೀವ್ರವಾಗಿ ವಿರೋಧಿಸುತ್ತವೆ.

- ಅಖಿಲ ಭಾರತ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಸಂಘಗಳ ಒಕ್ಕೂಟ

★ ★ ★

ಸಂವಿಧಾನ ಪರಾಮರ್ಶೆ ಮಾಡುವ ಪ್ರಸ್ತಾವನೆಗೆ ಪ್ರತಿಕ್ರಿಯೆಯಾಗಿ ವಾಜಪೇಯಿ ಸರಕಾರದ ನಿರ್ಧಾರದ ಬದ್ಧತೆಯಾದರೂ ಏನು?

- ಕಲ್ಯಾಣ್ ಸಿಂಗ್

ಒಬ್ಬ ಬಡ ರೈತ, ಬಡ ವ್ಯಾಪಾರಿ ತಾನು ನೀಡಬೇಕಾದ5-10,000 ಸಾಲ ನೀಡದಿದ್ದರೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಂತಹವು ಮನೆಗೆ ನುಗ್ಗಿ ರೈತನ ಚಿರಾಸ್ಥಿಗಳನ್ನು ವಶಪಡಿಸಿಕೊಳ್ಳುತ್ತಾರೆ. ಹರಾಜು ಹಾಕುತ್ತಾರೆ. ಸರ್ಕಾರಕೆ ಕಟ್ಟಬೇಕಾದ ಬಾಕಿ ನೀಡದಿದ್ದರೆ ಅವನಿಗೆ ಸರ್ಕಾರದ ಎಲ್ಲ ಸವಲತ್ತುಗಳನ್ನು ನಿಲ್ಲಿಸುತ್ತಾರೆ. ಜಪ್ತಿ ಮುಂತಾದ ಕ್ರಮಗಳಿಗೂ ಮುಂದಾಗುತ್ತಾರೆ. ಇದು ದಿನನಿತ್ಯದ ಅನುಭವ.

ಏನಿಲ್ಲದಿದ್ದರೂ ಇವರಿಗೊಂದು ಬ್ಯಾಂಕೂ ಸಾಲ ಕೊಡದೆ ಖಾಸಗಿ ಬಡ್ಡಿ ಸಾಹುಕಾರರ ಬಲೆಗೆ ಬೀಳುವಂತೆ ತಿಂಗಳಿಗೆ ಶೇ 5 ರಿಂದ 8 ರ ಬಡ್ಡಿ ತೆತ್ತು ದಿವಾಳಿಯಾಗುವಂತೆ, ಹೀಗೆ ಖಾಸಗಿಯವರಿಂದ ಪಡೆದ ಸಾಲ ವಸೂಲಾತಿಗಾಗಿ ಬಡ್ಡಿ ಸಾಹುಕಾರರು ನಡೆಸುವ ದೌರ್ಜನ್ಯದ ಕ್ರಮಗಳಿಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವುದು, ತಮ್ಮ ಆಸ್ತಿಯನ್ನೆಲ್ಲಾ ಧಾರೆಯೆರೆದು ಊರು ಬಿಟ್ಟು ಓಡಿ ಬರುವಂತೆ ಮಾಡುತ್ತಾರೆ. ಆತ್ಮಹತ್ಯೆಯದೇ ಸಾವಿರಾರು ಪ್ರಕರಣಗಳು ಇಂದು ದೇಶದಲ್ಲಿ ವರದಿಯಾಗಿವೆ.

ಆದರೆ ಇದು ಕೇವಲ ಸಾವಿರಗಟ್ಟಲೇ ಸಾಲದ ಪಡೆದವರಿಗೆ ಮಾತ್ರ ಅನ್ವಯವಾಗುವ ಕಾನೂನುಗಳು. ಈ ಸಾಲ ಕೋಟಿಗಟ್ಟಲೇ ಪ್ರಮಾಣ ಮುಟ್ಟಿಬಿಟ್ಟರೆ ನಿಮಗೆ ಈ ಯಾವ ಕಾನೂನು ಕ್ರಮಗಳೂ ಕಂಗೆಡುವಂತಹ ಪರಿಸ್ಥಿತಿಯೂ ಎದುರಾಗುವುದಿಲ್ಲ. ಮಾತ್ರವಲ್ಲ ಅದು ಬ್ಯಾಂಕ್‌ಗಳ ಬಳಿಯಿರುವ ನಿರುಪಯುಕ್ತ ಆಸ್ತಿ ಎಂದು ಪರಿಗಣಿತವಾಗಿ ಬಿಡುತ್ತದೆ. ಇಡೀ ಸಾಲ ಅಘೋಷಿತವಾಗಿ ಮನ್ನಾ ಆಗಿ ಬಿಡು ವಂತಾಗುತ್ತದೆ. ಇಂತಹ ಸಾಲದ ಮೊತ್ತ 58000 ಕೋಟಿ ರೂ. ಅದೇ ಸಣ್ಣ ರೈತರ ಸಾಲಮನ್ನಾಕ್ಕಾಗಿ ವಿ.ಪಿ.ಸಿಂಗ್ ಸರ್ಕಾರ ಕ್ರಮಕೈಗೊಂಡರೆ ಪತ್ರಿಕೆಗಳು ದೇಶವೇ ನಾಶವಾಗಿ ಹೋಯಿತು ಎಂಬ ಬೊಬ್ಬೆ ಹೊಡೆಯುತ್ತವೆ. ಜನತಾದಳ ಸರ್ಕಾರ (1994 ರಲ್ಲಿ) ಕೇವಲ ಚಕ್ರಬಡ್ಡಿ ಮನ್ನಾ ಮಾಡಲು ಬಯಸಿದರೆ ರಿಸರ್ವ್ ಬ್ಯಾಂಕ್ ಅದನ್ನು ತಳ್ಳಿ ಹಾಕುತ್ತದೆ. ಕರ್ನಾಟಕಕ್ಕೆ ಆದರ ಸಹಕಾರಿ ಸಂಸ್ಥೆಗಳಿಗೆ ಒಂದು ಪೈಸೆ ಸಾಲ ನೀಡುವುದಿಲ್ಲ ಎಂದು ಬೆದರಿಕೆ ಹಾಕುತ್ತದೆ. ಆದರೆ ಈ ದೊಡ್ಡ ಪ್ರಮಾಣದ ಸಾಲ ವಾಪಸಾಗದ ಬಗ್ಗೆ ಪತ್ರಿಕೆಗಳು ಮಾತನಾಡುವುದಿಲ್ಲ, ಸರ್ಕಾರ ಗಪ್‌ಚಿಪ್

ಬ್ಯಾಂಕ್ ನುಂಗುವ ಭೂಪರು

ಬಾಲಕೃಷ್ಣ ಶೆಟ್ಟಿ

ಸ್ವಾತಂತ್ರ್ಯ ಸಿಕ್ಕಿದ 50 ಚಿಲ್ಲರೆ ವರ್ಷಗಳಲ್ಲಿ ದೇಶವು ಅಭಿವೃದ್ಧಿಯನ್ನು ಸಾಧಿಸಿದೆ. ಹಲವು ರೀತಿಯ ಪ್ರಗತಿಯನ್ನು ಕಂಡಿದೆ. ವಿಜ್ಞಾನ, ತಂತ್ರಜ್ಞಾನ ಬೆಳೆದಿದೆ. ಆದರೆ ಎಲ್ಲಾ ಬೆಳವಣಿಗೆಗಳ ಪ್ರಮುಖ ಲಾಭ ದೇಶದ ದೊಡ್ಡ ಕೈಗಾರಿಕೋದ್ಯಮಿಗಳ, ಸಿರಿವಂತರ ಪಾಲಾಗಿದೆ.


ಒಂದೆಡೆ ಕಾರ್ಮಿಕರನ್ನು, ನೌಕರರನ್ನು ಶೋಷಣೆ ಮಾಡಿ ತಮ್ಮ ಲಾಭವನ್ನು, ಆಸ್ತಿಯನ್ನು ಹೆಚ್ಚಿಸಿಕೊಂಡ ಶ್ರೀಮಂತ ಕೈಗಾರಿಕೋದ್ಯಮಿಗಳು ಇನ್ನೊಂದೆಡೆಯಲ್ಲಿ ಸರಕಾರಿ ಬ್ಯಾಂಕುಗಳಿಂದ ಸಾಲ ಪಡೆದು ಅದನ್ನು ಹಿಂದಿರುಗಿಸದೆ, ಸರಕಾರಕ್ಕೆ ಪಾವತಿ ಮಾಡಬೇಕಾದ ತೆರಿಗೆಯನ್ನು ಪಾವತಿ ಮಾಡದೆ ತಮ್ಮ ಅಕ್ರಮ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾರೆ. ಹೀಗೆ ಬ್ಯಾಂಕುಗಳಿಗೆ ಪಾವತಿ ಮಾಡದ ಸಾಲ 58000 ಕೋಟಿ ರೂ. ಹಾಗೂ ತೆರಿಗೆ ಬಾಕಿ 41,320 ಕೋಟಿ ರೂ. (ಒಟ್ಟು 99,320 ಕೋಟಿ ರೂ) ಎಂದರೆ ದಿಗ್‌ಭ್ರಮೆಯಾಗುತ್ತದೆ. ಆದರೆ ಇದು ಸತ್ಯ. ಬಹುಶಃ 99.320 ಕೋಟಿ ರೂ. ಅಥವಾ 1 ಲಕ್ಷ ಕೋಟಿ ರೂ. ಎಂದರೆ ಎಷ್ಟು ಎಂಬುದು 'ಐಕ್ಯರಂಗ'ದ ಅನೇಕ ಓದುಗರ ಯೋಚನೆಗೆ ಎಟುಕಲಾರದು. ಕರ್ನಾಟಕ ರಾಜ್ಯದ ಹಿಂದುಳಿದ ಜಿಲ್ಲೆಗಳಿಗೆ ಕುಡಿಯುವ ನೀರು, ರೈತರ ಬೆಳೆಗೆ ನೀರಾವರಿ, ವಿದ್ಯುತ್ ಮುಂತಾದವನ್ನು ಒದಗಿಸಬಲ್ಲ ಕೃಷ್ಣಾ ಕೊಳ್ಳದ ಯೋಜನೆಗೆ ತಗಲುವ ಒಟ್ಟು ಅಂದಾಜು ವೆಚ್ಚ 10,000 ಕೋಟಿ ರೂ. (ಇದರಲ್ಲಿ ಅಧಿಕಾರಿಗಳ, ಕಂಟ್ರಾಕ್ಟುದಾರರ ಭ್ರಷ್ಟಾಚಾರವೂ ಸೇರಿ) ಅಂದರೆ ಈ ದೇಶದ ಶ್ರೀಮಂತರು ಬ್ಯಾಂಕಿನಿಂದ ಪಡೆದ ಸಾಲ ಮತ್ತು

ಕೋಷ್ಟಕ - 1		
ಸಾಲ ಪಡೆದ ಕಂಪನಿ ಹೆಸರು	ಬ್ಯಾಂಕು	ಸಾಲ ಬಾಕಿ ಕೋಟಿ ರೂ.ಗಳಲ್ಲಿ
ಏಸಿಯಾನ್ ಸಿಂಥೆಟಿಕ್ಸ್ ಲಿ.	ಬ್ಯಾಂಕ್ ಆಫ್ ಇಂಡಿಯಾ	15.71
ಜೆ.ಕೆ.ಸಿಂಥಟಿಕ್ಸ್ ಕಾನ್ಪುರ	ಸೆಂಟ್ರಲ್ ಬ್ಯಾಂಕ್	38.30
ಜೆ.ಕೆ.ಕಾಟನ್, ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್	ಪಂಜಾಬ್ ನ್ಯಾಷನಲ್ ಬ್ಯಾಂಕ್	24.51
ಜೆ.ಕೆ.ಸಿಂಥಟಿಕ್ಸ್ ಕಾನ್ಪುರ	ಸಿಂಡಿಕೇಟ್ ಬ್ಯಾಂಕ್	13.73
ಏಸಿಯಾನ್ ಸಿಂಥಟಿಕ್ಸ್ ಲಿ.	ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ	13.78
ಜೆ.ಕೆ.ಸಿಂಥಟಿಕ್ಸ್-ಕಾನ್ಪುರ	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ	82.50
ಜೆ.ಕೆ.ಸಿಂಥಟಿಕ್ಸ್ - ಕಾನ್ಪುರ	ಐಸಿಐಸಿಐ	76.87

ನೀಡಿದರೆ ದೇಶದಾದ್ಯಂತ ಹತ್ತು ಕೃಷ್ಣಾ ಕಾಲುವೆಯಂತಹ ಬೃಹತ್ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸಾಧ್ಯವಿದೆ.

ಕರ್ನಾಟಕದ ಪ್ರಮುಖ ಬ್ಯಾಂಕ್ ನೌಕರರ ಸಂಘಟನೆಯೊಂದು (ಕೆ.ಪಿ.ಬಿ.ಇ.ಎಫ್) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 10 ಕೋಟಿ ರೂ.ಗಳಿಗಿಂತ ಜಾಸ್ತಿ ಸಾಲ ಪಡೆದು ವಾಪಾಸು ಮಾಡದ ದೊಡ್ಡ ಕೈಗಾರಿಕೆಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಇಂತಹ ಸಾಲವನ್ನು ಬ್ಯಾಂಕುಗಳು ಬಳಸುವ ಭಾಷೆಗಳಲ್ಲಿ ಎನ್.ಪಿ.ಎ. ಅಥವಾ Non-perfoming Assets ಎನ್ನುತ್ತಾರೆ. ಅಥವಾ 'ವಾಪಸು ಬಾರದ ಸಾಲ' ಅಥವಾ ಕೆಟ್ಟ ಸಾಲ ಎಂದು ಹೇಳಬಹುದು. ಅದರ ಪ್ರಕಾರ 25 ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 541 ಸಾಲ ಖಾತೆಗಳಲ್ಲಿ 13,260 ಕೋಟಿ ರೂ. ಸಿಲುಕಿಕೊಂಡಿದೆ. ಒಂದೇ ಕೈಗಾರಿಕೆ ಹಲವು ಬ್ಯಾಂಕುಗಳಲ್ಲಿ, ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದುಕೊಂಡಿದ್ದರೆ, ಕೆಲವು ಉದ್ಯಮಿಗಳು ಬೇರೆ ಬೇರೆ ಹೆಸರಿನ ಕಂಪನಿಗಳನ್ನು ತೆರೆದು ಹಲವು ಕಡೆ ಸಾಲವನ್ನು ಪಡೆದಿರುತ್ತಾರೆ.

ಉದಾಹರಣೆಗೆ ರಾಜ್ಯದ ಪ್ರಮುಖ ಉದ್ಯಮಿ ವಿಜಯ ಮಲ್ಯ 'ಯು.ಬಿ.' ಎಂದು ಪ್ರಖ್ಯಾತವಾಗಿರುವ ಯುನೈಟೆಡ್ ಬ್ರಿವೇರಿಸ್ ಮಾಲಕರು. ಕೆಲವು ವರ್ಷಗಳ ಹಿಂದೆ ಸರಕಾರಿ ಒಡೆತನದಲ್ಲಿದ್ದ ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್(ಎಂ.ಸಿ.ಎಫ್) ಕಾರ್ಖಾನೆಯನ್ನು ಕಡಿಮೆ ಬೆಲೆಗೆ ಕೊಂಡರು. ಅದನ್ನು ಕೊಳ್ಳುವಾಗ ಸ್ವಂತ ಹಣವನ್ನೇನೂ ಹಾಕಲಿಲ್ಲ. ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ಗಳಿಂದ ಸಾಲ ಪಡೆದರು. ಕಂಪನಿ ನಷ್ಟದಲ್ಲಿದೆ ಎಂಬ ಕಾರಣ ನೀಡಿ ಸಾಲ ವಾಪಸು ಮಾಡಿಲ್ಲ. ಒಟ್ಟು ಮೊತ್ತ ಎಷ್ಟು ಗೊತ್ತೆ? 31.3.99 ರ ಹೊತ್ತಿಗೆ ಸಿಂಡಿಕೇಟ್ ಬ್ಯಾಂಕ್‌ನಲ್ಲಿ 47.44 ಕೋಟಿ ರೂ ಮತ್ತು ಕೆನರಾ ಬ್ಯಾಂಕ್‌ನಲ್ಲಿ11.97 ಕೋಟಿ ರೂ.


ವಿಜಯ್ ಮಲ್ಯ

ಜೆ.ಕೆ.ಸಿಂಥಟಿಕ್ಸ್, ಜೆ.ಕೆ.ಕಾಟನ್ ಮಿಲ್ಸ್ ಮೊದಲಾದ ಕಂಪನಿಗಳನ್ನು ನಡೆಸುತ್ತಿರುವ ಸಿಂಘಾನಿಯ ಕುಟುಂಬದವರು ಕೋಷ್ಟಕ1 ರಲ್ಲಿ ಕೊಟ್ಟಿರುವ ಬ್ಯಾಂಕುಗಳಲ್ಲಿ ಸಾಲ ಪಡೆದು ವಾಪಸು ನೀಡಲಿಲ್ಲ. ಆದರೆ ಇವರು ದೇಶದ ಪ್ರಥಮ ಐವತ್ತು ಶ್ರೀಮಂತರಲ್ಲಿ ಒಬ್ಬರು.

ಎಂ.ಎಸ್. ರಾಮಯ್ಯ ಆಸ್ಪತ್ರೆ ಬೆಂಗಳೂರು ನಗರದ ಪ್ರಮುಖ ಆಸ್ಪತ್ರೆಗಳಲ್ಲೊಂದು. ವೈದಕೀಯ, ಇಂಜಿನಿಯರಿಂಗ್, ಡೆಂಟಲ್ ವಿದ್ಯಾ ಸಂಸ್ಥೆಗಳೂ ಇವೆ. ವಿದ್ಯಾರ್ಥಿಗಳಿಂದ ಲಕ್ಷಗಟ್ಟಳೆ ಡೊನೇಷನ್ ಫೀ ವಸೂಲಿ ಮಾಡುತ್ತ ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ವಂಚಿಸುತ್ತಾ ಬಂದ ಸಂಸ್ಥೆ. ಇದರ ಮಾಲೀಕರ ಮನೆ ನಗರದ ಯಶವಂತ ಪುರ ಪ್ರದೇಶದ ಗೋಕುಲಂನಲ್ಲಿದೆ. ಹತ್ತಾರು ವರ್ಷಗಳ ಹಿಂದೆ ಆರಂಭವಾದ ಮನೆ ಕಟ್ಟುವ ನಿರ್ಮಾಣ ಕಾರ್ಯ ಇನ್ನೂ ಮುಗಿದಿಲ್ಲ. ಕಟ್ಟಿಸುವುದು, ಬೀಳಿಸುವುದು ಹೀಗೆ ನಡೆದಿದೆ. ಗೋಕುಲಂನಲ್ಲಿರುವ ಎಂ.ಎಸ್. ರಾಮಯ್ಯನವರ ಮನೆ ಅರಮನೆಗಳನ್ನು ಮೀರಿಸುವ ವೈಭವದಿಂದ ಕೂಡಿದೆ. ಇವರ ಮಗ ಎಂ.ಆರ್.ಜಯರಾಂ ಅಧ್ಯಕ್ಷರಾಗಿರುವ ವಿಷ್ಣು ಫೋರ್ಜ್ ಲಿ. ಕಂಪನಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ 11.06 ಕೋಟಿ ರೂ. ಬಾಕಿ ಇರಿಸಿದ್ದಾರೆ. ಬೃಂದಾವನ್ ಅಲೊಯ್ಸ್ ಲಿ. ಸಿಂಡಿಕೇಟ್ ಬ್ಯಾಂಕಿಗೆ 34.78 ಕೋಟಿರೂ. ತೆರಬೇಕಾಗಿದೆ.

ದಕ್ಷಿಣ ಕನ್ನಡ ಮೂಲದವರಾಗಿದ್ದು ಈಗ ಮುಂಬೈಯಲ್ಲಿ ಪ್ರಖ್ಯಾತ ಉದ್ಯಮಿಯಾಗಿರುವ ಎಸ್.ಎಂ.ಶೆಟ್ಟರು 'ಎಸ್.ಎಂ.ಡ್ವಕೆಮ್' ಎನ್ನುವ ಕಂಪನಿಯ ಡೈರಕ್ಟರುಗಳಲ್ಲೊಬ್ಬರು. ಅವರು ನಡೆಸುತ್ತಿರುವ ವಿವಿಧ ಕಂಪನಿಗಳು ಬ್ಯಾಂಕುಗಳಿಗೆ ನೀಡಬೇಕಾಗಿರುವ ಸಾಲ ಬಾಕಿಯಾಗಿರುವ ನಿರುತ್ಪಾದಕ ಆಸ್ತಿಯ ಮೊತ್ತ

261.22 ಕೋಟಿ ರೂ. ಅವುಗಳ ವಿವರಗ ಕೆಳಗಿನಂತಿದೆ.


ವಿಜಯಬ್ಯಾಂಕಿಗೆ	10.54ಕೋಟಿ
ಕೆನರಾ ಬ್ಯಾಂಕ್	22.70
ಅಬುದಾಬಿ ಕಮರ್ಶಿಯಲ್ ಬ್ಯಾಂಕ್	11.96
ಐಸಿಐಸಿಐ ಬ್ಯಾಂಕ್	47.43
ಐಡಿಬಿಐ ಬ್ಯಾಂಕ್	84.08
ಐಎಫ್‌ಸಿಐ ಬ್ಯಾಂಕ್	20.53
ಸ್ಟೇಟ್‌ಬ್ಯಾಂಕ್ ಆಫ ಇಂಡಿಯಾ	30.69
ಇಂಡಿಯನ್ ಬ್ಯಾಂಕ್	33.29
ಒಟ್ಟು	261.22

ಇದಲ್ಲದೆ ಶೇರು ಬಂಡವಾಳದ ಮೂಲಕ ಸಾರ್ವಜನಿಕರಿಂದ 200 ಕೋಟಿ ರೂ.ಗೂ ಜಾಸ್ತಿ ಸಂಗ್ರಹಿಸಲಾಗಿದೆ. ಜತೆಯಲ್ಲಿ ಇನ್ನು ಹಲವಾರು ಹಣಕಾಸು ಸಂಘಗಳಿಗೆ ನೂರಾರು ಕೋಟಿ ರೂ. ನೀಡಬೇಕಾಗಿದೆ.

ಬೆಂಗಳೂರಿನ 'ಫೋರೆಸ್' ಕಾರ್ಮಿಕರ ಗೂಂಡಾಗಳ ಧಾಳಿ ಎದುರಿಸಿದುದು, ಮಾಲಕರು ಸುಳ್ಳು ಪೋಲೀಸ್ ಮೊಕದ್ದಮೆಗಳನ್ನು ಹೇರಿದ್ದು 'ಐಕ್ಯರಂಗ' ಓದುಗರಿಗೆ ತಿಳಿದಿದ್ದು ಇದರ ಮಾಲಕರಾದ ಎಸ್.ಎಸ್.ಶೆಟ್ಟಿಯವರು ಮುಂಬೈನಲ್ಲಿ ಫೋರೆಸ್ ಇಂಜಿನಿಯರಿಂಗ್(ಇ) ಲಿಮಿಟೆಡ್ ಎನ್ನುವ ಇನ್ನೊಂದು ಸಂಸ್ಥೆ ಹೊಂದಿರುತ್ತಾರೆ. ಆ ಸಂಸ್ಥೆ ಸ್ಟೇಟ್ ಬ್ಯಾಂಕ್ ಆಪ್ ಇಂಡಿಯಾಕ್ಕೆ 30.89 ಕೋಟಿ ರೂ. ನೀಡಬೇಕಾಗಿದೆ. ಒಂದೆಡೆ ಕಾರ್ಮಿಕರಿಗೆ ಕಡಿಮೆ ಸಂಬಳನೀಡಿ, ಅವರ ಬೆವರಿನಿಂದ, ಬುದ್ಧಿಶಕ್ತಿಯಿಂದ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಈ ಮಾಲಕರು ಜನರು ಕಷ್ಟಪಟ್ಟು ಉಳಿತಾಯ ಮಾಡಿದ ಬ್ಯಾಂಕಿನಲ್ಲಿರುವ ಹಣವನ್ನು ಸಾಲವಾಗಿ ಪಡೆದು ಅದನ್ನು ಹಿಂದಿರುಗಿಸದೆ ವಂಚಿಸುತ್ತಾರೆ. ತಮ್ಮ ಖಾಸಗಿ ಆಸ್ತಿಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಬ್ಯಾಂಕುಗಳ ಮುಳುಗಡೆಗೂ ಕಾರಣರಾಗುತ್ತಾರೆ.

ಶೇರು ಹಗರಣದ 'ಗೂಳಿ' ಎಂದು ಪ್ರಖ್ಯಾತರಾಗಿರುವ ಹರ್ಷದ್ ಮೆಹ್ತಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ 81208 ಕೋಟಿ ರೂ. ನೀಡಬೇಕಾಗಿದೆ. ಬೃಹತ್ತಾಗಿ ಬೆಳೆದಿರುವ ರಾಷ್ಟ್ರೀಕೃತ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಗೂಳಿಯ ಅಟ್ಟಹಾಸವನ್ನು ತಡೆದುಕೊಂಡಿತು. ಅಂದರೆ ದಿವಾಳಿಯಾಗಲಿಲ್ಲ. ಆದರೆ ಬ್ಯಾಂಕ್ ಆಫ್ ರಲ್ನಾಡ್ ಅನ್ನುವ ಖಾಸಗಿ ಬ್ಯಾಂಕ್ ಮುಳುಗಡೆಯಾಯಿತು. 300 ಕ್ಕೂ ಹೆಚ್ಚು ಬ್ಯಾಂಕ್ ನೌಕರರ ಕುಟುಂಬಗಳು ಬೀದಿಪಾಲಾದವು. ಲಕ್ಷಾಂತರ ಜನರ, ನಿವೃತ್ತರ ಠೇವಣಿ ಇನ್ನೂ ಅವರಿಗೆ ಸಿಕ್ಕಿಲ್ಲ.

ನವುಸ್ತೆ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಚರ್ಮದ ಸಿದ್ದುಡುಪುಗಳಿಗೆ ಹೆಸರಾದ ಸಂಸ್ಥೆ. ರಫ್ತು ವ್ಯವಹಾರದಲ್ಲಿ ಹೇರಳ ಲಾಭ ಗಳಿಸಿ


ಹರ್ಷದ್ ಮೇಹ್ತಾ

ಪ್ರಶಸ್ತಿಯನ್ನು ಗಳಿಸಿದವರು. ಆದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ 24.65 ಕೋಟಿ ರೂ. ಮತ್ತು ಕೆನರಾಬ್ಯಾಂಕಿಗೆ 10.25 ಕೋಟಿ ರೂ. ಸಾಲ ವಾಪಸು ನೀಡಿಲ್ಲ.

ಆಶ್ಚರ್ಯದ ಸಂಗತಿಯೆಂದರೆ ಮೇಲೆ ಹೇಳಿದ ಅಥವಾ ಇನ್ನಾವುದೇ 'ಎನ್.ಪಿ.ಎ' ಸಾಲಗಳು ಕಳೆದ 4-5 ವರ್ಷಗಳಿಂದ ವಾಪಸು ಬಾರದಿದ್ದರೂ ಅದರ ವಸೂಲಿಗೆ ತೀವ್ರವಾದ ಪ್ರಯತ್ನಗಳಿಲ್ಲ. ಕಾರ್ಮಿಕರ ಕಾನೂನು ಹಳೆಯದಾಗಿದೆ, ಬದಲಾದ ಪರಿಸ್ಥಿತಿಗೆ ಸರಿಯಾಗಿ ತಿದ್ದುಪಡಿ ತರಬೇಕು' ಎಂದುಬಯಸುವ ಬಿಜೆಪಿ ಸರಕಾರ, ರಾಷ್ಟ್ರೀಕೃತ ಬ್ಯಾಂಕುಗಳಿಗೆ ಬರಬೇಕಾದ ಸಾಲ ವಸೂಲಾತಿಗೆ ಬೇಕಾದ ಕಾನೂನು ತಿದ್ದುಪಡಿಗಳನ್ನು ಮಾಡುತ್ತಿಲ್ಲ. ಮಾಡುವುದೂ

ಪುಟ 15 ಕ್ಕೆ

ಶ್ರೀಯುತ ಅಟಲ ಬಿಹಾರಿ ವಾಜಪೇಯಿಯವರಿಗೆ ಈ ಲೇಖನದ ಆರಂಭದಲ್ಲೇ ಧನ್ಯವಾದ ಅರ್ಪಿಸಬೇಕು. ಏಕೆಂದರೆ ಕೊನೆಗೂ ಅವರು ತಮ್ಮ ಮುಖವಾಡ ಕಳಚಿದ್ದಾರೆ. ರಾಷ್ಟ್ರೀಯ ಅಜೆಂಡಾ ಅಂಗೀಕರಿಸಿ ಕಳೆದ ಆರು ತಿಂಗಳು ತೊಟ್ಟಿದ್ದ ಛದ್ಮವೇಷವನ್ನು ಈಗ ತೊರೆದಿದ್ದಾರೆ. ಈಗ ಅದರ ಜಾಗದಲ್ಲಿ ಕಾಣುತ್ತಿದೆ ನಿಜವಾದ ಅಜೆಂಡಾ, ಇದುವರೆಗೆ ಬಚ್ಚಿಟ್ಟಿದ್ದ ಅಜೆಂಡಾ. ಗುಜರಾತಿನ ಬಗ್ಗೆ ವಾಜಪೇಯಿಯವರ ಹೇಳಿಕೆ ನಮಗೆಲ್ಲಾ ಯಾವ ಭಯವಿತ್ತೋ ಅದನ್ನು ಸಾಬೀತುಮಾಡಿದೆ.

ವಾಜಪೇಯಿ ಮುಖವಾಡ ಕಳಚಿ ಬಿದ್ದಿದೆ

ಹರ್ಕಿಶನ್ ಸಿಂಗ್ ಸುರ್ಜಿತ್

ಸರಕಾರೀ ನೌಕರರು ಆರ್.ಎಸ್.ಎಸ್. ಚಟುವಟಿಕೆಗಳಲ್ಲಿ ಭಾಗವಹಿಸಲು ಇದ್ದ ನಿಷೇಧವನ್ನು ತೆಗೆದ ಗುಜರಾತ್ ಸರಕಾರದ ಕ್ರಮವನ್ನು ಪ್ರಧಾನಿಗಳು ಸಮರ್ಥಿಸಿದ್ದು ಸ್ವಾಭಾವಿಕವೇ. ಏಕೆಂದರೆ ಆ ಸರಕಾರವನ್ನು ನಡೆಸುತ್ತಿರುವಂತದ್ದು ವಾಜಪೇಯಿಯವರ ಬಿಜೆಪಿ ಪಕ್ಷ. ಅಷ್ಟೇ ಅಲ್ಲ, ಆರ್.ಎಸ್.ಎಸ್.ನ ಪತ್ರಿಕೆ 'ಆರ್ಗನೈಸರ್' ನ ಮೇ 7, 1995 ರ ಅವರ ಲೇಖನದ ಶಿರೋನಾಮೆಯೇ ಸಾರಿದಂತೆ ಆರ್.ಎಸ್.ಎಸ್. ಅವರ 'ಆತ್ಮ' ತಾನೆ. ನವದೆಹಲಿಯಲ್ಲಿ ಕಳೆದ ವಾರ ವಿಶ್ವ ಪುಸ್ತಕ ಮೇಳವನ್ನು ಉದ್ಘಾಟಿಸಿದ ನಂತರ ಪತ್ರಕರ್ತರೊಡನೆ ಮಾತನಾಡುತ್ತಾ ಆರ್.ಎಸ್.ಎಸ್. ಒಂದು ರಾಜಕೀಯ ಸಂಘಟನೆಯಲ್ಲ, 'ಸಾಮಾಜಿಕ ಸಂಘಟನೆ' ಎಂದರಂತೆ. ಅವರ ಈ ವಂಚನೆಯ ಮಾತಲ್ಲಿ ಆಶ್ಚರ್ಯವೇನಿಲ್ಲ. ಈ ವಂಚನೆ, ಎರಡು ನಾಲಗೆ ಆರ್.ಎಸ್.ಎಸ್. ಪರಂಪರೆಗೆ ಅನುಗುಣವಾಗಿಯೇ ಇದೆ.

ಸುಳ್ಳಿನ ಮೊರೆ ಹೋಗಿರುವ ಪ್ರಧಾನಿ

ವಾಜಪೇಯಿಯವರ ಈ ಸಮರ್ಥನೆ ಕಳೆದ ಮೇ ತಿಂಗಳಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರವಹಿಸಿದಂದಿನಿಂದ ನಡೆದ ಹಲವಾರು ಘಟನೆಗಳ ಹಿನ್ನೆಲೆಯಲ್ಲಿ ಬಂದಿದೆ. ಮೊದಲು ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯನ್ನು ಆರ್.ಎಸ್.ಎಸ್. ವ್ಯಕ್ತಿಗಳಿಂದ ತುಂಬಲಾಯಿತು. ನಂತರ 'ಪ್ರಸಾರ ಭಾರತಿ' ಯಿಂದ ರೊಮಿಲಾ ಥಾಪರ್ ಮತ್ತು ರಾಜೇಂದ್ರ ಯಾದವ್‌ರನ್ನು ಕಿತ್ತುಹಾಕಲಾಯಿತು. ಬಿಜೆಪಿಯ ರಾಜ್ಯ ಸರಕಾರಗಳು ಇದರಿಂದ ಪ್ರೇರಣೆ ಪಡೆದವು. ಉತ್ತರ ಪ್ರದೇಶದ ಮುಖ್ಯಮಂತ್ರಿ ಪೀಠಕ್ಕೆ ಹೊಸದಾಗಿ ಏರಿದ ವ್ಯಕ್ತಿ ರಾಜ್ಯದಲ್ಲಿ ಹೊಸ ಮಸೀದಿಗಳನ್ನು ಕಟ್ಟಲು ಅನುಮತಿ ನಿರಾಕರಿಸುವ ಉದ್ದೇಶದ ಒಂದು ಮಸೂದೆ ಪಾಸು ಮಾಡಿಸಿದರು. ನಂತರ ವಿ.ಹೆಚ್.ಪಿ. ಮತ್ತು ಇತರ ಸಂಘಟನೆಗಳು ಬಯಸಿದರೆ ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟಬಹುದು ಎಂದರು. ನಂತರ ಬಂತು ಗುಜರಾತಿನಲ್ಲಿ ಆರ್.ಎಸ್.ಎಸ್. ಚಟುವಟಿಕೆಗಳಲ್ಲಿ ಸರ್ಕಾರಿ ನೌಕರರು ಭಾಗವಹಿಸಲು ಇದ್ದ ನಿಷೇಧದ ರದ್ದತಿ. ಆದ್ದರಿಂದ ವಾಜಪೇಯಿ ಮಾಡಿದ್ದಿಷ್ಟೆ. ದೇಶದ ವಿವಿಧ ಭಾಗಗಳಲ್ಲಿ ಅವರ ಪಕ್ಷದ ಜನಗಳ ಕೃತ್ಯಗಳಿಗೆ ಸಮರ್ಥನೆ ಒದಗಿಸಿದ್ದು. ಆದರೆ ಹಾಗೆ ಮಾಡುವಾಗ ಅವರು ಸುಳ್ಳಿನ ಮೊರೆ ಹೋಗಿದ್ದಾರೆ.

ಆರ್.ಎಸ್.ಎಸ್. ನ ರಾಜಕೀಯ

ಆರ್.ಎಸ್.ಎಸ್. ನ ರಾಜಕೀಯ ವಿಶಿಷ್ಟ ತರಹದ್ದು. ಈ ಜನವರಿ 16 ರ 'ಆರ್ಗನೈಸರ್' ಪತ್ರಿಕೆಯಲ್ಲಿ ಒಂದು ವರದಿ ಬಂದಿದೆ. ಅದರಲ್ಲಿ ಆರ್.ಎಸ್.ಎಸ್. ಸರಸಂಘಚಾಲಕರು ಮತ್ತೆ-ಮತ್ತೆ ರಾಷ್ಟ್ರೀಯ ಐಕ್ಯತೆ, ದೇಶವನ್ನು ಬಲಿಷ್ಠಗೊಳಿಸಬೇಕು ಎಂದೆಲ್ಲಾ ಮಾತಾಡುತ್ತಾರೆ; ಅದೇ ಉಸಿರಿನಲ್ಲಿ ಹಿಂದುಗಳು ಒಂದು ಕೋಮಾಗಿ ಒಟ್ಟಾಗಬೇಕು, ಬಲಗೊಳ್ಳಬೇಕು, ಅಲ್ಪಸಂಖ್ಯಾತರು ಶತ್ರುಗಳು ಎಂದೂ ಹೇಳುತ್ತಾರೆ. 'ಒಬ್ಬನೇ ಒಬ್ಬ ಹಿಂದೂ ಕೂಡಾ ತನ್ನ ಧರ್ಮವನ್ನು ಬಿಡದಂತೆ ಜನಗಳನ್ನು ಎಚ್ಚರಿಸಬೇಕು' ಎನ್ನುತ್ತಲೇ ಆತ ಧರ್ಮಾಂತರ ಹೊಂದಿದವರು ಮತ್ತೆ ಹಿಂದು ಧರ್ಮಕ್ಕೆ ಬರುವುದನ್ನು ಸ್ವಾಗತಿಸುವ ಜಾಗೃತಿ ಹಿಂದೂ ಸಮಾಜದಲ್ಲಿ ಬಂದಿದೆ' ಎನ್ನುತ್ತಾರೆ.

ಈ ರೀತಿ ಹಿಂದೂಗಳನ್ನು ಇತರರ ಮೇಲೆ ಎತ್ತಿಕಟ್ಟಿ 'ದೇಶದ ಐಕ್ಯತೆ'ಯ ಬಗ್ಗೆ ಮಾತನಾಡುವುದಷ್ಟೇ ಅಲ್ಲ, ಬಿಜೆಪಿಯ ರಾಜಕೀಯ ಹಿಂದೂಗಳು ಮಾತ್ರವೇ ದೇಶ ಎಂದು ಹೇಳಿ ಇತರರೆಲ್ಲರ ವಿರುದ್ಧ ಎತ್ತಿಕಟ್ಟುವ ರಾಜಕೀಯ ಅವರದ್ದು. ಸಂಘ ಪರಿವಾರದ ಕ್ರಿಶ್ಚಿಯನ್-ವಿರೋಧಿ ಪ್ರಚಾರದ ನೆಲೆಯಾದ ಗುಜರಾತಿನಲ್ಲಿ ಪೋಪರು ನೀಡಿದರೆನ್ನಲಾದ ಕರೆಯನ್ನ ಟೀಕಿಸಲು ಅವರು ಮರೆಯುವುದಿಲ್ಲ. ಭಾರತದಲ್ಲಿ ಒಂದು ಮತೀಯ ಹಿಂದೂ ಪ್ರಭುತ್ವವನ್ನು ಕಟ್ಟುವ ಬಹುಸಂಖ್ಯಾತರ

ಮುಂದಿನ ಪುಟಕ್ಕೆ



ಎನ್.ಡಿ.ಎ. ಮಿತ್ರ ಪಕ್ಷಗಳಿಗೆ ಸುರ್ಜಿತ್ ಬಹಿರಂಗ ಪತ್ರ

'ನಿಮಗಿರುವ ಒತ್ತಡ ಅರ್ಥವಾಗುತ್ತದೆ ನಿಮ್ಮ ದಿವ್ಯ ಮೌನ ಅರ್ಥವಾಗುತ್ತಿಲ್ಲ"

ಪ್ರಧಾನ ಮಂತ್ರಿಯವರ ಹೇಳಿಕೆ, ಅದರ ಬೆನ್ನ ಹಿಂದೆ ಅವರ ಸಂಪುಟ ಸಹದ್ಯೋಗಿಗಳೂ ಆದ ಮುರುಳಿಮನೋಹರ ಜೋಶಿ, ಅಡ್ವಾಣಿಯವರ ಹೇಳಿಕೆಗಳು ಉತ್ತರ ಪ್ರದೇಶದ ಮುಖ್ಯಮಂತ್ರಿಗಳ ಹೇಳಿಕೆಗಳು, ಕೃತ್ಯಗಳ ಗಂಭೀರ ದುಷ್ಪರಿಣಾಮಗಳ ಬಗ್ಗೆ, ಎನ್.ಡಿ.ಎ. ಅಜೆಂಡಾಕ್ಕೆ ಹೊರತಾದ ಅಂಶಗಳು ಎಂಬ ಬಗ್ಗೆ ಎನ್.ಡಿ.ಎ. ದಲ್ಲಿರುವ ಧರ್ಮನಿರಪೇಕ್ಷ ಪಕ್ಷಗಳಿಗೆ ಫೆಬ್ರವರಿ 8 ರಂದು ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಸುರ್ಜಿತ್ ಒಂದು ಬಹಿರಂಗ ಪತ್ರ ಬರೆದಿದ್ದಾರೆ. ಅದರ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

.... ಬಿಜೆಪಿಯ ಕಸರತ್ತುಗಳೆಲ್ಲಾ ಎನ್.ಡಿ.ಎ. ಪಾಲುದಾರರಲ್ಲಿ ಆ ಪಕ್ಷ ತಮ್ಮ ಪ್ರತ್ಯೇಕ ಅಸ್ತಿತ್ವಗಳನ್ನು ಮುಳುಗಿಸಿಬಿಡುವುದಿಲ್ಲ, ಧರ್ಮನಿರಪೇಕ್ಷತೆ ಮತ್ತು ಭಾರತೀಯ ಐಕ್ಯತೆಯ ವಿಚಾರಗಳಿಗೆ ಬದ್ಧವಾಗಿರುತ್ತದೆ ಎಂಬ ಭಾವನೆ ಮೂಡಿಸಿದ್ದರೆ, ಆರ್.ಎಸ್.ಎಸ್. ಒಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘಟನೆಯೆಂಬ ಪ್ರಧಾನ ಮಂತ್ರಿಗಳ ಹೇಳಿಕೆ ಹಲವರಿಗೆ ಆಶ್ಚರ್ಯವುಂಟುಮಾಡಿರಬೇಕು.

ಉತ್ತರ ಪ್ರದೇಶದ ಮುಖ್ಯಮಂತ್ರಿಗಳೂ ಹಿಂದೆ ಬಿದ್ದಿಲ್ಲ.......... ವಾರಣಾಸಿಯಲ್ಲಿ ಒಂದು ದುರದೃಷ್ಟಕರ ಸನ್ನಿವೇಶವನ್ನು ಸೃಷ್ಟಿಸಲಾಗಿದೆ. ಜಿಲ್ಲಾ ಅಧಿಕಾರಿಗಳು ಒಂದು ಚಿತ್ರತಂಡಕ್ಕೆ ಶೂಟಿಂಗ್‌ಗೆ ಅನುಮತಿ ನಿರಾಕರಿಸಿದ್ದಾರೆ. ಅದು ಕೂಡಾ ಕೇಂದ್ರ ಸುದ್ದಿ ಮತ್ತು ಪ್ರಸಾರ ಮಂತ್ರಾಲಯ ಎರಡೆರಡು ಬಾರಿ ಚಿತ್ರಕಥೆಯನ್ನು ಮಂಜೂರು ಮಾಡಿದ್ದರೂ ಕೂಡಾ. ಆರ್.ಎಸ್.ಎಸ್. ಮತ್ತು ಅದರ ಸೋದರ ಸಂಘಟನೆಗಳು ಈ ಚಿತ್ರದ ಸೆಟ್‌ಗಳನ್ನು ಧ್ವಂಸಮಾಡುವಲ್ಲಿ ಹಾಗೂ ವಾರಣಾಸಿಯಲ್ಲಿ ಗಂಭೀರ ಪರಿಸ್ಥಿತಿ ಉಂಟುಮಾಡುವಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ. ಜಿಲ್ಲಾ ಮತ್ತು ರಾಜ್ಯ ಆಡಳಿತಗಳು ಇದಕ್ಕೆ ಕುಮ್ಮಕ್ಕು ನೀಡಿದರೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಲು ನಿರಾಕರಿಸಿ ಮೂಕ ಪ್ರೇಕ್ಷಕನಂತಿದೆ.

ಒಂದೆಡೆ ಬಿಜೆಪಿ ಮುಖಂಡತ್ವದ ಈ ಪ್ರೋತ್ಸಾಹಕರ ಕೃತ್ಯಗಳು ಆರ್.ಎಸ್.ಎಸ್. ಗೆ ದೊಡ್ಡ ಪ್ರಚೋದನೆ ನೀಡಿದರೆ, ಇನ್ನೊಂದೆಡೆ ಇದು ಅಲ್ಪಸಂಖ್ಯಾತ ಕೋಮಿನ ಸದಸ್ಯರಲ್ಲಿ ನೈಜ ಭೀತಿಗಳನ್ನು, ಸಂದೇಹಗಳನ್ನು ಉಂಟು ಮಾಡುತ್ತಿದೆ.

ಆರ್.ಎಸ್.ಎಸ್. ಒಂದು ಸಾಂಸ್ಕೃತಿಕ ಸಂಘಟನೆಯೆಂಬ ಶ್ರೀ ವಾಜಪೇಯಿಯವರ ಸಮರ್ಥನೆಯನ್ನು ನಂಬಲು ಯಾರೂ ಸಿದ್ಧರಿಲ್ಲ. ಅದು ಸಾಮಾಜಿಕ ವೇಷದಲ್ಲಿರುವ ರಾಜಕೀಯ ಸಂಘಟನೆ ಎಂಬುದಕ್ಕೆ ಅದರ ಘಟಾನುಘಟಿಗಳ ಬರವಣಿಗೆಗಳು ಸೇರಿದಂತೆ ದಸ್ತಾವೇಜುಗಳ ಸಂಪುಟಗಳೇ ಇವೆ. ಆರ್.ಎಸ್.ಎಸ್. ನ ಗುರಿ ಒಂದು ಸರ್ವಾಧಿಕಾರಶಾಹಿ ಪ್ರಭುತ್ವವನ್ನು, ಹಿಂದೂ ರಾಷ್ಟ್ರವನ್ನು ಹಿಂದುತ್ವದ ತತ್ವಗಳ ಮಾರ್ಗದರ್ಶನದಲ್ಲಿ ಸ್ಥಾಪಿಸುವುದು. ಇಂತಹ ಒಂದು ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನವಿಲ್ಲ. ಅವರು ಹಿಂದೂ ಕೋಮಿನಲ್ಲಿ ವಿಲೀನವಾಗಬೇಕು, ಇಲ್ಲವೇ ನಾಶಗೊಳ್ಳಬೇಕು. ಆರ್.ಎಸ್.ಎಸ್. ಕಣ್ಣೋಟದಲ್ಲಿ (ಕರ್ನಾಟಕ, ತಮಿಳುನಾಡು, ಬಂಗಾಲ ಮುಂತಾದ) ದೇಶೀಯತೆಗಳಿಗೂ ಸ್ಥಾನವಿಲ್ಲ. 'ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಭಾಷೆ' ಸೃಷ್ಟಿಸುವುದು ಅದರ ಆಶಯ. ಈ ಪರಿಕಲ್ಪನೆಯೇ ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುವಂತದ್ದು.

ಇಲ್ಲಿ ನಾನು 1979 ರಲ್ಲಿ ಜನತಾ ಪಕ್ಷದ ಸರಕಾರದ ಪತನಕ್ಕೆ ಕಾರಣವಾದ ಘಟನೆಗಳನ್ನು ನೆನಪಿಸ ಬಯಸುತ್ತೇವೆ. ಕಾಂಗ್ರೆಸ್ ಪಕ್ಷ ಹೇರಿದ್ದ ತುರ್ತುಪರಿಸ್ಥಿತಿಯ ಸರ್ವಾಧಿಕಾರಶಾಹಿ ಚೌಕಟ್ಟನ್ನು ಕಿತ್ತುಹಾಕಲು ಹಲವು ಧರ್ಮನಿರಪೇಕ್ಷ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು ಜನತಾಪಾರ್ಟಿ ಸೇರಿದ್ದವು. ಈ ಶಕ್ತಿಗಳು ಜನತಾಪಾರ್ಟಿ ಸದಸ್ಯರು ಅದೇ ವೇಳೆಗೆ ಆರ್.ಎಸ್.ಎಸ್. ನ ಸದಸ್ಯರಾಗಿರುವುದನ್ನು ಖಡಾಖಂಡಿತವಾಗಿ ವಿರೋಧಿಸಿದರು. ಆದರೆ ಜನಸಂಘದ ತುಕಡಿ ಇದನ್ನು ವಿರೋಧಿಸಿ, ಆರ್.ಎಸ್.ಎಸ್. ನ ಸದಸ್ಯರಾಗಿರುವ ವಿಶೇಷ ಹಕ್ಕು ಇರಬೇಕೆಂದು ಬಯಸಿದರು. ನಿಮ್ಮಲ್ಲಿ ಹಲವರು ಈ ಹೋರಾಟದಲ್ಲಿ ಭಾಗವಹಿಸಿದ್ದರು ಎಂಬುದನ್ನು ನಾನಿಲ್ಲಿ ನೆನಪಿಸಬಯಸುತ್ತೇನೆ.

ಜಯಪ್ರಕಾಶ್ ನಾರಾಯಣ್ ಏನು ಹೇಳಿದ್ದರು ಎಂಬುದನ್ನು ನಾನು ನಿಮಗೆ ನೆನಪಿಸಬಯಸುತ್ತೇನೆ. 1968 ರಲ್ಲಿ ನವದೆಹಲಿಯಲ್ಲಿ ಕೋಮುವಾದದ ವಿರುದ್ಧ ಎರಡನೇ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಅವರು 'ಜನಸಂಘದ ತಾನು ಧರ್ಮನಿರಪೇಕ್ಷ ಪಕ್ಷ ಎಂಬ ಮಾತುಗಳನ್ನು ಅದು ಆರ್.ಎಸ್.ಎಸ್. ಯಂತ್ರದೊಂದಿಗೆ ತನ್ನ ಬಂಧಗಳನ್ನು ಕಡಿದುಕೊಳ್ಳುವವರೆಗೆ ಎಂದೂ ಗಂಭೀರವಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ" ಎಂದು ಸಾರಿದ್ದರು. ಕೆಲವು ವರ್ಷಗಳ ನಂತರ ಮಾರ್ಚ್ 2, 1979 ರಂದು ಮೊರಾರ್ಜಿ ದೇಸಾಯಿಯವರಿಗೆ ಬರೆದ ಪತ್ರದಲ್ಲಿ "ಆರ್.ಎಸ್.ಎಸ್. ಸರಕಾರದಲ್ಲಿ ನಾಯಕತ್ವವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಕೆಲವು ಗೆಳೆಯರು ಮತ್ತೆ ಮತ್ತೆ ದೂರು ನೀಡುತ್ತಿದ್ದಾರೆ. ಆರ್.ಎಸ್.ಎಸ್.ಗೆ ಇತರ ರಾಜಕೀಯ ಪಕ್ಷಗಳಂತೆ ರಾಜಕೀಯದ ಮೇಲೆ ಪ್ರಭಾವ ಬೀರಲು ಸ್ವಾತಂತ್ರ್ಯವಿದೆ. ಅದನ್ನು ಅದು ಮಾಡುತ್ತಿದೆ ಕೂಡಾ. ನನ್ನ ಒಂದೇ ಆಕ್ಷೇಪವೆಂದರೆ ಅವರು ಒಂದು ಸಾಂಸ್ಕೃತಿಕ ಸಂಘಟನೆಯೆಂಬ ಛದ್ಮವೇಷದಲ್ಲಿ ರಾಜಕೀಯದ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ" ಎಂದಿದ್ದರು ಜೆ.ಪಿ.

ಕೊನೆಗೂ ಈ ಸಮಸ್ಯೆ ಜನತಾಪಕ್ಷದ ವಿಭಜನೆಯೊಂದಿಗೆ ಪರಿಹಾರವಾಯಿತು. ಹಿಂದಿನ ಜನಸಂಘದ ಸದಸ್ಯರು ಬಿಜೆಪಿ ರಚಿಸಿಕೊಂಡರು. ಬಿಜೆಪಿ ತನ್ನದೇ ಘೋಷಣೆಯಿಂದ ಇನ್ನೊಂದು ಘೋಷಣೆಗೆ ಜಿಗಿಯಿತು. ಒಂದು ಹಂತದಲ್ಲಿ ಗಾಂಧೀ ಸಮಾಜವಾದ, ನಂತರ ಅದನ್ನು ಬಿಟ್ಟು ದೀನ್ ದಯಾಳ್ ಉಪಾಧ್ಯಾಯರ 'ಸಮಗ್ರ ಮಾನವೀಯವಾದ' ಎಂದಿತು. ರಾಷ್ಟ್ರೀಯ ಆಡಳಿತ ಅಜೆಂಡಾವನ್ನು ಅದು ಅಂಗೀಕರಿಸುವುದು ಇಂತಹುದೇ

ಹೋದಲೆಲ್ಲಾ ರಕ್ತಪಾತದ, ವಿನಾಶದ ಹೆಜ್ಜೆಗುರುತುಗಳನ್ನು ಬಿಟ್ಟು ಹೋದ ಅಡ್ವಾಣಿಯವರ ರಥಯಾತ್ರೆಯಲ್ಲಿ ಬಯಲಾಯಿತು. ಹಿಂದುತ್ವ ಅಜೆಂಡಾ ಈಗ ಮುಂಚೂಣಿಗೆ ಬಂದಿತ್ತು. ಬಾಬ್ರಿ ಮಸೀದಿಯ ಧ್ವಂಸವನ್ನು ಕಂಡ ಡಿಸೆಂಬರ್ 6, 1992 ಈ ಸರಪಣಿಯಲ್ಲಿನ ಒಂದು ಕೊಂಡಿ.

ನಿಮಗೆ ಎನ್.ಡಿ.ಎ. ಯ ಭಾಗವಾಗಿರಲು ಹಲವು ಒತ್ತಡಗಳಿರಬಹುದಾದರೂ ಗುಜರಾತ್, ಉತ್ತರ ಪ್ರದೇಶ ಸರಕಾರಗಳ ಕೃತ್ಯಗಳು ಹಾಗೂ ಪ್ರಧಾನಮಂತ್ರಿಗಳೂ ಸೇರಿದಂತೆ ಕೇಂದ್ರ ಮಂತ್ರಿಗಳ ಹೇಳಿಕೆಗಳ ಬಗ್ಗೆ ನಿಮ್ಮ ದಿವ್ಯಮೌನ ಅರ್ಥವಾಗುವುದಿಲ್ಲ.

ಬಿಜೆಪಿಗೆ ತನ್ನ ಅಜೆಂಡಾವನ್ನು ಅನುಸರಿಸುವುದನ್ನು ಮುಂದುವರೆಸಲು ಬಿಟ್ಟರೆ ಅಪಾಯಕಾರಿ ಸನ್ನಿವೇಶವನ್ನು ಉಂಟು ಮಾಡಬಹುದು. ಅದರ ಪರಿಣಾಮ ಅದರ ವಿನಾಶಕಾರಿಯಾಗಬಹುದು. ಅದು ರಾಷ್ಟ್ರೀಯ ಐಕ್ಯತೆಯನ್ನು ಛಿದ್ರಗೊಳಿಸುತ್ತದೆ ಹಾಗೂ ಭಾರತ ಸಂಘದ ಅಂಗವಾಗಿರುವ ವಿಭಿನ್ನ ದೇಶೀಯತೆಗಳ ಅಸ್ತಿತ್ವಕ್ಕೇ ಬೆದರಿಕೆ ತರುತ್ತದೆ.

ಯಾರ ಮೇಲಾದರೂ ದೋಷಾರೋಪಣೆ ಮಾಡುವುದಾಗಲೀ, ಅಯಾಚಿತ ಟೀಕೆ ಮಾಡುವುದಾಗಲೀ ಇಲ್ಲಿ ನನ್ನ ಆಶಯವಲ್ಲ. ನನ್ನ ಉದ್ದೇಶವೆಂದರೆ ಬಿಜೆಪಿ ಮುಖಂಡತ್ವದ ಕೃತ್ಯಗಳು ಮತ್ತು ಹೇಳಿಕೆಗಳ ಪರಿಣಾಮಗಳು, ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಅದರ ಪ್ರಭಾವಗಳ ಬಗ್ಗೆ ಧರ್ಮನಿರಪೇಕ್ಷ ಪಕ್ಷಗಳಿಗೆ ಎಚ್ಚರಿಕೆ ನೀಡುವುದು.

ನೀವು ಈ ವಿಷಯದ ಬಗ್ಗೆ ಯೋಚಿಸುತ್ತೀರಿ ಹಾಗೂ ಬಿಜೆಪಿ ರಾಷ್ಟ್ರೀಯ ಅಜೆಂಡಾದ ಹೆಸರಲ್ಲಿ ತನ್ನ ಅಂದರೆ ಆರ್.ಎಸ್.ಎಸ್. ಅಜೆಂಡಾವನ್ನು ಕಳ್ಳತನದಿಂದ ಮಾರದಂತೆ ಈ ಕ್ರಮಗಳಿಗೆ ಪ್ರತಿರೋಧ ಒಡ್ಡುತ್ತೀರಿ ಎಂ...

'ರಾಜಕೀಯೇತರ' ಎನ್ನುವ ಆರ್.ಎಸ್.ಎಸ್. ನ 'ಸಾಂಸ್ಕೃತಿಕ' ಸಾಧನೆಗಳೇನು ಗೊತ್ತೆ?

ಆರ್.ಎಸ್.ಎಸ್. ಒಂದು ರಾಜಕೀಯ ಸಂಘಟನೆಯಲ್ಲ ಎಂದು ಹೇಳಿ ಕೊನೆಗೂ ಜಂಟಲ್‌ಮನ್ ಪ್ರಧಾನಿ, ಕವಿಹೃದಯಿ ಪ್ರಧಾನಿ ತನ್ನ ಮುಖವಾಡವನ್ನು ಕಳಚಿಬಿಟ್ಟಿದ್ದಾರೆ. ಆದರೆ ಈ ಪ್ರಕ್ರಿಯೆಯಲ್ಲಿ ಅವರು ಎಂತಹ ದೊಡ್ಡ ಸುಳ್ಳು ಹೇಳಿದ್ದಾರೆ, ಈ ಮೂಲಕ ತನ್ನ 'ಆತ್ಮ'ದ ಪರಂಪರೆಯನ್ನು ಹೇಗೆ ಅನುಸರಿಸಿದ್ದಾರೆ ಎಂದು ಈ ಲೇಖನದಲ್ಲಿ ನೋಡಿ.

- 1925 ರಲ್ಲಿ ನಾಗಪುರದಲ್ಲಿ ಅದು ಸ್ಥಾಪನೆಯಾದ ವರ್ಷವೇ ನಾಗಪುರ ಕೋಮುಗಲಭೆಯಿಂದ ತತ್ತರಿಸಿತು.
- 1947 ರಲ್ಲಿ ದೇಶದ ವಿಭಜನೆಯಾದ ಹೊಸದರಲ್ಲೇ ಉತ್ತರ ಪ್ರದೇಶದ ಪಶ್ಚಿಮದ ಜಿಲ್ಲೆಗಳಲ್ಲಿ ವ್ಯಾಪಕ ಕೋಮುಗಲಭೆ ನಡೆಸುವ ಪಿತೂರಿ ಆರ್.ಎಸ್.ಎಸ್. ಕಛೇರಿಯ ಮೇಲೆ ದಾಳಿ ನಡೆಸಿದಾಗ ಬಯಲಿಗೆ ಬಂತು.
- ನ್ಯಾಯಾಂಗ ತನಿಖೆಗಳಲ್ಲಿ ಕೋಮುಗಲಭೆಗಳಲ್ಲಿ ಆರ್.ಎಸ್.ಎಸ್.ನ ಪಾತ್ರ ಸಾಬೀತಾಗಿದೆ.

1. 1969ರ ಅಹ್ಮದಾಬಾದ್ ಗಲಭೆ-ನ್ಯಾಯಮೂರ್ತಿ ಜಗಮೋಹನ್ ರೆಡ್ಡಿ ಆಯೋಗ
2. 1970 ರ ಭೀಮಡಿ ಗಲಭೆ - ನ್ಯಾಯಮೂರ್ತಿ ಮದನ್ ಆಯೋಗ
3. 1971 ರ ತೆಲ್ಲಿಚೇರಿ ಗಲಭೆ - ನ್ಯಾಯಮೂರ್ತಿ ವಿದ್ಯಾತಿರ್ ವರದಿ
4. 1979 ರ ಜಮ್‌ಶೆಡ್‌ಪುರ ಗಲಬೆ - ನ್ಯಾಯಮೂರ್ತಿ ಜಿತೇಂದ್ರನಾರಾಯಣ ವರದಿ
5. 1982 ರ ಕನ್ಯಾಕುಮಾರಿ ಗಲಭೆ - ನ್ಯಾಯಮೂರ್ತಿ ಪಿ.ವೇಣುಗೋಪಾಲ್ ವರದಿ
6. 1992-93 ರ ಮುಂಬೈ ಗಲಭೆ - ನ್ಯಾಯಮೂರ್ತಿ ಶ್ರೀ ಕೃಷ್ಣ ಆಯೋಗ

- 1948 ರಲ್ಲಿ ಮಹಾತ್ಮಗಾಂಧಿಯವರ ಹತ್ಯೆ ನಡೆದಾಗ



ಸಿಹಿ ಹಂಚಿ, ಹತ್ಯೆಯನ್ನು ಸಂತಸದ ಘಟನೆಯೆಂದು ಆಚರಿಸಿದ ಹಿನ್ನೆಲೆಯಲ್ಲಿ ಈ ವಿಷ ಹರಡಿಸುವ ಸಂಘಟನೆಯನ್ನು ನಿಷೇಧಿಸುವುದು ಅನಿವಾರ್ಯವಾಗಿತ್ತು ಎಂದು ಭಾರತದ ಪ್ರಥಮ ಗೃಹಮಂತ್ರಿ ಸರ್ದಾರ್ ಪಟೇಲರೇ ಹೇಳಿದ್ದಾರೆ.

ಇಂತಹ ಸಂಘಟನೆಯ ಚಟುವಟಿಕೆಗಳಲ್ಲಿ ಭಾಗವಹಿಸಲು ಇದ್ದ ನಿಷೇಧವನ್ನು ರದ್ದು ಪಡಿಸಿದ್ದನ್ನು ಸಮರ್ಥಿಸಿಕೊಳ್ಳುವವರನ್ನು ಏನೆಂದು ಹೇಳಬೇಕು?

ಕೋಮುವಾದದ ರಾಜಕೀಯ ಅವರದ್ದು.

ಈ ಹಿಂದೆ ಧರ್ಮನಿರಪೇಕ್ಷ ನಿಲುವುಗಳನ್ನು ತಳೆಯುತ್ತಿದ್ದ ಎನ್.ಡಿ.ಎ. ಅಂಗಪಕ್ಷಗಳು ಈ ಪ್ರಶ್ನೆಯ ಬಗ್ಗೆ ಮೌನ ತಾಳಿ ತಮ್ಮನ್ನು ತಾವೇ ಬಯಲುಗೊಳಿಸಿಕೊಳ್ಳುತ್ತಿದ್ದಾರೆ. ಅವರ ಈ ಮೌನವನ್ನು ಬಳಸಿಯೇ ಬಿಜೆಪಿ ಎನ್.ಡಿ.ಎ. ಅಜೆಂಡಾಕ್ಕೆ ವಿರುದ್ಧವಾಗಿ ತನ್ನ ಅಜೆಂಡಾವನ್ನು ಮುಂದೊತ್ತುತ್ತಿದೆ. 1998 ರ ಚುನಾವಣೆಗಳ ನಂತರ ಅಧಿಕಾರದಲ್ಲಿ ಉಳಿಯುವುದಕ್ಕಾಗಿಯೇ ಬಿಜೆಪಿ ರಾಷ್ಟ್ರೀಯ ಆಡಳಿತ ಅಜೆಂಡಾ ರೂಪಿಸಲು ಒಪ್ಪಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. 1996 ರಲ್ಲಿ ಬಿಜೆಪಿಯ 13 ದಿನಗಳ ಸರಕಾರದ ಪ್ರಯೋಗದಲ್ಲಿ ತನ್ನ ಕಾರ್ಯಕ್ರಮವನ್ನು, ಕಣ್ಣೋಟವನ್ನು ಬೆಂಬಲಿಸುವ ಒಂದೇ ಒಂದು ಮಿತ್ರ ಪಕ್ಷವನ್ನು ಗೆದ್ದುಕೊಳ್ಳಲಿಕ್ಕಾಗದ ವಿಫಲತೆಯ ಹಿನ್ನೆಲೆಯಲ್ಲಿ ಅದು ಹೀಗೆ ಮಾಡಲೇಬೇಕಾಗಿ ಬಂದಿತ್ತು. ಕಳೆದ ಚುನಾವಣೆಗಳಲ್ಲಷ್ಟೇ ಬಿಜೆಪಿ ತನ್ನದೇ ಪ್ರಣಾಳಿಕೆ ಹೊರಡಿಸದೆ ಸದ್ಯಕ್ಕೆ ರಾಮದೇವಸ್ಥಾನ, ಸಮಾನ ನಾಗರಿಕ ಸಂಹಿತೆ, 370 ನೇ ಕಲಮಿನ ರದ್ಧತಿ ಇತ್ಯಾದಿ ಹಿಂದುತ್ವದ ಮೂಲ ಅಂಶಗಳನ್ನು ಸದ್ಯಕ್ಕೆ ಬದಿಗಿಟ್ಟು ಎನ್.ಡಿ.ಎ. ಪ್ರಣಾಳಿಕೆಗೆ ಬದ್ಧವಾಗಿರುವುದಾಗಿ ಹೇಳಿತು. ಇದರರ್ಥ ಬಿಜೆಪಿ ತನ್ನ ಅಜೆಂಡಾವನ್ನು, ನಂತರ 'ಬಚಿಟ್ಟಾ ಅಜೆಂಡಾ' ಎಂಬ ಹೆಸರು ಪಡೆದುದನ್ನು ಅದು ತ್ಯಜಿಸಿತು ಎಂದರ್ಥವಲ್ಲ. ಇದನ್ನು ನಾವು ಮತ್ತೆ-ಮತ್ತೆ ಹೇಳುತ್ತಾ ಬಂದಿದ್ದೇವೆ.

ಕೋಮುವಾದಿ ಸಂಘಟನೆ

ಆರ್.ಎಸ್.ಎಸ್. ಗೆ ನಿಜವಾಗಿ ಸಾಮಾಜಿಕ-ಸಾಂಸ್ಕೃತಿಕ ಪ್ರಶ್ನೆಗಳ ಬಗ್ಗೆ ಏನೇನೂ ಕಾಳಜಿಯಿಲ್ಲ ಎಂಬುದಕ್ಕೆ ಹಲವು ಪುರಾವೆಗಳಿವೆ. ಬಿಜೆಪಿಯ ಉನ್ನತ ಮುಖಂಡರೆಲ್ಲಾ ನುರಿತಿರುವುದು ಆರ್.ಎಸ್.ಎಸ್.ನಲ್ಲೇ. ಈಗಲೂ ಅವರೆಲ್ಲಾ ಮುಖಂಡರು ಆರ್.ಎಸ್.ಎಸ್.ನ ಸದಸ್ಯರು, ಅದರಿಂದಲೇ ಮಾರ್ಗದರ್ಶನ ಪಡೆದವರು. 1925 ರಿಂದಲೇ ಅದು ಸಾಮಾಜಿಕ ಸಂಘಟನೆಯೆಂಬ ವೇಷದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದೆ. 1925 ರಲ್ಲಿ ಅದು ಸ್ಥಾಪನೆಯಾದ ವರ್ಷವೇ ಅದರ ಮುಖ್ಯ ಕಛೇರಿಯಿರುವ ನಾಗಪುರ ಕೋಮುಗಲಭೆಗಳಿಂದ ತತ್ತರಿಸಿತ್ತು.

ಕಳೆದ ಜನವರಿ 11 ಮತ್ತು 15 ರ 'ಸ್ಟೇಟ್ಸ್ ಮನ್' ದೈನಿಕದಲ್ಲಿ ಎ.ಜಿ.ನೂರಾನಿಯವರು ರಾಜೇಶ್ವರ ದಯಾಳ್ ಎಂಬುವರ 'ನಮ್ಮ ಕಾಲದ ಒಂದು ಬದುಕು' ಎಂಬ ಪುಸ್ತಕದ ಪ್ರಸ್ತಾಪ ಮಾಡಿದ್ದಾರೆ. ಈ ರಾಜೇಶ್ವರ ದಯಾಳ್ ದೇಶ ವಿಭಜನೆಯ ವೇಳೆಯಲ್ಲಿ ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿಯಾಗಿದ್ದವರು. ದೇಶ ವಿಭಜನೆ ನಡೆದ ಹೊಸದರಲ್ಲೇ ಆ ರಾಜ್ಯದ ಪಶ್ಚಿಮ ವಿಭಾಗದ ಪೋಲೀಸ್ ಮಹಾನಿರ್ದೇಶಕ ಬಿ.ಬಿ.ಎಲ್. ಜೈಟ್ಲೇಯವರು ಅವರ ಮುಂದೆ ಎರಡು ಪೆಟ್ಟಿಗೆ ತುಂಬಾ ದಸ್ತಾವೇಜುಗಳನ್ನು ತಂದಿಟ್ಟರಂತೆ. "ರಾಜ್ಯದ ಪಶ್ಚಿಮದ ಜಿಲ್ಲೆಗಳಾದ್ಯಂತ ಕೋಮು ದಾಂಧಲೆ ಎಬ್ಬಿಸುವ ಒಂದು ಭೀಕರ ಪಿತೂರಿಯ ಬಗ್ಗೆ ಸ್ಪಷ್ಟ ಸಾಕ್ಷ್ಯಗಳು' ಅದರಲ್ಲಿದ್ದವಂತೆ ಮುಸ್ಲಿಮರು ಹೆಚ್ಚಾಗಿ ವಾಸಿಸುವ ಪ್ರದೇಶಗಳನ್ನು ಗುರುತುಮಾಡಿದ ನಕಾಶೆಗಳು ಇತ್ಯಾದಿ. ಸೂಕ್ತ ಸಮಯದಲ್ಲಿ ಆರ್.ಎಸ್.ಎಸ್. ಕಚೇರಿಯ ಮೇಲೆ ನಡೆಸಿದ ಧಾಳಿಯಿಂದಾಗಿ ಬೃಹತ್ ಪಿತೂರಿ ಬೆಳಕಿಗೆ ಬಂತು. ಆರ್.ಎಸ್.ಎಸ್. ನ ಪರಮೋಚ್ಛ ಮುಖಂಡ ಎಂ.ಎಸ್.ಗೋಲ್ವಾಲ್ಕರ್‌ರವರ ಮಾರ್ಗದರ್ಶನ ಮತ್ತು ಉಸ್ತುವಾರಿಯಲ್ಲಿ ಈ ಇಡೀ ಪಿತೂರಿಯನ್ನು ರೂಪಿಸಲಾಗಿತ್ತು ಎಂದು ಅವರು ಹೇಳುತ್ತಾರೆ.

ಇಷ್ಟೇ ಅಲ್ಲ ಈಗಲೂ ಕೂಡಾ ಗೋಡ್ಸೆ ಆರ್.ಎಸ್.ಎಸ್. ಸದಸ್ಯ ಅಲ್ಲ ಎಂದು ಅದು ಹೇಳಿಕೊಳ್ಳುತ್ತಿದೆ. ಆದರೆ ಗಾಂಧೀಜಿಯನ್ನು ಹತ್ಯೆ ಮಾಡಿದ ಆ ಪಿತೂರಿಯಲ್ಲಿ ಪಾಲ್ಗೊಂಡಿದ್ದ ಆತನ ಸೋದರನ ಪ್ರಕಾರ 'ಎಲ್ಲಾ ಸೋದರರೂ ಆರ್.ಎಸ್.ಎಸ್.ನಲ್ಲಿದ್ದರು. ನಾವೆಲ್ಲಾ ಬೆಳೆದದ್ದು ನಮ್ಮ ಮನೆಗಳಲ್ಲಿ ಅಲ್ಲ, ಆರ್.ಎಸ್.ಎಸ್.ನಲ್ಲಿ ಎಂದೇ ನೀವು ಹೇಳಬಹುದು. ತಾನು ಆರ್.ಎಸ್.ಎಸ್. ಬಿಟ್ಟದ್ದು ಗಾಂಧೀ ಹತ್ಯೆಯ ನಂತರ ಗೋಲ್ವಾಲ್ಕರ್ ಮತ್ತು ಆರ್.ಎಸ್.ಎಸ್. ಬಹಳ ತೊಂದರೆಯಲ್ಲಿ ಸಿಲುಕಿದ್ದರಿಂದಾಗಿ ಎಂದು ನಾಥುರಾಂ ಗೋಡ್ಸೆ ಹೇಳಿದ್ದಾನೆ. ಆದರೆ ಆತ ಆರ್.ಎಸ್.ಎಸ್. ತ್ಯಜಿಸಿರಲಿಲ್ಲ" ಇದು ಆ ಸೋದರ 1994 ರಲ್ಲಿ 'ಫ್ರಂಟ್‌ಲೈನ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ ಮಾತು.

ರಾಜಕೀಯದಲ್ಲಿ ಮುಳುಗಿದ್ದು ರಾಜಕೀಯೇತರ ಅಥವಾ 'ಸಾಂಸ್ಕೃತಿಕ' ಅಥವಾ 'ಸಾಮಾಜಿಕ' ಎಂದು ಹೇಳಿಕೊಳ್ಳುವಂತದ್ದು ವಾಜಪೇಯಿಯವರ ಹೊಸ ಸಂಶೋದನೆಯೇನಲ್ಲ. ಗೋಲ್ವಾಲ್ಕರ್ ನವೆಂಬರ್ 12, 1948 ರಂದು ಪ್ರಧಾನಿ ನೆಹರೂಗೆ ಬರೆದ ಪತ್ರದಲ್ಲಿ 'ಆರ್.ಎಸ್.ಎಸ್. ರಾಜಕೀಯದಿಂದ ದೂರವಿರುತ್ತದೆ' ಎಂದಿದ್ದರು. ಆದರೆ ಈಗಿನ ಸರಸಂಘಚಾಲಕ ರಾಜೇಂದ್ರಸಿಂಗ್ ಮತ್ತು ಹಿಂದಿನ ಸರಸಂಘಚಾಲಕರ ಸೋದರ ಭಾಪೂರಾವ್ ಪ್ರಕಾರ 'ಸಂಘಕ್ಕೊಂದು ತಮ್ಮ ವ್ಯಾಪಕ ರಾಜಕೀಯದ ಕೆಲಸದ ಹರಹಿನಲ್ಲಿ ಒಂದು ರಾಜಕೀಯ ತತ್ವ ಇದ್ದರೂ ಅದು ದೈನಂದಿನ ರಾಜಕೀಯದಲ್ಲಿ ಭಾಗವಹಿಸುವುದಿಲ್ಲ. ಈ ಧೋರಣೆಯನ್ನು

ಪುಟ 15 ಕ್ಕೆ

ಕರುಣಾನಿಧಿ, ನಾಯ್ಡು, ಫಾರೂಕ್, ಪಾಸ್ವಾನ್ ಬಿಜೆಪಿ ಬುಡಮೇಲು ಕೃತ್ಯಗಳಲ್ಲಿ ಕೈಮಿಲಾಯಿಸುತ್ತಿದ್ದಾರೆಯೇ?

ಬಿಜೆಪಿಯ ಪ್ರಸಕ್ತ ಮಿತ್ರರ ರಾಜಕೀಯ ನೈತಿಕತೆ ಈಗ ಪಾತಾಳಕ್ಕೆ ಇಳಿದಿದೆ. ಅಧಿಕಾರದಾಹ ಅವರನ್ನು ಈಗಿನ ರಾಜಕೀಯದ ಅನೈತಿಕತೆಯಲ್ಲಿ ಯಾವುದೇ ನಾಚಿಕೆಯಿಲ್ಲದೆ ಶಾಮೀಲಾಗುವಂತೆ ಮಾಡಿದೆಯೆಂಬ ಬಲವಾದ ಸಂದೇಹ ಮೂಡುತ್ತಿದೆ. ಬಿಹಾರದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರರು ಐದು ಡಜನ್‌ಗೂ ಹೆಚ್ಚು ಕ್ರಿಮಿನಲ್‌ಗಳನ್ನು ಅಭ್ಯರ್ಥಿಯಾಗಿ ನಿಲ್ಲಿಸಿವೆ ಎಂದು ಒಂದು ವರದಿ ಹೇಳುತ್ತದೆ. ವಾರಣಾಸಿಯಲ್ಲಿ ತಮ್ಮದೇ ಕೇಂದ್ರ ಸರಕಾರ ಒಂದಲ್ಲ ಎರಡು ಬಾರಿ 'ಮಂಜೂರು' ಮಾಡಿದ 'ವಾಟರ್'ನ ಚಿತ್ರೀಕರಣದ ವಿರುದ್ಧ ನಡೆದ ಗೂಂಡಾಗಿರಿಯ ಬಗ್ಗೆ ತುಟಿಪಿಟಿಕ್ಕೆಂದಿಲ್ಲ. ಎಲ್ಲಕ್ಕಿಂತಲೂ ಹೀನ ಸಂಗತಿಯೆಂದರೆ ಭಾರತದ ಧರ್ಮನಿರಪೇಕ್ಷ ತಳಪಾಯವನ್ನು ಕಾಪಾಡುವ ತಮ್ಮ ಕರ್ತವ್ಯವನ್ನು ಅವರು ತ್ಯಜಿಸಿಬಿಟ್ಟಂತಿದೆ.

ವಿಚಿತ್ರವೆಂದರೆ ಒಂದೊಮ್ಮೆ 'ಒಂದು ರಾಷ್ಟ್ರ, ಒಂದು ಸಂಸ್ಕೃತಿ, ಒಂದು ಭಾಷೆ' ಯ ಆರ್.ಎಸ್.ಎಸ್. ಪರಿಕಲ್ಪನೆಯ ವಿರುದ್ಧ ರೇಗಾಡುತ್ತಿದ್ದ ಡಿ.ಎಂ.ಕೆ.ಯ ಮುಖಂಡ ಕರುಣಾನಿಧಿ ಈಗ ಅದು ರಾಜಕೀಯ ಪಕ್ಷವಲ್ಲ ಎಂದು ಮೊದ್ದು ವಾದ ಮುಂದೆ ಮಾಡುತ್ತಾರೆ. ಬಹುಶಃ ಈ ಮೊದ್ದುತನದ ಹಿಂದಿರುವ ಅಧಿಕಾರ ವ್ಯಾಮೋಹ ಬಯಲಾಯಿತೆಂದು ನಂತರ ಅವರು ಪ್ರಧಾನಮಂತ್ರಿಗೆ ಪತ್ರ ಬರೆದಿದ್ದಾರಂತೆ. ಆದರೆ ಇಷ್ಟೇ ಸಾಕೆ.



ಬಚ್ಚಿಟ್ಟ ಅಜೆಂಡಾ

- ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯ ಮುಖ್ಯಸ್ಥನ ಸ್ಥಾನಕ್ಕೆ ಆರ್.ಎಸ್.ಎಸ್. ವ್ಯಕ್ತಿಯ ನೇಮಕ
- 'ಪ್ರಸಾರ ಭಾರತಿ' ಯ ಆಡಳಿತ ಮಂಡಳಿಯಿಂದ ಪ್ರಖ್ಯಾತ ಇತಿಹಾಸಕಾರರಾದ ರೊಮಿಲಾ ಥಾಪರ್ ಹಾಗೂ ಇನ್ನೊಬ್ಬ ಪ್ರತಿಷ್ಠಿತ ಸದಸ್ಯ ರಾಜೇಂದ್ರ ಯಾದವ್‌ರ ವಜಾ.
- ಉತ್ತರ ಪ್ರದೇಶದಲ್ಲಿ ಮಸೀದಿಗಳನ್ನು ಕಟ್ಟಲು ಅನುಮತಿ ನಿರಾಕರಿಸಲು ಅನುವು ಮಾಡಿಕೊಡುವ ಮಸೂದೆ ಮಂಡನೆ, ಅಂಗೀಕಾರ.
- ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟಲು ಅವಕಾಶವಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಹೇಳಿಕೆ. ಪ್ರತಿಕೂಲ ಪ್ರತಿಕ್ರಿಯೆ ಬಂದಾಗ ಎನ್.ಡಿ.ಎ. ಅಜೆಂಡಾಕ್ಕೆ ತಾನೂ ಬದ್ಧ ಎಂಬ ಮಾತು.
- ಗುಜರಾತಿನಲ್ಲಿ ಕ್ರಿಶ್ಚಿಯನ್-ವಿರೋಧಿ ಗಲಭೆಗಳು ನಡೆದ ಡಾಂಗ್ ಜಿಲ್ಲೆಯಲ್ಲಿ ರಾಮದೇವಸ್ಥಾನ ಶಿಲಾನ್ಯಾಸಕ್ಕೆ ಸರಕಾರದ ಅನುಮತಿ .
- ಗುಜರಾತಿನಲ್ಲಿ ಸರ್ಕಾರಿ ನೌಕರರು ಆರ್.ಎಸ್.ಎಸ್. ಸೇರಲು ಇರುವ ನಿಷೇಧವನ್ನು ತೆಗೆಯಲು ಬಿಜೆಪಿ ಸರಕಾರದ ನಿರ್ಧಾರ
- ಉತ್ತರ ಪ್ರದೇಶದಲ್ಲೂ ಆರ್.ಎಸ್.ಎಸ್. ಸೇರಲು ಇರುವ ನಿಷೇಧ ಕುರಿತ ಯಾವುದೇ ನೋಟಿಫಿಕೇಷನನ್ನು ಮಾನ್ಯ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಘೋಷಣೆ.
- ನಿಷೇಧ ತೆಗೆಯುವ ಕ್ರಮಕ್ಕೆ ಪ್ರಧಾನ ಮಂತ್ರಿ ಸಮರ್ಥನೆ.
- ಇಂತಹ ನಿಷೇಧಿತ ಸಂಸ್ಥೆಗಳ ಪಟ್ಟಿಯ ವಿಮರ್ಶೆ ಮಾಡುವುದಾಗಿ ಗೃಹಮಂತ್ರಿ ಹೇಳಿಕೆ.
- ಕೇಂದ್ರ ಸರಕಾರದ ನೌಕರರಿಗೂ ನಿಷೇಧ ರದ್ಧತಿಯನ್ನು ಅನ್ವಯ ಮಾಡಬಹುದು ಎಂದು ಕೇಂದ್ರ ಮಾನವಸಂಪನ್ಮೂಲ ಮಂತ್ರಿಗಳ ಹೇಳಿಕೆ.
- ಆರ್.ಎಸ್.ಎಸ್. ನ ಸದಸ್ಯರಿಗೆ ರಾಜ್ಯ ಸರಕಾರದ ನೇಮಕಾತಿಯಲ್ಲಿ ಆದ್ಯತೆ ನೀಡಬೇಕು ಎಂದು ಆಂಧ್ರಪ್ರದೇಶ ಬಿಜೆಪಿ ಮುಖಂಡರ ಬೇಡಿಕೆ.
- ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ಕಲಮು ಈಗ ವಾಸ್ತವವಾಗಿ ಸತ್ತೇ ಹೋಗಿದೆ ಎಂದು ಬಿಜೆಪಿ ಉಪಾಧ್ಯಕ್ಷ ಜನ ಕೃಷ್ಣಮೂರ್ತಿ ಘೋಷಣೆ.
- ವಾರಣಾಸಿಯಲ್ಲಿ ವಿಧವೆಯರ ಸಮಸ್ಯೆ ಕುರಿತಾದ 'ವಾಟರ್' ಚಲನಚಿತ್ರದ ಚಿತ್ರೀಕರಣದ ವಿರುದ್ಧ ದೊಂಬಿ. ಕೇಂದ್ರ ಪ್ರಸಾರ ಮಂತ್ರಾಲಯ ಎರಡೆರಡು ಬಾರಿ 'ಮಂಜೂರಾತಿ' ನೀಡಿದ್ದರೂ ಚಿತ್ರೀಕರಣಕ್ಕೆ ಅವಕಾಶ ನೀಡಲು ಎಲ್ಲಾ ಅಧಿಕಾರಿಗಳ ನಕಾರ. ರಾಜ್ಯ ಸರಕಾರದಿಂದ ಹದಿನೈದು ದಿನಗಳ ನಿಷೇಧ. ಚಿತ್ರತಂಡದ ಮನವಿಗೆ ಕೇಂದ್ರ ಸರ್ಕಾರದ ದಿವ್ಯಮೌನ. ದೊಂಬಿಗರಿಗೆ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗೋವಿಂದಾ ಚಾರ್ಯರ ಬಹಿರಂಗ ಬೆಂಬಲ.



ಅನೇಕ ಗೊಂದಲಗಳ ಮಧ್ಯೆ ಚುನಾವಣೆಗಳನ್ನು ಮುಂದೂಡುವ ಅನೇಕ ಪ್ರಯತ್ನಗಳಿಂದ ಪಾರಾಗಿ ಒಂದು ವರ್ಷಕ್ಕಿಂತ ಹೆಚ್ಚು ತಡವಾಗಿ, ಕರ್ನಾಟಕದಾದ್ಯಂತ ಗ್ರಾಮಪಂಚಾಯತ್ ಚುನಾವಣೆಗಳು ನಡೆಯಲಿವೆ. ಆಡಳಿತದ ದಿನನಿತ್ಯದ ಆಗುಹೋಗುಗಳಲ್ಲಿ ಜನರನ್ನು ಒಳಗೊಳ್ಳುವ ವಿಶಾಲ ಅವಕಾಶ ಕಲ್ಪಿಸುವ ಪ್ರಜಾಪ್ರಭುತ್ವದ ಅಡಿಪಾಯವಾದ ಈ ಸಂಸ್ಥೆಗಳಿಗೆ ಇತ್ತೀಚಿನ ಕೆಲ ವರ್ಷಗಳಲ್ಲಿ ಸ್ವಲ್ಪ ಹೆಚ್ಚು ಹಣ ಮತ್ತು ಪ್ರಾಮುಖ್ಯತೆ ಸಿಗುತ್ತಿದೆ. ಇಂತಹ ಸಂದರ್ಭವನ್ನು ದುಡಿಯುವ ಜನರು ಸಮರ್ಥವಾಗಿ ಬಳಸಿಕೊಳ್ಳಬೇಕು. ತಮ್ಮ ಕ್ರಿಯಾಶೀಲ ಪಾತ್ರದಿಂದ ಈ ಸಂಸ್ಥೆಗಳನ್ನು ಪಾಳೆಯಗಾರಿ ಶಕ್ತಿಗಳ, ಭ್ರಷ್ಟಾಚಾರಿಗಳ ಹಿಡಿತದಿಂದ ಪಾರು ಮಾಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನಪಡೆಯವರು.



ಪ್ರಜಾಸತ್ತಾತ್ಮಕ ಹೋರಾಟದ ಸಾಧನ ಗ್ರಾಮ ಪಂಚಾಯತ್ ಚುನಾವಣೆ

— ಮಾರುತಿ ಮಾನ್ಪಡೆ


ಕರ್ನಾಟಕದಲ್ಲಿ 5,313 ಗ್ರಾಮ ಪಂಚಾಯತಿಗಳ ಚುನಾವಣೆ 79,000 ಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿ ಸದಸ್ಯರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭಗೊಂಡಿದೆ. ಇಡೀ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶ ಜನತೆ ಉಮೇದುವಾರಿಕೆ ಸಲ್ಲಿಸುವಿಕೆ ಅಭ್ಯರ್ಥಿಗಳ ಬೆಂಬಲಿಗರ ಪರ ವಿರುದ್ಧ ಚರ್ಚೆ, ಆಳುವ ವರ್ಗದ ಪಕ್ಷದ ರಾಜಕಾರಣ, ಜಮೀನುದಾರಿ ಮುಖಂಡರ ವೈಯಕ್ತಿಕ ಪ್ರತಿಷ್ಠತೆಯ ಮೇಲುಗೈ ಚಹಾದಂಗಡಿಗಳಲ್ಲಿ ಪಂಚಾಯತಿ ಚುನಾವಣೆ, ಅಭ್ಯರ್ಥಿಗಳ ಆಯ್ಕೆ, ಜನತೆಯ ಸಮಸ್ಯೆಗಳ ಬಗೆಹರಿಸುವಿಕೆ,, ಇತ್ಯಾದಿಗಳು ಅವ್ಯಾಹತವಾಗಿದೆ ನಡೆದಿವೆ.

ಕರ್ನಾಟಕ ಜಮೀನ್ದಾರಿ ಮತ್ತು ಬಂಡವಾಳ ಶಾಹಿ ಭೂಮಾಲೀಕರ ಹಿಡಿತಕ್ಕೆ ಒಳಪಟ್ಟ ರಾಜ್ಯವಾಗಿದೆ. ಕರ್ನಾಟಕವು ಮೂರು ಭಾಗಗಳಲ್ಲಿ ವಿಂಗಡಿಸಬಹುದಾಗಿದೆ. **ಉತ್ತರ ಕರ್ನಾಟಕವು ತೀವ್ರವಾದಂತಹ ಭೂಮಾಲೀಕರ ಹಿಡಿತಕ್ಕೆ ಒಳಪಟ್ಟ ಪ್ರದೇಶವಾಗಿದೆ. ಶೇಕಡಾ 40 ಕ್ಕೂ ಹೆಚ್ಚು ಕೃಷಿ ಕೂಲಿಕಾರರಿದ್ದಾರೆ. ಹೆಚ್ಚಿನ ಕೂಲಿಕಾರರು ವಲಸೆ ಹೋಗುವ ಅನಿವಾರ್ಯತೆಗೆ ಒಳಪಟ್ಟಿದ್ದಾರೆ. ಉತ್ತರ ಕರ್ನಾಟಕದಲ್ಲಿ ಜಾತಿ ದೌರ್ಜನ್ಯ ಮಹಿಳೆಯರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ ಇತ್ಯಾದಿ ಅವ್ಯಾಹತವಾಗಿ ನಡೆಯುತ್ತಲಿವೆ. ಸಾಮಾಜಿಕ ರಾಜಕೀಯ ಹಿಡಿತವುಳ್ಳ ಜಮೀನ್ದಾರದ್ದೇ.** ಕರಾವಳಿ ಪ್ರದೇಶದಲ್ಲಿ ಬಂಡವಾಳ ಶಾಹಿ, ಭೂಮಾಲೀಕರ ಹಿಡಿತವು ಹೆಚ್ಚಾಗಿದೆ. ಗಣನೀಯ ಸಂಖ್ಯೆಯಲ್ಲಿ ಮಧ್ಯಮ ವರ್ಗವು ಬೆಳೆದು ಬಂದಿದೆ. ಮಧ್ಯಮ ವರ್ಗ ಮತ್ತು ಜಮೀನ್ದಾರಿ ಬಂಡವಾಳ ಶಕ್ತಿಗಳ, ಕೋಮುವಾದಿ ಶಶಕ್ತಿಗಳ ಪ್ರಭಾವಕ್ಕಗೆ ಒಳಗಾಗಿದ್ದಾರೆ. ಬಯಲು ಸೀಮೆ ಕರ್ನಾಟಕದಲ್ಲಿ ಹೈದ್ರಾಬಾದ್- ಕರ್ನಾಟಕ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದು ದೇಶಮುಖ, ದೇಸಾಯಿ, ಜನತೆಯ ಮೇಲೆ ನಿಯಂತ್ರಣ ಸಾಧಿಸಲು ಗ್ರಾಮದಲ್ಲಿ ಮಾಲೀಗೌಡರು ಪೋಲೀಸ್ ಗೌಡರು, ಕುಲಕರ್ಣಿಯರಂತಹ ತ್ರಿಮೂರ್ತಿಗಳ ಮೂಲಕ ಗ್ರಾಮಗಳಲ್ಲಿ ಹಿಡಿತ ಸಾಧಿಸಿದ್ದರು. ಸ್ವತಂತ್ರ ಪೂರ್ವದಲ್ಲಿ ಆಡಳಿತದಲ್ಲಿ ಜನರ ಪಾಲ್ಗೊಳ್ಳುವಿಕೆ ನಿರಾಕರಿಸಲ್ಪಟ್ಟು ತೀವ್ರ ಪಾಳೆಗಾರಿಕೆ ವ್ಯವಸ್ಥೆ ಇತ್ತು. ಬಾಂಬೆ- ಕರ್ನಾಟಕ ಹಾಗೂ ಬಳ್ಳಾರಿ,ದ. ಕನ್ನಡ ಜಿಲ್ಲೆಯು ನೇರವಾಗಿ ಬ್ರಿಟೀಷ್ ಆಡಳಿತಕ್ಕೆ ಒಳಪಟ್ಟಿದ್ದು ಗ್ರಾಮದ ಸ್ವಾವಲಂಬಿ ಆರ್ಥಿಕ ವ್ಯವಸ್ಥೆಯನ್ನು ಹಾಳುಗೆಡುವಿ ತಮ್ಮ ಪಾಳೆಗಾರಿ ಮತ್ತು ವಸಾಹತು ಶಾಹಿ ರಕ್ಷಿಸುವುದಕ್ಕಾಗಿ ಸ್ಥಳೀಯ ಬಂಟರ ಮೂಲಕ ಆಡಳಿತ ನಡೆಸಲು ಮುಂದಾದರು.

ಸ್ವತಂತ್ರ್ಯಾ ನಂತರದ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜಮೀನ್ದಾರಿ ಬಂಡವಾಳಶಾಹಿ ಪಕ್ಷ ಜನರನ್ನು ಆಡಳಿತದಲ್ಲಿ ಪಾಲ್ಗೊಳ್ಳುವಿಕೆಗೆ ಸಮುದಾಯ ಅಭಿವೃದ್ಧಿ ನಂತರ ಯೋಜನೆ ದಾರಿ ಹೂಡಿತು. ನಂತರ ಗ್ರಾಮ ಪಂಚಾಯ್ತಿ ಮತ್ತು ತಾಲ್ಲೂಕಾ ಅಭಿವೃದ್ಧಿ ಮಂಡಳಿಯನ್ನು ರಚಿಸುವ ಮೂಲಕ ಜನತೆಯನ್ನು ಆಡಳಿತದಲ್ಲಿ ಪಾಲ್ಗೊಳ್ಳುವಿಕೆಗೆ ಆದ್ಯತೆ ನೀಡಿತು.

ಗ್ರಾಮ ಪಂಚಾಯಿತಿ ಅಧಿಕಾರ ಇಲ್ಲದೆ ಸಮಾಜದ ಬದಲಾವಣೆಯ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರ ವಹಿಸಲು ಸಾಧ್ಯವಾಗದಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಿತು. ಆದರೆ ತಾಲ್ಲೂಕಾ ಅಭಿವೃದ್ಧಿ ಮಂಡಳಿಗೆ ಶಿಕ್ಷಣ, ಆರೋಗ್ಯ, ರಸ್ತೆ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆಯನ್ನು ಪಾಲ್ಗೊಳ್ಳಲು ಅವಕಾಶ ನೀಡಿತು. ಆದರೂ ಜಮೀನ್ದಾರಿ ವರ್ಗವು ಆಡಳಿತವನ್ನು ತಮ್ಮ ನಿಯಂತ್ರಣಕ್ಕೆ ಇಟ್ಟುಕೊಳ್ಳುವ ವ್ಯವಸ್ಥೆ ಮಾಡಿಕೊಂಡರೇ ವಿನಃ ಗ್ರಾಮೀಣ ದುಡಿಯುವ ಜನತೆಯ ಕೈಗೆ ಅಧಿಕಾರ ದಕ್ಕಲಿಲ್ಲ. ಜೊತೆಗೆ ಅಂತಹ ಆಡಳಿತ ನಿರ್ವಹಣೆಯಲ್ಲಿ ಮಧ್ಯ ಪ್ರವೇಶ ಮಾಡತಕ್ಕಂಥ ರೀತಿಯಲ್ಲಿ ಸಾಧ್ಯವಾಗಲಿಲ್ಲ. ಒಟ್ಟಾರೆ ಪಂಚಾಯಿತಿ ವ್ಯವಸ್ಥೆಗಳ ಮೂಲಕ ಆಡಳಿತದ ಮೇಲೆ ಹಿಡಿತ ಸಾಧಿಸಲು ಪಾಳೇಗಾರಿ, ಜಮೀನ್ದಾರಿ ಜನತೆಗೆ ಅನುಕೂಲವಾಯಿತು. **ರಾಜ್ಯದಲ್ಲಿ ಆಡಳಿತದಲ್ಲಿ ಇದ್ದ ಕಾಂಗ್ರೆಸ್ ಪಕ್ಷವು ಕಾಲಕಾಲಕ್ಕೆ ಪಂಚಾಯಿತಿ ಚುನಾವಣೆ ನಡೆಸದೇ ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಮೊಟಕುಗೊಳಿಸಿ ಅಧಿಕಾರಿ ಶಾಹಿ ಮೇಲೆ ಅವಲಂಬಿಸಿ ಆಡಳಿತ ನಡೆಸಿತು. ಕರ್ನಾಟಕ ದಲ್ಲಿ 10 ವರ್ಷಗಳ ಕಾಲ ಪಂಚಾಯಿತಿ ಚುನಾವಣೆ ನಡೆಸದೇ ಆಡಳಿತ ಅಧಿಕಾರಿಗಳ ಮೂಲಕವೇ ಆಡಳಿತ ನಡೆಸಿದ್ದು ಎದ್ದು ಕಾಣುತ್ತದೆ.**

1977 ರಲ್ಲಿ ತೀವ್ರ ಭೂ ಹೋರಾಟ ಹಿನ್ನಲೆಯಲ್ಲಿ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಸಿ.ಪಿ.ಐ.(ಎಂ) ನೇತೃತ್ವದ ಎಡರಂಗ ಸರ್ಕಾರವು ಪಂಚಾಯಿತಿ ವ್ಯವಸ್ಥೆಗೆ ಚಾಲನೆ ನೀಡಿತು. ಎಡರಂಗ ಸರಕಾರದ ಭೂಸುಧಾರಣೆಗೆ ಒತ್ತು ನೀಡಿ ಹೋರಾಟಕ್ಕೆ (ಎರಡು ಪಾಲು ಮಾಡಿದವರಿಗೆ ಒಂದು ಪಾಲು ಜಮೀನ್ದಾರಿ) ಬೆಂಬಲ ನೀಡಿ ಗ್ರಾಮೀಣ ದುಡಿಯುವ ಜನತಗೆ ಬಲ ತಂದು ಕೊಟ್ಟಿತು. ಗ್ರಾಮೀಣ ದುಡಿಯುವ ಜನತೆ ಎಡರಂಗದ ನೇತೃತ್ವದಲ್ಲಿ ಪಂಚಾಯಿತಿಗಳಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಾಯಿತು. ಭೂಮಿ ಹಂಚುವಿಕೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ ನಿರ್ವಹಣೆ, ಗ್ರಾಮೀಣ ಪ್ರದೇಶಗಳಲ್ಲಿ ಸಂಪನ್ಮೂಲಗಳ ಕೃಷಿ ಇತ್ಯಾದಿಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ಕೂಲಿಕಾರರು ನಿರ್ಣಾಯಕ ಪಾತ್ರ ವಹಿಸುವಂತಾಯಿತು. ಕೃಷಿ ಉತ್ಪಾದನೆಯಲ್ಲಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ದನ ಕುರಿಗಳ ಸಾಕಾಣಿಕೆ ಇತ್ಯಾದಿಗಳ ಬಹುತೇಕ ಕೂಲಿಕಾರರುಗಳು ಮಹತ್ವದ ಪಾತ್ರ ವಹಿಸಿ ಪಂಚಾಯಿತಿ ವ್ಯವಸ್ಥೆಯ ಮೂಲಕ ಹೆಚ್ಚು ಲಾಭ ಪಡೆಯಲು ಸಾಧ್ಯವಾಯಿತು. ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಿತು. ಆ ಪ್ರಜಾಪ್ರಭುತ್ವ ವ್ಯವಸ್ಥೆಗೆ ನೇತೃತ್ವ ಕೊಡಲು ಗ್ರಾಮೀಣ ದುಡಿಯುವ ಜನತೆಗೆ ಬೆಂಗಾವಲಾಗಿ ಎಡರಂಗ ಸರ್ಕಾರವು ನಿಂತಿತು. ಇದಕ್ಕೆ ಚಾಲನೆ ನೀಡಿದ್ದು 1967 ರಲ್ಲಿ ಪ್ರಾರಂಭವಾದ ಭೂಮಿಯ ಹೋರಾಟ. ಈ ಭೂಮಿ ಹೋರಾಟಗಳು ಜಮೀನ್ದಾರಿ ವರ್ಗದಿಂದ ತೀವ್ರ ದಬ್ಬಾಳಿಕೆ ಎದುರಿಸಿದರೂ ಕೂಡಾ ವರ್ಗದ ಬಲಾಬಲ ಬದಲಿಸಲು ಸಾಧ್ಯ ವಾಗಿದೆ. ದುಡಿಯುವ ಜನತೆ ಸಾಮಾಜಿಕ, ಆರ್ಥಿಕ ರಾಜಕೀಯ ಹಿಡಿತ ಸಾಧಿಸಲು ಸಾಧ್ಯವಾಗಿದೆ. **ಬಂಗಾಳದಲ್ಲಿ ಗ್ರಾಮ ಸಂಸದ್ ಅಂದರೆ ಒಂದು ಪಂಚಾಯಿತಿ ಕ್ಷೇತ್ರದ ಎಲ್ಲಾ ಮತದಾರರು ಒಂದೆಡೆ ಸೇರಿಸಿ ಆ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಚರ್ಚಿಸುತ್ತಾರೆ. ಈ ಗ್ರಾಮ ಸಂಸದ್ ಸಭೆಗೆ ಪಂಚಾಯಿತಿ ಅಧ್ಯಕ್ಷರು, ಅಧಿಕಾರಿಗಳು ಹಾಜರಾಗುತ್ತಾರೆ. ಇಡೀ ಲೆಕ್ಕ ಪತ್ರವನ್ನು ಗ್ರಾಮದ ಸಂಸದರ ಮುಂದೆ ಇಟ್ಟು ಒಪ್ಪಿಗೆ ಪಡೆಯುತ್ತಾರೆ.**



ಗ್ರಾಮ ಪಂಚಾಯತ್, ತಾಲ್ಲೂಕಾ ಪಂಚಾಯತ್, ಜಿಲ್ಲಾ ಪಂಚಾಯತ್ ಮೂರು ಹಂತದ ಪಂಚಾಯಿತಿ ವ್ಯವಸ್ಥೆಯು ಕಳೆದ 23 ವರ್ಷಗಳಿಂದ ಜಾರಿಯಲ್ಲಿದೆ. ಜಿಲ್ಲಾ ಯೋಜನಾ ಮಂಡಳಿ ಜಿಲ್ಲೆಯ ಅಭಿವೃದ್ಧಿ ಕುರಿತು ಒಂದು ಯೋಜನೆಯನ್ನು ರೂಪಿಸಿದೆ. ಜಿಲ್ಲಾಧಿಕಾರಿ ಜಿಲ್ಲಾ ಪಂಚಾಯಿತಿ ಕಾರ್ಯದರ್ಶಿಯಾಗಿದ್ದು ಕಾನೂನು ಸುವ್ಯವಸ್ಥೆ ಹಾಗೂ ಭೂ ಸುಧಾರಣೆ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ಬಂಗಾಳದ ಈ ವ್ಯವಸ್ಥೆಗೆ ದೇಶದ ಯೋಜನಾ ಮಂಡಳಿಯು ಒಂದು ಅತ್ಯುತ್ತಮವಾದ ಪಂಚಾಯತ್ ರಾಜ ವ್ಯವಸ್ಥೆ ಎಂದು ಹೊಗಳಿದೆ. ವಿದೇಶಗಳ ಹಲವಾರು ತಂಡಗಳು ಬಂಗಾಳಕ್ಕೂ ಭೇಟಿ ನೀಡಿ. ಪ್ರಾಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಂಗಾಳದ ಪಂಚಾಯಿತಿ ವ್ಯವಸ್ಥೆಯಲ್ಲಿ ಬಂಗಾಳದ ಪಂಚಾಯತ್ ವ್ಯವಸ್ಥೆಯನ್ನು ಶ್ಲಾಘಿಸಿದೆ. ಸಂಶೋಧಕರುಗಳಾದ ಮಧುರಾ, ಅನುಮಿತಿ ಸಾಹ, ಜಾನ್ ಹ್ಯಾರಿಸ್; ಇಂತಹ ಮಹಾನ್ ಮೇಧಾವಿಗಳು ಬಂಗಾಳ ಪಂಚಾಯತ್ ವ್ಯವಸ್ಥೆಯನ್ನು ಅನುಮೋದಿಸಿದ್ದಾರೆ, ರಾಜ್ಯ ಸರ್ಕಾರದ ಬಜೆಟಿನ ಶೇಕಡಾ 50ರಷ್ಟು ಹಣವನ್ನು ಪಂಚಾಯಿತಿಗಳ ಮೂಲಕ ಅಭಿವೃದ್ಧಿ ಕೆಲಸಗಳಿಗೆ ಕೊಡುವ ದೃಢ ತೀರ್ಮಾನವನ್ನು ಸರ್ಕಾರ ಮಾಡಿದೆ.

ಈ ಅನುಭವ ದೇಶದ ಪ್ರಜ್ಞಾವಂತ ಜನತೆಯ ಕಣ್ಣು ತೆರೆಸಿದೆ. 1983 ರಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ರಾಮಕೃಷ್ಣ ಹೆಗಡೆ ನೇತೃತ್ವದ ಜನತಾ ಪಕ್ಷದ ಸರ್ಕಾರ ಪಂಚಾಯ್ತಿ ವ್ಯವಸ್ಥೆಯನ್ನು ಜಾರಿ ಮಾಡಲು ನಿರ್ಧರಿಸಿ ಬಂಗಾಳದ ಅನುಭವ ಪಡೆದು ಮುಂದಾಯಿತು. 83 ರಲ್ಲಿ ಪಂಚಾಯಿತಿ ಕಾನೂನುಗಳನ್ನು ರಚಿಸಿ ಕೇಂದ್ರದ ಅನುಮತಿಗೆ ಕಳುಹಿಸಿದಾಗ ಅಂದಿನ ಆಡಳಿತ ರೂಢ ಕಾಂಗ್ರೆಸ್ ಪಕ್ಷವು ಅನುಮತಿ ನೀಡದೇ ವಿಳಂಬ ಮಾಡಿತು ಕೇಂದ್ರದ ಈ ನಿಲುಮೆಯ ವಿರುದ್ಧ ಜನತೆ ಹೋರಾಟ ಮಾಡುವ ಮೂಲಕ ಕಾನೂನು ಅಂಗೀಕಾರ ಪಡೆಯಿತು.



ಭ್ರಷ್ಟಾಚಾರ ಮತ್ತು ಕೂಲಿಕಾರ ವಿರೋಧಿ ನೀತಿಗಳು

ಕರ್ನಾಟಕದಲ್ಲಿ ಎರಡು ಹಂತದ ಪಂಚಾಯಿತಿ ವ್ಯವಸ್ಥೆ 1987 ರಿಂದ 94 ರ ವರೆಗೆ ಜಾರಿಯಲ್ಲಿ ಇತ್ತು. ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಮತ್ತೆ ಪುನಃ ಮೂರು ಹಂತದ ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೆ ತಂದಿತು. ಕಳೆದ 6 ವರ್ಷಗಳಲ್ಲಿ ಈಗಿನ ಪಂಚಾಯಿತಿ ವ್ಯವಸ್ಥೆಯು ಜಾರಿಯಲ್ಲಿದೆ. 2 ಹಂತದಲ್ಲಿ ಈ ಪಂಚಾಯಿತಿಗಳಿಗೆ ಹಣ ನೀಡಲಾಗುತ್ತಿದೆ. ಒಂದು ಅಭಿವೃದ್ಧಿ ಅನುದಾನ, ಈ ಅನುದಾನದಲ್ಲಿ ಕುಡಿಯುವ ನೀರು ವಿದ್ಯುತ್ ದೀಪ, ಗ್ರಾಮ ನೈರ್ಮಲ್ಯ ಸೂಚಿಸಲಾಗಿದೆ. ಆದರೆ ಮಂಡಲ ಪಂಚಾಯಿತಿ

ಪುಟ 10 ಕ್ಕೆ

ಕೇರಳದಲ್ಲಿ ಪಂಚಾಯತ್ ರಾಜ್ಯ ಮತ್ತು ಜನರೂಪಿತ ಯೋಜನೆಯ ಪ್ರಯೋಗದಲ್ಲಿ ಮಹಿಳೆಯರು

ಇತ್ತೀಚಿನ ಒಂದು ವರ್ಷದಲ್ಲಿ ಪತ್ರಿಕೆಗಳಲ್ಲಿ ಮತ್ತೆ ಮತ್ತೆ ಕೇರಳದ ಹೊಸಪ್ರಯೋಗದ ಬಗ್ಗೆ ಸುದ್ದಿ, ವಾದ-ವಿವಾದಗಳು. ಅದನ್ನು ಗಮನಿಸುತ್ತಾ ಹೋದಂತೆ ನನ್ನ ಆಸಕ್ತಿ, ಕುತೂಹಲ ಬೆಳೆಯುತ್ತಿತ್ತು. ಏಕೆಂದರೆ ಕೇರಳದ ಗ್ರಂಥಾಲಯ ಚಳುವಳಿಯ ಬಗ್ಗೆ ಕೇಳಿತಿಳಿದ, ನಂತರ ಕೇರಳದಿಂದ ದೇಶಕ್ಕೆಲ್ಲಾ ಹಬ್ಬಿದ ವಿಜ್ಞಾನ ಚಳುವಳಿ, ಸಾಕ್ಷರತಾ ಚಳುವಳಿಯ ಬಗ್ಗೆ ಪ್ರತ್ಯಕ್ಷವಾಗಿ ಅಷ್ಟಿಷ್ಟು ನೋಡಿದ್ದ ನನಗೆ ಈ ಸುದ್ದಿ ವಿವಾದಗಳ ಮೂಲದಲ್ಲಿ ಒಂದು ಮಹತ್ವದ, ನಾವು ಕಂಡರಿಯದ ಒಂದು ಹೊಸಪ್ರಯೋಗ ನಡೆಯುತ್ತಿದೆ ಎನ್ನುವುದು ಅರಿವಾಗುತ್ತಿತ್ತು. ಇದ್ದಕಡೆಯಿಂದಲೇ ಜನರು ಸ್ಥಿತಯೋಜನೆಯ ಚಳುವಳಿ ಬಗ್ಗೆ ಸಿಗುವ ಮಾಹಿತಿಯನ್ನೆಲ್ಲಾ ಸಂಗ್ರಹಿಸುತ್ತಿದ್ದೆ. ಯಾವಾಗ ಅದನ್ನು ಪ್ರತ್ಯಕ್ಷ ನೋಡಿಯೇನೋ ಎಂದು ತವಕಿಸುತ್ತಿದ್ದ ನನ್ನ ಮನಸ್ಸಿಗೆ ಇತ್ತೀಚೆಗೆ 22 ರಿಂದ 27 ರವರೆಗೆ ಕೇರಳಕ್ಕೆ ಭೇಟಿನೀಡಲು ಲಭಿಸಿದ ಅವಕಾಶ ಹಾಲೆರೆದಂತಾಯ್ತು ಆ ಭೇಟಿಯ ಸಮಯದಲ್ಲಿ ನೋಡಿದ ಕೇರಳದ ಪಂಚಾಯತ್ ರಾಜ್ಯ ಹಾಗೂ ಜನರೂಪಿತ ಯೋಜನೆಯ ಚಳುವಳಿಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಕೆಲವು ಅಂಶಗಳನ್ನು ನಿಮ್ಮ ಮುಂದಿರಿಸಬಯಸುತ್ತೇನೆ.

ಜಿ.ಎನ್. ನಾಗರಾಜ್



ಹೊಸ ಅಭಿವೃದ್ಧಿ ಸಂಸ್ಕೃತಿಯ ಸೃಷ್ಟಿ

ಭಾರತದ ಸಮಾಜವಿಜ್ಞಾನದ ಪ್ರಭಾವಶಾಲಿ ಪತ್ರಿಕೆಯಾದ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲೀ (ಅರ್ಥಶಾಸ್ತ್ರೀಯ ಮತ್ತು ರಾಜಕೀಯ ವಾರಪತ್ರಿಕೆ)ಯಲ್ಲಿ 97ರ ನವೆಂಬರ್ ವೇಳೆಗೆ ಅಂತರರಾಷ್ಟ್ರೀಯ ಖ್ಯಾತಿಯ ಸಮಾಜ ವಿಜ್ಞಾನಿಗಳು ಕೇರಳಧ ವಿಕೇಂದ್ರಿಕರಣ ಯೋಜನೆ ಇಂದು ವಿಶ್ವದಲ್ಲಿಯೇ ಅತ್ಯಂತ ದೊಡ್ಡದು ಎಂದು ಉದ್ಗಾರ ತೆಗೆದಿದ್ದರು.

ಒಂದು ಹೊಸ ಅಭಿವೃದ್ಧಿ ಸಂಸ್ಕೃತಿಯ ಸೃಷ್ಟಿ-ಪ್ರಜಾಸತ್ತಾತ್ಮಕವಾದ, ಜನರು ಎಲ್ಲ ಹಂತಗಳಲ್ಲಿಯೂ ಭಾಗವಹಿಸುವ, ಪರಸ್ಪರ ಬಡಿದಾಡುತ್ತಾ ಅನೇಕ ಅಭಿವೃದ್ಧಿ ಯೋಜನೆಗಳು ಕುಂಠಿತವಾಗಲು ಕಾರಣವಾಗಿರುವ ರಾಜಕೀಯ ಪಕ್ಷಗಳ ತಕ್ಷಣದ ಚುನಾವಣಾ ಗುರಿಗಳನ್ನು ಮೀರಲು ಸಾಧ್ಯವಾದ ಅಭಿವೃದ್ಧಿ ಸಂಸ್ಕೃತಿಯನ್ನು ರೂಪಿಸುವುದೇ ಈ ಪ್ರಯೋಗದ ಗುರಿ. ಈ ಪ್ರಯೋಗದಲ್ಲಿ ಪ್ರಧಾನ ಪಾತ್ರ ನೇರ ಜನರ ಹಾಗೂ ಸ್ಥಳೀಯ ಸಂಸ್ಥೆಗಳಾದ ಪಂಚಾಯತ್ ರಾಜ್ಯ ಸಂಸ್ಥೆಗಳು ಮತ್ತು ಪುರಸಭೆ, ನಗರಸಭೆಗಳಿಗೆ, ಈ ಪ್ರಯೋಗದಿಂದ ಜನರ ಅರ್ಧಭಾಗವೇ ಆದ ಹಾಗೂ ಪಂಚಾಯತ್ ರಾಜ್ಯ ಸಂಸ್ಥೆಗಳಲ್ಲಿ ಮೂರನೇ ಒಂದು ಭಾಗದಷ್ಟು ಪ್ರತಿನಿಧಿಗಳನ್ನು ಹೊಂದಿರುವ ಮಹಿಳೆಯರ ಮೇಲಾಗಿರುವ ಪರಿಣಾಮವೇನು?

ಕೇರಳದ ಮಾನವ ಅಭಿವೃದ್ಧಿಯ ಉನ್ನತ ಮಟ್ಟ

ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಮೊದಲು ಕೆಲಸಂಗತಿಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಕೇರಳ ಇಂದು ಭಾರತದಂತಹ ಹಿಂದುಳಿದ ದೇಶದ ಭಾಗವೇ ಆಗಿದ್ದರೂ ಅಲ್ಲಿಯ ಮಾನವ ಅಭಿವೃದ್ಧಿ ಸೂಚಿಗಳು ಪ್ರಪಂಚದ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನಲ್ಲಿವೆ ಎಂದು ವಿಶ್ವ ಸಂಸ್ಥೆಯ ವರದಿಗಳು ಸಾರುತ್ತವೆ. ಸಾಕ್ಷರತೆಯಲ್ಲಿ ಶಿಕ್ಷಣ ಮಟ್ಟದಲ್ಲಿ ಐದುವರ್ಷದೊಳಗಿನ ಶಿಶುಗಳ ಸಾವಿನ, ಹೆರಿಗೆಯ ಸಮಯದಲ್ಲಿನ ಮಹಿಳೆಯರ ಸಾವಿನ ಹಾಗೂ ಜನಸಂಖ್ಯೆಯ ಬೆಳವಣಿಗೆಯ ಅತಿಕಡಿಮೆ ಪ್ರಮಾಣದಲ್ಲಿ ಇದನ್ನು ಗುರುತಿಸುತ್ತಾರೆ.

ದೇಶದಲ್ಲಿಯೇ ಅತಿಹೆಚ್ಚು ಸಾಕ್ಷರತೆ ಶೇ. 91 (1991ರ ಜನಗಣತಿಯ ವೇಳೆಗೆ)ಯನ್ನು ಪಡೆದಿರುವ ಕೇರಳದಲ್ಲಿ ಮಹಿಳಾ ಸಾಕ್ಷರತೆಯೂ ಹೆಚ್ಚು. ಈ ಎಲ್ಲ ಉತ್ತಮ ಮಾನವ ಅಭಿವೃದ್ಧಿ ಸೂಚ್ಯಾಂಕಗಳಿಗೆ ಮೂಲಕಾರಣ ಅಲ್ಲಿ 1957ರಲ್ಲಿ ಎರಡನೇ ಮಹಾಚುನಾವಣೆಯ ಸಂಧರ್ಭದಲ್ಲಿಯೇ ಬಂದ ಎಡಪಂಥೀಯ ಸರ್ಕಾರ ತಂದ ಭೂಸುಧಾರಣೆ ಹಾಗೂ ಕನಿಷ್ಠಕೂಲಿ. 27 ಲಕ್ಷ ಕುಟುಂಬಗಳಿಗೆ ಭೂಮಿ, 10 ಲಕ್ಷ ಭೂರಹಿತ ಕೂಲಿಕಾರ ಕುಟುಂಬಗಳಿಗೆ ಕೂಲಿ, ಇವುಗಳ ಫಲವಾಗಿ ಪ್ರತಿ ಕೂಲಿಕಾರನ, ಬಡರೈತನ ಮಕ್ಕಳೂ- ಹೆಣ್ಣಿರಲಿ, ಗಂಡಿರಲಿ ಪಡೆಯುವ ವಿದ್ಯಾಭ್ಯಾಸ.

ಕೇರಳದ ಮಹಿಳಾ ಸದಸ್ಯರು

ಈ ಹಿನ್ನೆಲೆಯನ್ನು ಗಮನಿಸಿ ಅಲ್ಲಿಯ ಮಹಿಳಾ ಪಂಚಾಯತ್ ಸದಸ್ಯರ ಬಗ್ಗೆ ತಿಳಿದುಕೊಳ್ಳೋಣ. **ಕೇರಳದ ಒಟ್ಟು 14173 ಪಂಚಾಯತ್ ಸದಸ್ಯರಲ್ಲಿ 5078 ಎಂದರೆ ಶೇ.36 ಬಾಗ ಮಹಿಳೆಯರು. ಇದರಲ್ಲಿ ಶೇ. 90 ಭಾಗಮೊದಲ ಬಾರಿಗೆ ಆಯ್ಕೆಯಾದವರು. ಶೇ. 10 ಭಾಗ ಚುನಾಯಿತ ಸದಸ್ಯರಾಗಿ ಅನುಭವವಿದ್ದರು. (ಪುರುಷರಲ್ಲಿ ಹೀಗೆ ಹಿಂದೆ ಚುನಾಯಿತ ಸದಸ್ಯರಾಗಿದ್ದವರ ಸಂಖ್ಯೆ ಶೇ.27) ಪುರುಷರಿಗೆ ಹೋಲಿಸಿದರೆ ಮಹಿಳಾ ಸದಸ್ಯರೇ ಹೆಚ್ಚು ವಿದ್ಯಾಭ್ಯಾಸ ಪಡೆದವರು. ಪುರುಷರಲ್ಲಿ ಶೇ.20ರಷ್ಟು ಪ್ರೌಢಶಾಲಾ (ಹೈಸ್ಕೂಲ್) ಮಟ್ಟಕ್ಕಿಂತ ಕೆಳಗಿನ ಶಿಕ್ಷಣ ಪಡೆದವರಾದರೆ ಮಹಿಳೆಯರಲ್ಲಿ ಅವರ ಸಂಖ್ಯೆ ಕೇವಲ ಶೇ. 11 ಮಹಿಳಾ ಸದಸ್ಯರಲ್ಲಿ ಶೇ. 18ರಷ್ಟು ಪದವಿ (ಡಿಗ್ರಿ) ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆದವರಾದರೆ ಆ ವಿದ್ಯಾಭ್ಯಾಸ ಪಡೆದ ಪುರುಷರ ಸಂಖ್ಯೆ ಶೇ. 15 ರಷ್ಟು ಮಾತ್ರ. ಹೀಗೆ ಹೆಚ್ಚಿನ ಮಹಿಳಾ ಸದಸ್ಯರು ಅನುಭವವಿಲ್ಲದವರಾದರೂ ವಿದ್ಯಾಭ್ಯಾಸದಲ್ಲಿ ಮುಂದಿದ್ದವರು. ಆದರೆ ಶೇ. 90ರಷ್ಟು ಮೊದಲ ಬಾರಿಗೆ ಚುನಾಯಿತರಾದರವರು ಎಂದರೂ ಇವರಲ್ಲಿ ಶೇ. 50ರಷ್ಟು ವಿವಿಧ ಸಾಮಾಜಿಕ ಸಂಘಟನೆಗಳಲ್ಲಿ ಕೆಲಸಮಾಡಿದ ಅನುಭವವಿದ್ದರೂ ಇದನ್ನು ಕರ್ನಾಟಕದ ಪರಿಸ್ಥಿತಿಗೆ ನೀವೇ ಹೋಲಿಸಿ ನೋಡಿ.**

ಜನರೂಪಿತ ಯೋಜನೆ

ಈಗಾಗಲೇ ವಿವರಿಸಿದಂತೆ ಜನರೂಪಿತ ಯೋಜನೆ ಹೊಸ ಅಭಿವೃದ್ಧಿ ಸಂಸ್ಕೃತಿಯನ್ನು ಸೃಷ್ಟಿಸುವ ಉದ್ದೇಶದಿಂದ ರೂಪಿತವಾಯಿತು. ಕರ್ನಾಟಕ ಮತ್ತಿತರ ರಾಜ್ಯಗಳು ವಿಕೇಂದ್ರಿಕೃತ ಪಂಚಾಯತ್ ರಾಜ್ಯವ್ಯವಸ್ಥೆ ಅವುಗಳಿಗೆ ಹಣನೀಡಿಕೆ, ಅಭಿವೃದ್ಧಿಯೋಜನೆಗಳ ವರ್ಗಾವಣೆ ಅತ್ಯಂತ ಯಶಸ್ವಿಯಾಗಿ ಮಾಡಿದ್ದೇವೆ ಎಂದು ಘೋಷಿಸಿಕೊಳ್ಳುತ್ತವೆ. ಆದರೆ ಅದೇಮಾತುಗಳು ಕೇರಳ, ಪ.ಬಂಗಾಳದಂತಹ ವಾಮ ಪಂಥೀಯ ಸರ್ಕಾರಗಳ ಸಂದರ್ಭದಲ್ಲಿ ಕೇವಲ ಘೋಷಣೆಗಳಾಗದೆ ಸಾಮಾಜಿಕ ಚಳುವಳಿಗಳಾಗುತ್ತವೆ. ಇದಕ್ಕಿದ್ದಂತೆ ಒಂದು ಹಳ್ಳಿಯ ಮಗ್ಗುಲಿಗೆ ಕಲ್ಲುಗಳ ರಾಶಿ ಬಂದು ಬೀಳಲಾರಂಭಿಸುತ್ತದೆ. ಆಗ ಎಲ್ಲರೂ ಇದುಯಾಕೆ ಇಲ್ಲಿಗೆ ಬಂತು ಎಂದು ಏನೇನೋ ಊಹೆ ಮಾಡಿಕೊಳ್ಳಲಾರಂಭಿಸುತ್ತಾರೆ. ಆಗ ಯಾರೋ ದಿನನಿತ್ಯ ತಾಲ್ಲೂಕು ಕೇಂದ್ರಕ್ಕೆ ಅಥವಾ ಶಾಸಕರ ಮನೆಗೆ ಎಡತಾಕುವನೊಬ್ಬ ಇದು ಊರಿನಲ್ಲಿ ಸಮುದಾಯ ಭವನ ಕಟ್ಟಿಸುವುದಕ್ಕೆ ಎನ್ನುತ್ತಾರೆ. ಊರಿನ ಜನ "ಶಾಲೆ ಬೀಳುವಂತಿದೆ ಅದನ್ನು ಮೊದಲು ಕಟ್ಟಿಸಿರಿ ಎಂದರೆ ಸಮುದಾಯ ಭವನವಂತೆ ಈಗ ಯಾರಿಗೆ ಬೇಕಾಗಿತ್ತು ಅದು" ಎಂದು ಮೂಗು ಮುರಿಯುತ್ತಾ ಹೋಗುತ್ತನಲ್ಲ ಇದು ಸಾಮಾನ್ಯವಾಗಿ ನಮ್ಮ ಹಳ್ಳಿಗಳಲ್ಲಿ ಯೋಜನೆ ಕಾರ್ಯಗತವಾಗುವ ಪರಿ. ಆದರೆ ಜನರೂಪಿತ ಯೋಜನೆ ಅದರ ಹೆಸರೇ ತಿಳಿಸುವಂತೆ ಜನರೆ ರೂಪಿಸುವ ಯೋಜನೆ. ದಿಲ್ಲಿಯಲ್ಲಿ ಅಥವಾ ಬೆಂಗಳೂರಿನಲ್ಲಿ ಕುಳಿತ ಅಧಿಕಾರಿಗಳ ಗುಂಪು ಸೃಷ್ಟಿಸಿದ ಯೋಜನೆಯಲ್ಲ. ಹಳ್ಳಿಗಳ ವಾಸ್ತವ ಪರಿಸ್ಥಿತಿ, ಅವರ ನೈಜಸಮಸ್ಯೆಗಳು, ಚಿಂತನೆ, ಮನೋಭಾವ ಯಾವುದನ್ನೂ ಅರಿಯದ ಆದರೆ ತಮ್ಮನ್ನು ತಾವೇ ಸರ್ವಜ್ಞರೆಂದುಕೊಂಡ ಐಎಎಸ್. ಅದಿಕಾರಿಗಳು ರೂಪಿಸಿದ ಯೋಜನೆಯಲ್ಲ.

ಕೇರಳದಲ್ಲಿ ಪ್ರತಿಗ್ರಾಮದ ಪ್ರತಿ ವಾರ್ಡಿನಲ್ಲಿಯೂ ಅಲ್ಲಿಯ ಜನರನ್ನು ಸೇರಿಸಿ ಅವರಿಗೆ ಅವಶ್ಯವಿರುವ ಅಭಿವೃದ್ಧಿ ಕಾರ್ಯಗಳು, ಯೋಜನೆಗಳುಯಾವುವು? ಅದರಲ್ಲಿ ಅತಿತುರ್ತಾಗಿ ಆಗಬೇಕಾದದ್ದು ಯಾವುದು? ಎಂದು ಚರ್ಚಿಸಿ ಆಗಬೇಕಾದ ಎಲ್ಲ ಕೆಲಸಗಳ ಪಟ್ಟಿಯನ್ನೇ ತಯಾರಿಸುತ್ತಾರೆ. ಹಾಗೆಯೇ ಊರಿನ ಹರಿಜನರಿಗೆ ಗಿರಿಜನರಿಗೆ ಅವಶ್ಯವಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆಗೂ ಕೂಡ ಜೊತೆಗೆ ಊರಿನ ಪ್ರಾಕೃತಿಕ ಮಾನವ ಸಂಪತ್ತಿನ ಬಗೆಗಿನ ಸಮೀಕ್ಷೆ, ಅವುಗಳ ಉಪಯೋಗ ಮಾಡಿ ಜೀವನ ಮಟ್ಟವನ್ನು ಅಭಿವೃದ್ಧಿ ಮಾಡಿಕೊಳ್ಳುವ ರೀತಿ, ಆ ಊರಿನ ಸಂಕ್ಷಿಪ್ತ ಚರಿತ್ರೆ ಇವೆಲ್ಲವುಗಳನ್ನು ಒಳಗೊಂಡ ಗ್ರಾಮಮಟ್ಟದ ವರದಿಯನ್ನು ತಯಾರಿಸುತ್ತಾರೆ. ಈ ಹಂತದಲ್ಲಿ 30 ಲಕ್ಷ ಮಂದಿಭಾಗವಹಿಸಿ ಪ್ರತಿಗ್ರಾಮಕ್ಕೂ 80 ರಿಂದ 100 ಪುಟಗಳ ಒಂದು ವರದಿಯನ್ನು ತಯಾರಿಸಿದರು. ನಂತರ ಗ್ರಾಮಮಟ್ಟದ, ತಾಲ್ಲೂಕು ಮಟ್ಟದ, ಜಿಲ್ಲಾಮಟ್ಟದ ಸಮಿತಿಗಳು ಆಗಬೇಕಾದ ಒಂದೊಂದು ಅಭಿವೃದ್ಧಿಕಾರ್ಯಕ್ಕೂ ಒಂದೊಂದು ಯೋಜನೆಯನ್ನು ವಿವಿಧ ವಿಷಯಗಳ ಯೋಜನಾ ಸಮಿತಿಯ ಮೂಲಕ ತಯಾರಿಸುತ್ತವೆ. ಇವುಗಳಲ್ಲಿ ಚುನಾಯಿತ ಪ್ರತಿನಿಧಿ ಅದ್ಯಕ್ಷರಾಗಿ, ಸಂಬಂಧ ಪಟ್ಟ ಇಲಾಖೆಯವರು ಕಾರ್ಯದರ್ಶಿಯಾಗಿದ್ದರೂ ಗ್ರಾಮದಲ್ಲಿ ಈ ವಿಷಯದ ಬಗ್ಗೆ ಮಾಹಿತಿ ಇದ್ದವರು ಅಲ್ಲಿರುವ ಈ ವಿಷಯದಲ್ಲಿ ಶಿಕ್ಷಣ ಪಡೆದು ಅಥವಾ ಅನುಭವ ಪಡೆದ, ನಿವೃತ್ತಿ ಪಡೆದ ಉದ್ಯೋಗಿಗಳು ಇವರೆಲ್ಲಾ ಅದರ ಸದಸ್ಯರಾಗಬಹುದು. ಇವರೆಲ್ಲರಿಗೂ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುವಂತೆ ಅಭಿವೃದ್ಧಿ ವಿಚಾರಸಂಕಿರಣಗಳ ಮೂಲಕ ತರಬೇತಿ ನೀಡಲಾಗಿದೆ. ಎಲ್ಲ 14,173 ಚುನಾಯಿತರೂ ಸೇರಿ ಈ ಹಂತದಲ್ಲಿ 3 ಲಕ್ಷಕ್ಕೂ ಹೆಚ್ಚು ಜನಭಾಗವಹಿಸಿದ್ದಾರೆ. ಈ ಹಂತದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಯೋಜನೆಗಳನ್ನು ರೂಪಿಸಲಾಗಿದೆ. ಹೀಗೆ ಈ ಯೋಜನೆಗಳ ಪರಿಶೀಲನೆ ಅದಕ್ಕೆ ಹಣಕಾಸು ಹೊಂದಿಸಿಕೊಳ್ಳುವುದು ಇತ್ಯಾದಿ ಹಲವಾರು ಹಂತಗಳಲ್ಲಿ ಮತ್ತಷ್ಟು ಹೆಚ್ಚು ಜನ ತಜ್ಞರು ಉಪನ್ಯಾಸಕರೂ, ಪ್ರಾಧ್ಯಾಪಕರು, ಆಯಾ ಪ್ರದೇಶದ ವೈದ್ಯರು, ಇವರ ಜೊತೆಯಲ್ಲಿ ಈ ಕೆಲಸದ ಒಳ್ಳೆಯ ಅನುಭವವಿರುವ ಕೂಲಿಕಾರರೂ ಸೇರಿ ಯೋಜನೆಗಳನ್ನು ರೂಪಿಸಿದ್ದಾರೆ. ಜಾರಿಗೊಳಿಸಿದ್ದಾರೆ.



ಜನರೂಪಿತ ಯೋಜನೆಯಲ್ಲಿ ಮಹಿಳೆಯರು

ಜನರೂಪಿತ ಯೋಜನೆಯಲ್ಲಿ ಮಹಿಳೆಯರು

ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾಮಾನ್ಯ ಜನ ಭಾಗವಹಿಸಿದ ಯೋಜನೆಗಳ ತಯಾರಿಕೆಯಲ್ಲಿ ಮಹಿಳೆಯರೂ ಪಾತ್ರವಹಿಸಿದ್ದಾರೆ. ವಾರ್ಡ್ ಮಟ್ಟ, ಗ್ರಾಮಮಟ್ಟದ ಸಭೆಗಳಲ್ಲಿ ಶೇ. 24.82ರಷ್ಟು ಜನ ಮಹಿಳೆಯರು ಅಂದರೆ ಏಳುಲಕ್ಷಕ್ಕಿಂತಲೂ ಹೆಚ್ಚು ಜನ ಮಹಿಳೆಯರು ಭಾಗವಹಿಸಿದ್ದಾರೆ. ತಮ್ಮ ವಾರ್ಡಿನ ಗ್ರಾಮದ ಸಮಸ್ಯೆಗಳು, ಸಂಪನ್ಮೂಲಗಳು ಇವುಗಳ ಸಮೀಕ್ಷೆ ನಡೆಸಿ ಅನುಭವ ಪಡೆದಿದ್ದಾರೆ. ಇಡೀ ಊರಿನ ಬಗ್ಗೆ, ವಿವಿಧ ಇಲಾಖೆಗಳ ಬಗ್ಗೆ ಅವು ಯೋಜನೆಗಳ ಬಗ್ಗೆ ತಿಳುವಳಿಕೆ ಪಡೆಯಲಾರಂಭಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳಂತೂ ವಿವಿಧ ವಿಷಯಗಳ ಯೋಜನೆಗಳನ್ನು ರೂಪಿಸುವ ಸಮಿತಿಗಳಲ್ಲಿ ಭಾಗವಹಿಸಿದ್ದಾರೆ. ಯೋಜನೆಗಳನ್ನು ರೂಪಿಸುವ ಅನುಭವದಲ್ಲಿ ಭಾಗಿಯಾಗಿದ್ದಾರೆ. ಇದರ ಜೊತೆಗೆ ಅಭಿವೃದ್ಧಿ ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ವಿವಿಧ ಮಟ್ಟದ ತರಬೇತಿಗಳು ಇವೆಲ್ಲದರಲ್ಲಿಯೂ ಭಾಗವಹಿಸಿದ ಎಲ್ಲದರಲ್ಲಿ ಅಭಿವೃದ್ಧಿ ಮತ್ತು ಮಹಿಳಾಪರ ದೃಷ್ಟಿಕೋನ ಎಂಬ ಬಗ್ಗೆ ವಿಶೇಷ ಉಪನ್ಯಾಸ ತರಬೇತಿಗಳನ್ನು ನೀಡಲಾಗಿದೆ. ಪ್ರತಿಯೋಜನೆ, ಕೆಲಸದ ರೂಪುರೇಷೆಗಳನ್ನು ನಿರ್ಧರಿಸುವಾಗಲೂ ಆಯೋಜನೆಯನ್ನು ಮಹಿಳಾ ಪರ ದೃಷ್ಠಿಯಿಂದ ಮೌಲ್ಯಮಾಪನ ಮಾಡಿದ ಬಗ್ಗೆ ವಿಶೇಷ ಭಾಗವೊಂದನ್ನು (ಇಂದು ಯಾವುದೇ ಅಭವೃದ್ಧಿಯೋಜನೆಯನ್ನು ರೂಪಿಸುವಾಗಲೀ ಪರಿಸರ ದೃಷ್ಟಿಯಿಂದ ಮೌಲ್ಯಮಾಪನ ಮಾಡುವುದು ಅನಿವಾರ್ಯವೆಂದು ನಿಯಮಗಳನ್ನು ರೂಪಿಸಿರುವಂತೆ) ಆಯೋಜನೆಯ ವರದಿಗಳಲ್ಲಿ ಸೇರಿಸಿರಲೇಬೇಕೆಂದು ಮಾರ್ಗದರ್ಶಿ ಸೂಚನೆಗಳನ್ನು ನೀಡಲಾಗಿದೆ. ಜೊತೆಗೆ ಪ್ರತಿ ಪಂಚಾಯ್ತಿ, ಪುರಸಭೆಯಲ್ಲಿಯೂ ಮಹಿಳೆಯರದೇ ಆದ ಸಮಸ್ಯೆಗಳ ಪರಿಹಾರಕ್ಕೆ 10ರಷ್ಟು ಹಣವನ್ನು ಮೀಸಲಾಗಿಡಲಾಗಿದೆ. ಈ ಯೋಜನೆಯ ಫಲಾನುಭವಿಗಳಾದ ಮಹಿಳೆಯರದೇ ಆದ ಫಲಾನುಭವಿ ಸಮಿತಿಯೊಂದು ಆಯಾ ಪ್ರದೇಶದಲ್ಲಿ ಈ ಯೋಜನೆಯನ್ನು ಜಾರಿಗೆ ತರುತ್ತದೆ. ಈ ಮೂಲಕ ಮಹಿಳೆಯರು ಯೋಜನೆಗಳನ್ನು ರೂಪೀಕರಿಸುವುದರಲ್ಲಿ ಭಾಗವಹಿಸುವ ಅವಕಾಶಗಳನ್ನು ಹಾಗೂ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ.

ಮಹಿಳಾ ಸದಸ್ಯರ ಬೆಳವಣಿಗೆ

ಈ ಎಲ್ಲಾ ಹಂತದ ಪ್ರಕ್ರಿಯೆಗಳಲ್ಲಿ ಪಾಲುಗೊಂಡ ಮಹಿಳಾ ಸದಸ್ಯರಿಗೆ ಚುನಾಯಿತ ಪ್ರತಿನಿಧಿಯಾಗಿ ಕೆಲಸಮಾಡಲು ಬೇಕಾದ ಅನುಭವ, ತಾವೇ ಯೋಜನೆಯನ್ನು ರೂಪಿಸುವ ಹೆಮ್ಮೆಯ ಪಾತ್ರ ಲಭ್ಯವಾಗಿದೆ. ಈ ಒಂದು ವರ್ಷದ

ಗ್ರಾಮ ಪಂಚಾಯತ್ ಚುನಾವಣೆ

ಇದ್ದಾಗಲೂ ಈಗಿನ ಗ್ರಾಮ ಪಂಚಾಯಿತಿ ಇದ್ದಾಗಲೂ ಈ ಅಭಿವೃದ್ಧಿ ಅನುದಾನವು ಒಂದು ಉತ್ತಮ ವ್ಯವಸ್ಥೆಯಾಗಿದ್ದರೂ ರಾಜಕೀಯ ಪಕ್ಷಗಳ ಚುನಾಯಿತ ಸದಸ್ಯರಿಗೆ, ಇಚ್ಛಾಶಕ್ತಿ ಕೊರತೆ, ದಕ್ಷತೆ ನಿಷ್ಠೆ ಇಲ್ಲದೇ ಇರುವುದರಿಂದ ಅಭಿವೃದ್ಧಿ ಅನುದಾನ ದುರುಪಯೋಗ ಹೆಚ್ಚಾಗಿದೆ. ಕುಡಿಯುವ ನೀರಿನ ಇಂತಹ ಯೋಜನೆಗಳಿಗೆ ವರ್ಷಕ್ಕೆ 3000 ಕೋಟಿಯಿಂದ 4000 ಕೋಟಿ ಖರ್ಚು ಮಾಡಿದರೂ ಕೂಡ ಜನತೆಗೆ ಕುಡಿಯುವ ನೀರು ಸಿಗದಂತಾಗಿದೆ. ಈಗ ಮತ್ತೆ ಗ್ರಾಮ ನೈರ್ಮಲ್ಯ ಮತ್ತು ಕುಡಿಯುವ ನೀರಿಗಾಗಿ 3000 ಕೋಟಿ ರೂ. ರಷ್ಟು ಹಣ ಸಾಲ ಪಡೆಯುವುದಕ್ಕೆ ಸರ್ಕಾರ ಮುಂದಾಗಿದೆ. ರಾಜಕೀಯ ಇಚ್ಛಾಶಕ್ತಿ ನಿಷ್ಠೆ ತತ್ವಬದ್ಧತೆ ಇಲ್ಲದ ಈ ಬಂಡವಾಳಶಾಹಿ ಜಮೀನ್ದಾರಿ ಪಕ್ಷಗಳು, ಪಕ್ಷಗಳ ಕಾರ್ಯಕರ್ತರು ಮತ್ತು ಆ ಜನತೆಯ ಅಭಿವೃದ್ಧಿ, ದುಡಿಯುವ ಜನತೆಯ ಕಾಳಜಿ, ಸಮಾಜದ ಪ್ರಗತಿ ಇತ್ಯಾದಿಗಳನ್ನು ಕಡೆಗಣಿಸಿ, ಹಣ ದುರುಪಯೋಗ ತಮ್ಮ ಪ್ರಮುಖ ಉದ್ದೇಶವಾಗಿದೆ. ಎಲ್ಲೆಡೆಯೂ ಹಣ ದುರುಪಯೋಗದ ಪ್ರಕ್ರಿಯೆಗಳು, ಸುಳ್ಳು ದಾಖಲೆಗಳ ಸೃಷ್ಟಿ, ಇತ್ಯಾದಿಗಳು ದಿನಬೆಳಿಗ್ಗೆಯ ಮಾತಾಗಿದೆ. ಜನಪರ ಕಾಳಜಿವುಳ್ಳಂಥ ಕಾರ್ಯಕರ್ತರು ಗೆದ್ದು ಬಂದಲ್ಲಿ ಜನ ಉತ್ತಮ ಕೆಲಸ ಮಾಡಿದ್ದನ್ನು ಅಲ್ಲಲ್ಲಿ ಕಾಣಬಹುದು.

ಇನ್ನೊಂದು ಅನುದಾನ ಕೃಷಿ ಕೂಲಿಕಾರರಿಗಾಗಿ ಕೆಲಸ ಒದಗಿಸುವ ರೋಜಗಾರ ಯೋಜನೆಯ ಹಣವಾಗಿದೆ. ಈ ಹಣವು ಶಾಲಾ ಕಟ್ಟಡ, ಅಂಗನವಾಡಿ ಕಟ್ಟಡ ಒಳಚರಂಡಿ, ಶೌಚಾಲಯ, ಸಮುದಾಯ ಭವನ, ಮಹಿಳಾ ಮಂಡಳ, ಬಸ್ ಸ್ಟ್ಯಾಂಡ್ ಕಟ್ಟಲು ಸೂಚಿಸಲಾಗಿದೆ. ಹಲವಾರು ಕಡೆಗಳಲ್ಲಿ ಕಳಪೆ ಕಾಮಗಾರಿಗಳು ನಡೆದು ಕಟ್ಟಡಗಳು ಶಿಥಿಲಗೊಂಡಿವೆ. ಕೆಲವು ಕಡೆಗಳಲ್ಲಿ ಉತ್ತಮ ಕಟ್ಟಡಗಳು ಕೂಡಾ ಇವೆ. ಆದರೆ ಕೆಲಸವಿಲ್ಲದ ಕೃಷಿ ಕೂಲಿಕಾರರಿಗೆ ಕೆಲಸ ಕೊಡಲು ಬಂದ ಹಣವನ್ನು ಉದ್ದೇಶಪೂರ್ವಕವಾಗಿ ಕಟ್ಟಡ ಕಟ್ಟಲು ಬಳಸಿರುವುದು ಆಳುವ ವರ್ಗದ ಅಥವಾ ಜಮೀನ್ದಾರಿ ವರ್ಗ ಕೃಷಿ ಕೂಲಿಕಾರರ ವಿರೋಧಿ ಪಕ್ಷಪಾತಪೂರ್ಣ ನೀತಿಯಾಗಿದೆ. ಇದನ್ನು ಇಡೀ ಕರ್ನಾಟಕದಾದ್ಯಂತ ಕಾಣಬಹುದು. **ಬಡವರಿಗಾಗಿ ಇರುವ ಐ.ಆರ್.ಡಿ.ಪಿ. ಸಾಲ ಇಂದಿನ ಸ್ವರ್ಣ ಜಯಂತಿ ರೋಜಗಾರ ಯೋಜನೆ ಸಾಲ, ಮನೆ ನಿರ್ಮಾಣ-ಆಶ್ರಯ ಮನೆ, ಭಾಗ್ಯ ಜ್ಯೋತಿ, ಕೃಷಿ ಉಪಕರಣ, ಕೃಷಿ ಸಾಮಾಗ್ರಿ ಖರೀದಿಸಲು ಸಬ್ಸಿಡಿ ಹಸಿರು ಕಾರ್ಡು ಇತ್ಯಾದಿಗಳನ್ನು ಕಡುಬಡವ ಕೃಷಿ ಕೂಲಿಕಾರರಿಗೆ ಹಂಚದೇ ಹೆಚ್ಚಾಗಿ ಉಳ್ಳವರು ಮಾತ್ರ ಪಡೆದಿರುವುದು ಕರ್ನಾಟಕದ ತುಂಬೆಲ್ಲಾ ಕಾಣುತ್ತೇವೆ. ಏಕೆ ಹೀಗೆ?** ಎಂದೆನಿಸಿದರೂ ಪಂಚಾಯಿತಿಗಳಲ್ಲಿ ಅಧಿಕಾರ ಹಿಡಿದ ಅಥವಾ ಗ್ರಾಮೀಣ ಪ್ರದೇಶದ ಜನತೆಯನ್ನು ನಿಯಂತ್ರಿಸುವ ಭೂಮಾಲಿಕ ಜಮೀನುದಾರಿ ವರ್ಗದ ಸಹಜ ಗುಣವಾಗಿದೆ.



1987 ರಲ್ಲಿ ಜಾರಿಮಾಡಿದ ಪಂಚಾಯಿತಿ ವ್ಯವಸ್ಥೆ ಒಳ್ಳೆದೋ 1994 ರ ಜಾರಿಯಾದ ಈಗಿನ ಪಂಚಾಯಿತಿ ವ್ಯವಸ್ಥೆ ಒಳ್ಳೆಯದೋ ಎಂದು ತರ್ಕಗಳನ್ನು ಬಂಡವಾಳ ಶಾಹಿ ಜಮೀನ್ದಾರಿ ಪಕ್ಷಗಳಾದ ಕಾಂಗ್ರೆಸ್, ಜನತಾ ದಳ, ಬಿಜೆಪಿಗಳು ಕರ್ನಾಟಕದಲ್ಲಿ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. 87 ರ ವ್ಯವಸ್ಥೆ ಸರಿಯಾಗಿದೆ. ಈಗಿನ ವ್ಯವಸ್ಥೆ ಸರಿಯಿಲ್ಲ ಎಂದು ಅಥವಾ ಈಗಿನ ಪಂಚಾಯಿತಿ ವ್ಯವಸ್ಥೆ ಸರಿಯಾಗಿದೆ, ಹಿಂದಿನ ವ್ಯವಸ್ಥೆ ಸರಿ ಇಲ್ಲವೆಂದು ಆಳುವ ವರ್ಗದ ಪ್ರಚಾರಕ್ಕೆ ಬಲಿಯಾಗಿ ಜನಸಾಮಾನ್ಯರೂ ಕೂಡಾ ಮಾತಾಡಿಕೊಳ್ಳುತ್ತಾರೆ. ಹಾಗಿದ್ದರೆ ಯಾವುದು ಸರಿ ಎಂಬ ಪ್ರಶ್ನೆಯೂ ಕೂಡಾ ನಮ್ಮ ಮುಂದೆ ಬರುತ್ತದೆ. **ಕರ್ನಾಟಕದಲ್ಲಿ ಭೂ ಸುಧಾರಣೆ ಜಾರಿ ಮಾಡದೆ ಪಂಚಾಯ್ತಿ ವ್ಯವಸ್ಥೆ ರೂಪಿಸಿದ್ದು ಜಮೀನ್ದಾರಿ ಮತ್ತು ಭೂಮಾಲಿಕರ ನೇತೃತ್ವದಲ್ಲಿಸಮಾಜದ ಮೇಲೆ ರಾಜಕೀಯ ಹಿಡಿತ ಸಾಧಿಸಲು ಜಾರಿ ಮಾಡಿದ ಒಂದು ವ್ಯವಸ್ಥೆ ಯಾಗಿದೆ ಎಂಬುದನ್ನು ನಾವುಗಳ ಗಮನಿಸ ಬೇಕಾಗಿದೆ.** ಸಮಾಜ ಬದಲಾವಣೆಗಾಗಿ ಹೋರಾಟ ನಡೆಸುವ ನಾವುಗಳು ಗ್ರಾಮೀಣ ಪ್ರದೇಶದ ಬಹು ಸಂಖ್ಯಾತ ಭೂಮಾಲಿಕ ಜಮೀನ್ದಾರರಿಗೆ ಹಿಮ್ಮೆಟ್ಟಿಸುವುದೇ ನಿಜವಾದ ಪ್ರಜಾಪ್ರಭುತ್ವದ ಸ್ಥಾಪನೆ ಮಾಡುವುದಾಗಿದೆ.

ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆಗಳು ಬಹಳಷ್ಟು ಜಾರಿಯಾಗಿವೆ. ಆದರೆ ನಲ್ಲಿಗಳು ಮನೆಗೆ ಕೊಡುವುದರ ಮೂಲಕ ಸಾರ್ವಜನಿಕ ನೀರಿನ ವಿತರಣೆ ಕುಂಠಿತಗೊಂಡು ಸಾಮಾನ್ಯರ ಪಾಲಿಗೆ ಕುಡಿಯುವ ನೀರು ಇಲ್ಲದಂತಾಗಿದೆ. ನೀರು ತರಲು ಹೋದ ಹೆಣ್ಣು ಮಕ್ಕಳು ಕುಡಿಯುವ ನೀರಿಗಾಗಿ ಜಗಳವಾಡುವ ಸಂದರ್ಭಗಳು ಹೆಚ್ಚಾಗಿವೆ. ಉಳ್ಳವರ ಸ್ವತ್ತಾಗಿರುವ ಕುಡಿಯುವ ನೀರು ಜನಸಾಮಾನ್ಯರಿಗೆಲ್ಲರಿಗೂ ಸಿಗುವಂತೆ ಮಾಡುವುದೇ ಒಂದು ಪ್ರಜಾಸತ್ತಾತ್ಮಕ ಬೇಡಿಕೆಯಾಗಿದೆ. ಒಂದು ಕುಟುಂಬದಲ್ಲಿ ನಾಲ್ಕಾರು ಭಾಗಗಳಾಗಿ ಮನೆ ನಿವೇಶನಗಳು 10 ರಿಂದ 20 ಸಾವಿರ ರೂ. ವರೆಗೆ ಮಾರಾಟವಾಗುತ್ತಿವೆ. ನಿವೇಶನ ಇಲ್ಲದ ಎಲ್ಲರಿಗೂ ಮನೆ ನಿವೇಶನ ಬೇಕೆಂಬ ಒಂದು ಪ್ರಮುಖ ಬೇಡಿಕೆಯೂ ದುಡಿಯುವ ಜನತೆಯನ್ನು ಒಂದುಗೂಡಿಸಲು ಪ್ರಮುಖ ಅಸ್ತ್ರವಾಗಿದೆ.

ಒಂದೇ ರೇಷನ್ ಕಾರ್ಡು ಹೊಂದಿದ ಒಂದು ಕುಟುಂಬ ವಲ್ಲಿ ಭಾಗವಾದಾಗ ಪ್ರತಿ ತಿಂಗಳು ಒಬ್ಬೊಬ್ಬರಂತೆ ರೇಷನ್ ತರುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಎಲ್ಲರಿಗೂ ರೇಷನ್ ಕಾರ್ಡಿಗಾಗಿ ಹೋರಾಟ ನಡೆಸುವ ಅಗತ್ಯವಿದೆ. ಅದೇ ರೀತಿ ಆಶ್ರಯ ಮನೆ, ಸ್ವರ್ಣ ಜಯಂತಿ ರೋಜಗಾರ ಯೋಜನೆ ಸಾಲ, ಭಾಗ್ಯಜ್ಯೋತಿ ಆಶ್ರಯ ಮನೆ, ಅರ್ಹರಾದ ಬಡವರಿಗೆ ಸಿಗಬೇಕೆಂಬ ಜನತೆಯ ಆಕಾಂಕ್ಷೆ ಈಡೇರಿಸುವುದು ಈ ಎಲ್ಲಾ ಬೇಡಿಕೆಗಳನ್ನು ಪಂಚಾಯತಿಯಲ್ಲಿ ಮಧ್ಯ ಪ್ರವೇಶ ಮಾಡಿ ಬಗೆಹರಿಸಬಹುದಾಗಿದೆ. ಗ್ರಾಮೀಣ ಪ್ರದೇಶದ ಜಮೀನ್ದಾರಿ ಭೂಮಾಲಿಕರ ವರ್ಗ ಹಿತವನ್ನು ಬಯಲಿಗೆಳೆದು ಹೋರಾಟ ನಡೆಸಲು ಈ ಪಂಚಾಯಿತಿ ವ್ಯವಸ್ಥೆ ಬಳಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ರಾಜ್ಯದ ಒಂದು ಪಂಚಾಯ್ತಿಯಲ್ಲಿ ಒಂದು ಸ್ಥಾನ ಪಡೆಯುವುದು ಕೂಡ ಆ ಪಂಚಾಯಿತಿಯಲ್ಲಿ ಶ್ರಮ ಜೀವಿ ಜನತೆಯ ಹಿತಾಕ್ಕಾಗಿ ದುಡಿಯುವ ಒಬ್ಬ ಪ್ರತಿನಿಧಿ ಕಳುಹಿಸದಂತಾಗುತ್ತದೆ.

400 ಜನ ಸಂಖ್ಯೆಗೆ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯರು ಆಯ್ಕೆಗೊಳ್ಳುವಂತೆ ಈಗಿನ ವ್ಯವಸ್ಥೆ ರೂಪಿಸಲಾಗಿದೆ. 2 ರಿಂದ 3 ಸ್ಥಾನಗಳ ಒಂದು ಮತಕ್ಷೇತ್ರ ರಚಿಸಲಾಗಿದೆ. ಈ ಮತಕ್ಷೇತ್ರವು ಸುಮಾರು 800 ರಿಂದ 1000 ಜನತೆಗೆ ಒಂದು ಮತಕ್ಷೇತ್ರವು 500 ರಿಂದ 600 ಮತದಾರರಿಗೆ ಒಂದು ಕ್ಷೇತ್ರವಾಗಿದೆ. ಅಂದರೆ ಒಂದು ಮತಕ್ಷೇತ್ರ 2-3 ಸ್ಥಾನ ಗೆಲ್ಲಲು 300 ಮತದಾರರ ಬೆಂಬಲ ಪಡೆದಲ್ಲಿ ಗೆಲ್ಲಬಹುದಾಗಿದೆ. ಒಂದು ಓಣಿಯ ಕುಡಿಯುವ ನೀರಿನ ಪ್ರಶ್ನೆ ಇತರ ಪ್ರಶ್ನೆಗಳನ್ನು ಎತ್ತಿ ಹೋರಾಟ ರೂಪಿಸಿ ಅದಕ್ಕೆ ಯಾವುದಾದರೂ ಒಂದು ಸಾಮೂಹಿಕ ಸಂಘಟನೆ ರೂಪ ನೀಡಿದ್ದಲ್ಲಿ ಒಂದು ಕ್ಷೇತ್ರದಲ್ಲಿ ಗೆಲ್ಲಲು ಸಹಾಯಕವಾಗುತ್ತದೆ ಆದ್ದರಿಂದ ಗ್ರಾಮ ಪಂಚಾಯಿತಿ ಚುನಾವಣೆ ದುಡಿಯುವ ಜನತೆಯನ್ನು ಒಗ್ಗೂಡಿಸಲು ಶಕ್ತಿಗಳನ್ನು ಬಲಗೊಳಿಸಲು ತುಳಿತಕ್ಕೆ ಒಳಪಟ್ಟ ಜನ ಸಮುದಾಯವನ್ನು ಎತ್ತಿ ನಿಲ್ಲಿಸಲು ಈ ಪಂಚಾಯಿತಿ ಚುನಾವಣೆ ಒಂದು ಪ್ರಮುಖ ಸಾಧನವಾಗಿದೆ.

ಮಹಿಳೆಯರಿಗೆ, ದಲಿತರಿಗೆ, ಹಿಂದುಳಿದ ವರ್ಗ, ಮೀಸಲಾತಿ ನೀಡಿರುವುದನ್ನು ಬಳಸಿಕೊಂಡು ಆ ವಿಭಾಗಗಳಲ್ಲಿ ತುಳಿತಕ್ಕೆ ಒಳಪಟ್ಟ ಜನರನ್ನು ಒಗ್ಗೂಡಿಸಿ ಅವರ ಹಕ್ಕುಗಳಿಗಾಗಿ ಸಾಮಾಜಿಕ ದೌರ್ಜನ್ಯದ ವಿರುದ್ಧವಾಗಿ, ದುಡಿಯುವ ಜನತೆಯನ್ನು ಒಂದುಗೂಡಿಸಲು ನಾವು ಕಾರ್ಯನಿರತರಾಗಬೇಕು. ಅವರಿಗೆ ಕಾಡುವ ಪ್ರಶ್ನೆಗಳನ್ನು ಮುಂದೆ ಇಟ್ಟು ಚುನಾವಣೆಯಲ್ಲಿ ಗೆಲ್ಲಲು ಪ್ರಯತ್ನಿಸಬೇಕಾಗಿದೆ.

ಗುಲಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಅಂಬಲಗಾ ಮಂಡಳಿ ಪಂಚಾಯಿತಿ ಈಗಿನ ಗ್ರಾಮ ಪಂಚಾಯಿತಿಯಲ್ಲಿ 11 ವರ್ಷಗಳಿಂದ ಆಡಳಿತ ನಡೆಸಲಾಗುತ್ತಿದೆ. ಮೊದಲು ಕುಡಿಯುವ ನೀರು ಸಿಗದ ಅಂಬಲಗಾಕ್ಕೆ ಹೆಣ್ಣು ಮದುವೆ ಮಾಡಿಕೊಡಬಾರದು ಎಂಬ ಮಾತಾಡುತ್ತಿದ್ದರು. ಈಗ ಕುಡಿಯುವ ನೀರಿನ ಸಾರ್ವಜನಿಕ ವಿತರಣೆ ಅತ್ಯುತ್ತಮವಾಗಿ ನೋಡಿಕೊಳ್ಳಲು ಸಾಧ್ಯವಾಗಿದೆ. ವಿದ್ಯುತ್ ದೀಪ, ರಸ್ತೆ ಒಳಚರಂಡಿ ವ್ಯವಸ್ಥಿತವಾಗಿ ಇಡಲು ಸಾಧ್ಯವಾಗಿದೆ. ಆಶ್ರಯ ಯೋಜನೆ ಅಡಿಯಲ್ಲಿ 65 ಮನೆಗಳು ಮನೆ ಇದ್ದವರಿಗೇ ಹಂಚಿದ್ದನ್ನು ಪ್ರತಿಭಟಿಸಿ ಮನೆ ಇಲ್ಲದವರು ಮನೆಯಲ್ಲಿ ಉಳಿದಾಗ ಗ್ರಾಮ ಪಂಚಾಯಿತಿ ಅವರಿಗೆ ರಕ್ಷಣೆ ನೀಡಿತು. ಶಾಲಾ ಕಟ್ಟಡ ಸಮುದಾಯ ಭವನ, ಮಹಿಳಾ ಮಂಡಳ, ಪಂಚಾಯಿತಿ ಕಛೇರಿ ಕಟ್ಟಡ ಕಟ್ಟಿಸಿ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳನ್ನು ಕಟ್ಟಿಸಿ ಬಂದ ಹಣವನ್ನು ಸದ್ಬಳಕೆ ಮಾಡಿದೆ. ಕಳೆದ 5 ವರ್ಷದ ಖರ್ಚು ವೆಚ್ಚಗಳನ್ನು ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರು ಗ್ರಾಮದ ಜನತೆಗೆ ಗ್ರಾಮ ಸಭೆ ನಡೆಸಿ ವಿತರಣೆ ನೀಡಿದ್ದಾರೆ.



ಅಲ್ಪ ಸಂಖ್ಯಾತರ ಸ್ಮಶಾನಕ್ಕೆ ತಂತಿ ಬೇಲಿ ಹಾಕಿಸಿಕೊಟ್ಟಿದ್ದಾರೆ. ಐ.ಆರ್.ಡಿ.ಪಿ. ಹಸಿರು ಕಾರ್ಡು, ಭಾಗ್ಯ ಜ್ಯೋತಿ ಅರ್ಹ ಬಡವರಿಗೆ ಹಂಚುವ ಮೂಲಕ ದುಡಿಯುವ ಜನತೆ ಪರವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗಿದೆ. ಮಹಿಳೆಯರಿಗಾಗಿ ಶೌಚಾಲಯವನ್ನು ನಿರ್ಮಿಸಿ ಅದನ್ನು ಸುವ್ಯವಸ್ಥಿತವಾಗಿ ಇಟ್ಟು ಮಹಿಳೆಯರು ರಸ್ತೆಯ ಮೇಲೆ ಶೌಚಾಲಯ ಮಾಡುವುದನ್ನು ತಪ್ಪಿಸಲಾಗಿದೆ. ಈ ಕೆಲಸವನ್ನು ಮಹಿಳೆಯರು ಮತ್ತು ಪ್ರಜ್ಞಾವಂತರು ಶ್ಲಾಘಿಸಿದ್ದಾರೆ. ಬಟ್ಟೆ ಒಗೆಯುವ ಕಲ್ಲುಗಳು ಹಾಕಿ ನೀರಿನ ತೊಟ್ಟಿ ನಿರ್ಮಿಸಿ ಮಹಿಳೆಯರಿಗೆ ಬಟ್ಟೆ ಒಗೆಯಲು ಅನುಕೂಲ ಮಾಡಿಕೊಡಲಾಗಿದೆ.

ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗುರಕಿ ಪಂಚಾಯಿತಿಯಲ್ಲಿ ಸ್ವಯಂ ಇಟ್ಟಿಗೆಗಳನ್ನು ತಯಾರಿಸಲು ನಿರ್ಮಿತ ಕೇಂದ್ರ ತಂತ್ರಜ್ಞಾನ ಪಡೆದು ಕೃಷಿ ಕೂಲಿಕಾರರನ್ನು ತೊಡಗಿಸಿ ಅಂಗಡಿ ಮಳಿಗೆಗಳನ್ನು ನಿರ್ಮಸಿ ಗ್ರಾಮೀಣ ಕಸಬುದಾರರಿಗೆ ಬಾಡಿಗೆ ನೀಡಲಾಗಿದೆ. ಈ ರೀತಿ ಪಂಚಾಯಿತಿಗೆ ಆದಾಯ ಹೆಚ್ಚಿಸಲಾಗಿದೆ. ಇಲ್ಲಿ ಕೃಷಿ ಕೂಲಿಕಾರರಿಗೆ ಆದ್ಯತೆ ನೀಡಲಾಗಿದೆ. **ಬಾಗೇಪಲ್ಲಿ ತಾಲ್ಲೂಕಿನಲ್ಲಿ ಪಂಚಾಯಿತಿ ನಡೆಸುತ್ತಿರುವ ನಮ್ಮ ಸಂಗಾತಿಗಳು ಕುಡಿಯುವ ನೀರು, ಅಕ್ರಮ ಮನೆಗಳನ್ನು ಸಕ್ರಮಗೊಳಿಸುವುದು, ಅಂಗನವಾಡಿ ಕಟ್ಟಡ ವಿದ್ಯುತ್ ದೀಪ, ಭಾಗ್ಯಜೊತಿ, ಹಸಿರು ಕಾರ್ಡು ಹಂಚುವಿಕೆ. ಐ.ಆರ್.ಡಿ.ಪಿ. ಇತ್ಯಾದಿಗಳು ಅರ್ಹರಿಗೆ ಹಂಚುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ಕಾರವಾರ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಹಂಚು ಕಾರ್ಮಿಕರ ಬೆಂಬಲದಿಂದ ಅಧಿಕಾರಕ್ಕೆ ಬಂದ ಅಲ್ಲಿಯ ಸಂಗಾತಿಗಳು ಅಕ್ರಮ ಮನೆಗಳನ್ನು ಸಕ್ರಮಗೊಳಿಸುವಿಕೆ, ಕುಡಿಯುವ ನೀರು ಮತ್ತಿತರ ಜನೋಪಯೋಗಿ ಕೆಲಸಗಳನ್ನು ಜಾರಿ ಮಾಡುವ ಮೂಲಕ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ.**


ಚಿಂಚೋಳಿ ತಾಲೂಕಿನಲ್ಲಿ ಹೊಡೇಬೀರನಳ್ಳಿ ಪಂಚಾಯಿತಿ ಕುಪನೂರ ಗ್ರಾಮದ ಖಾಜಾಮಿಯಾ ಕಳೆದ 6 ವರ್ಷ ಜನರ ಜೊತೆ ನಿರಂತರ ಸಂಪರ್ಕ ಇಟ್ಟು ಕೆಲಸ ಮಾಡಿ ತಾನು ಪುನರಾಯ್ಕೆ ಭರವಸೆಯೊಂದಿಗೆ ಇನ್ನಿಬ್ಬರ ಸದಸ್ಯರನ್ನು ಗೆಲ್ಲಿಸುವ ಭರವಸೆ ಹೊಂದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗೆ ಆಯ್ಕೆಯಾದ ಸದಸ್ಯರು ಜನೋಪಯೋಗಿ ಕೆಲಸಗಳನ್ನು ಮಾಡಿ ಅಕ್ರಮ ಮನೆಗಳನ್ನು ಸಕ್ರಮಗೊಳಿಸುವುದು ಹೀಗೆ ಹತ್ತು ಹಲವಾರು ವಿಷಯಗಳಲ್ಲಿ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದೆ.

ಇಡೀ ಕರ್ನಾಟಕ ರಾಜ್ಯದಾದ್ಯಂತ ಬೇರೆ ಬೇರೆ ಪ್ರದೇಶದಲ್ಲಿಚುನಾಯಿತರಾದ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ಕೆಲಸ ಮಾಡಿಸಲು ಸಾಧ್ಯವಾಗದಿದ್ದರೂ ತಮಗೆ ಸಿಕ್ಕ ಮಾರ್ಗದರ್ಶನದಲ್ಲಿ ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಪಂಚಾಯಿತಿಯಲ್ಲಿ ನಮ್ಮ ಸದಸ್ಯರು ಗೆದ್ದು ಬರುವುದು, ನಮ್ಮ ಬಲ ಉಳಿಸಿಕೊಳ್ಳುವುದು ಮತ್ತು ವಿಸ್ತರಿಸಲು ಸಾಧ್ಯವಾಗಿದೆ. ಆದರೆ ಬಂಡವಾಳ ಶಾಹಿ ಜಮೀನ್ದಾರಿ ವ್ಯವಸ್ಥೆಯ ಹಲವಾರು ಸಮಾಜ ವಿರೋಧಿ ಮತ್ತು ಜನ ವಿರೋಧಿ ದುರ್ಗುಣಗಳಿಗೆ ಪಕ್ಷದ ಸದಸ್ಯರಲ್ಲದೆ, ಬೆಂಬಲದಿಂದ ಗೆದ್ದ ಚುನಾಯಿತರು ಬಲಿಯಾಗಿ ನಮ್ಮನ್ನು ಬಿಟ್ಟು ಬೇರೆ ಭೂಮಾಲೀಕ ಶಕ್ತಿಗಳ ಬಾಲಬಡುಕರಾಗಿದ್ದಾರೆ. ಜಮೀನ್ದಾರಿ ಭೂಮಾಲಿಕರ ವರ್ಗವು ಪಂಚಾಯತ್ ವ್ಯವಸ್ಥೆಯ ಮೂಲಕ ಜನರ ಕೈಗೆ ಅಧಿಕಾರ ಎಂಬ ಮಾತು ಟೊಳ್ಳಾಗಿ ಜಮೀನ್ದಾರಿ ಭೂಮಾಲಿಕರ ವರ್ಗದ ಜನರಿಗೆ ಅಧಿಕಾರ ಎಂಬಂತಾಗಿದೆ. ಅದನ್ನು ಬದಲು ಮಾಡಲು ಬಡ ರೈತ ಮತ್ತು ಕೃಷಿ ಕೂಲಿಕಾರರ ನೇತೃತ್ವದಲ್ಲಿ ಭೂಮಿ, ಕೂಲಿ ಪ್ರಮುಖ ಬೇಡಿಕೆಗಳಿಗೆ ಹೋರಾಟ ನಡೆಸುವುದೇ ನಮ್ಮ ಮುಂದಿನ ಆದ್ಯಕರ್ತವ್ಯ ದುಡಿಯುವ ಜನತೆ ದಿನನಿತ್ಯ ಕಾಡುವ ಆಂಶಿಕ ಬೇಡಿಕೆಗಳಾದ ರೇಷನ್ ಕಾರ್ಡು, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮತ್ತಿತರ ಬೇಡಿಕೆಗಳನ್ನು ಮುಂದೆ ಇಟ್ಟು ಜನರನ್ನು ಹೋರಾಟಕ್ಕೆ ಅಣಿನೆರೆಸಲು ಮತ್ತು ಜನತೆಯನ್ನು ಸಂಘಟಿಸಲು ಗ್ರಾಮ ಪಂಚಾಯಿತಿ ಹೋರಾಟದ ಅಸ್ತ್ರವಾಗಿ ಬಳಸಬಹುದಾಗಿದೆ.

ಬಿ.ವಿ.ಕಾರಂತರ ನಿರ್ದೇಶನದಲ್ಲಿ ಅತ್ಯಂತ ಜನಪ್ರಿಯ ನಾಟಕವಾದ 'ಸತ್ತವರ ನೆರಳು' ಚಲನಚಿತ್ರವಾದ ಅನಂತಮೂರ್ತಿಯವರ ಕಾದಂಬರಿ 'ಸಂಸ್ಕಾರ' ಮಾಧ್ವ ಮಠಗಳ ಹಾಗೂ ಅಗ್ರಹಾರಗಳ ಜಡತೆಯನ್ನು, ಕೊಳಕನ್ನು ಬಯಲಿಗಿಟ್ಟ ಪ್ರಸಿದ್ಧ ಕೃತಿಗಳು. ಸಮಾಜದ ಒಳಗೆ ಭೂತಕಾಲದ ವ್ರಣವಾಗಿ ಕೊಳೆಯುತ್ತಿರುವ ಈ ಸಂಸ್ಥೆಗಳ ನಿರ್ಭಿಡೆಯ ವಿಮರ್ಶೆಯೆಂಬ ಕತ್ತರಿಯಿಂದ ಶಸ್ತ್ರಕ್ರಿಯೆಗೆ ಗುರಿಪಡಿಸುವ ವೈಚಾರಿಕ ಮನಸ್ಸಿನ ಬೆಳವಣಿಗೆಯನ್ನು ಹತ್ತಿಕ್ಕಲು 'ಸಂಘ ಪರಿವಾರ'ನಡೆಸಿರುವ ಪ್ರಯತ್ನಗಳ ಭಾಗವಾಗಿ ಮತ್ತೆ ಈ ಮಠ ಮಾನ್ಯಗಳು ಮೆರೆದಾಡುತ್ತಿವೆ. ಇಂತಹ ಸಂದರ್ಭದಲ್ಲಿ ಸಿ.ಆರ್.ಭಟ್‌ರವರಿಂದ ಅವರ ಅನುಭವದ ನಿರ್ಭೀತ ಮಂಡನೆ.

ಕಳೆದವಾರದ ಮುಂದುವರಿಕೆ.......


ಮಠಗಳ ಅಂತರಂಗ ಬಹಿರಂಗ





ಸಂಪ್ರದಾಯದ ಸಂಕೋಲೆಗಳು:

ಆಗ ಪೇಜಾವರ ಸ್ವಾಮಿಗಳು ಭಂಡಾರಿಕೆರೆ ಸ್ವಾಮಿ-ಈಗಿನ ಫಲಮಾರು ಹಿರಿಯ ಸ್ವಾಮಿಗಳ ಹತ್ತಿರ ವೇದಾಧ್ಯಯನ ಮಾಡುತ್ತಿದ್ದರು. ಅಲ್ಲಿಯವರೆಗೆ ಈ ಮಠದಲ್ಲಿ ಸಂಸ್ಕೃತ ಕಲಿಯುವ ವಿದ್ಯಾರ್ಥಿಗಳಿಗೆ ಮಾತ್ರ ಊಟ ವಸತಿ ನೀಡುತ್ತಿದ್ದರು. ಸ್ವಾತಂತ್ರ್ಯಾ ನಂತರ ಬಾರಕೂರಿನ ಹೈಯರ್ ಎಲಿಮೆಂಟರಿ, ಹೈಸ್ಕೂಲುಗಳಲ್ಲಿ ಕಲಿಯುತ್ತಿದ್ದ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಮಧ್ಯಾಹ್ನ ಒಂದು ಹೊತ್ತು ಪುಕ್ಕಟೆ ಊಟ ಹಾಕಲು ಸ್ವಾಮಿಗಳು ಒಪ್ಪಿಕೊಂಡರು. ಆದರೆ, ಊಟ ಬಯಸುವ ವಿದ್ಯಾರ್ಥಿಗಳು ಮಠಕ್ಕೆ ಬಂದಾಗ ಶಾಲೆಯ ಉಡುಪುಗಳನ್ನು ಕಳಚಿಟ್ಟು ಪಂಚೆಯ ಮಡಿ ಉಡಬೇಕೆಂದೂ, ಆಧುನಿಕ ರೀತಿಯಲ್ಲಿ ಅಂದವಾಗಿ ಬೈತಲೆ ಹಾಕಿದ "ಕ್ರಾಫ್" ಇಡಬಾರದೆಂದೂ, ಅದರ ಬದಲಿಗೆ ತಲೆಯ ತುದಿಯಲ್ಲಿ ಜುಟ್ಟು ಇಡಬೇಕೆಂದೂ, ಹಣೆಗೆ ನಾಮ ಬಳಿದುಕೊಳ್ಳಬೇಕೆಂದೂ, ಸಂಸ್ಕೃತ ಕಲಿಯಬೇಕೆಂದೂ, ಏಕಾದಶಿ ಉಪವಾಸ ಮಾಡಬೇಕೆಂದೂ, ತಪ್ಪಿದರೆ ಮರುದಿನ ದ್ವಾದಶಿ ತೀರ್ಥ ಪ್ರಸಾದ (ಊಟ) ಸಿಗದು ಎಂದೂ ಕಠಿಣ ಶರತ್ತುಗಳನ್ನು ಹಾಕಿದ್ದರು. **ಕರಾವಳಿಯ ಜಾನಪದ ಕಲೆಗಳಾದ ಭೂತ ಕಿಣಿತ-ಕೋಲ, ಯಕ್ಷಗಾನ ಬಯಲಾಟ, ಕಂಪನಿ ನಾಟಕ-ಸಿನಿಮಾಗಳನ್ನು ನೋಡಕೂಡದೆಂದೂ ಮಠದಲ್ಲಿ ಊಟ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಸಂಪ್ರದಾಯದ ಸಂಕೋಲೆಗಳನ್ನು ತೊಡಿಸಲಾಗಿತ್ತು.** ಆದರೆ ಅನೇಕ ವಿದ್ಯಾರ್ಥಿಗಳು ತಲೆಯ ಎದುರಿಗೆ "ಕ್ರಾಫ್" ಮಾಡಿಸಿಕೊಂಡು ಹಿಂದಿನಿಂದ ಜುಟ್ಟು ಇಟ್ಟುಕೊಂಡೆವು, ಶಾಲೆಗೆ ಮತ್ತು ಮಠದ ಶಿಸ್ತಿಗೆ ಅನುಕೂಲವಾಗುವಂತೆ ಅದಕ್ಕೂ ಸ್ವಾಮಿಗಳು ತಕರಾರು ಮಾಡಿದ್ದರು. **ಮಹಾತ್ಮಾ ಗಾಂಧಿಯನ್ನು ಆರ್.ಎಸ್.ಎಸ್. ನವರು ಕೊಂದಾಗ ಬಾರಕೂರನಲ್ಲಿ ಆರ್.ಎಸ್.ಎಸ್. ಮತ್ತು ಆರ್.ಎಸ್.ಡಿ. (ರಾಷ್ಟ್ರೀಯ ಸೇವಾ ದಳ- ಕಾಂಗ್ರೆಸ್‌ನ ಸ್ವಯಂ ಸೇವಾ ಸಂಘ) ನಡುವೆ ಭೀಕರ ಹೊಡೆದಾಟಗಳಾದವು. ಆಗ ಮಠದವರ ಒಲವು ಆರ್. ಎಸ್.ಎಸ್.ನತ್ತ ಇತ್ತು. ಆಗಲೇ ಅವರು ರಾಮರಾಜ್ಯ ಕಟ್ಟುವ ಕನಸು ಕಾಣುತ್ತಿದ್ದರು. ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ** ಅನೇಕರು ಆರ್.ಎಸ್.ಡಿ.ಯ ಪರವಾಗಿದ್ದರು. ಮಠದಲ್ಲಿ ಊಟ ಮಾಡುತ್ತಿದ್ದ ಬಡ ವಿದ್ಯಾರ್ಥಿಗಳನ್ನು ಆರ್.ಎಸ್.ಎಸ್. ನವರೆಂದು ಆರ್.ಎಸ್.ಡಿ.ಯವರು ತಿಳಿದು ಅವರ ಜುಟ್ಟು ಮುಟ್ಟಿ ಲೇವಡಿ ಮಾಡುತ್ತಿದ್ದರು. ಅವಮಾನಿತರಾದ ಅವರು ಸಹಿಸಲಾರದ ಮಾನಸಿಕ ವೇದನೆಗಳಿಗೆ ಒಳಗಾಗುತ್ತಿದ್ದುಂಟು.



ಮಹಿಳೆಯರು ಬಾಲ ವಿಧವೆಯಗಿ ಕೆಲವರು ಸಂಪ್ರದಾಯದಂತೆ ತಲೆ ಬೋಳಿಸಿಕೊಂಡಿದ್ದರೂ, ನಂತರ ಕಾಲಸ್ಥಿತಿಗನುಗುಣವಾಗಿ ಪುನ: ತಲೆಕೂದಲು ಬೆಳೆಸಿಕೊಂಡು ಶಿಕ್ಷಕರಾದರು. ಆದರೆ, ಸಂಪ್ರದಾಯಕ್ಕೆ ತಪ್ಪಿ ನಡೆದುಕೊಂಡದಕ್ಕೆ ಶಿಕ್ಷೆಯಾಗಿ ಭಂಡಾರಿಕೆರೆ ಸ್ವಾಮಿಯವರು ಅಂತಹವರ ಕುಟುಂಬದವರಿಗೆ ತೀರ್ಥ ಪ್ರಸಾದ ಹಾಗೂ ಪಾದ ಪೂಜೆ ಭಾಗ್ಯ ಬಹಿಷ್ಕಾರ ಮಾಡಿದ್ದರು.

ಬ್ರಾಹ್ಮಣರಾದ ಶಿವಳ್ಳಿ, ಕೋಟಾ ಹವ್ಯಕ, ಮುಟ್ಟು, ಸ್ಥಾನಿಕ ಇವರ ನಡುವೆ ವಿವಾಹ ಸಂಬಂಧಗಳನ್ನೂ ಈ ಸ್ವಾಮಿ ನಿಷೇಧಿಸಿದ್ದರು. ಈ ಮಠದಲ್ಲಿ ಪ್ರತಿವರ್ಷ ನಡೆಯುತ್ತಿದ್ದ ಮಾಧ್ವ ಸಿದ್ಧಾಂತ ಚರ್ಚೆಗಳಲ್ಲಿ ಪ್ರಾರಂಭದಲ್ಲಿ ಕೋಟಾದ ಸುಪ್ರಸಿದ್ಧ ಶಿಕ್ಷಣ ತಜ್ಞರೂ ವಿಚಾರವಾದಿಗಳೂ ಆದ ಶಿವರಾಮ ಕಾರಂತರನ್ನು ಆಹ್ವಾನಿಸುತ್ತಿದ್ದರು. ನಂತರ ನಂಬಿಕೆಯ ಮೇಲೆಯೇ ನಿಂತಿರುವ ಮಾಧ್ವ ಸಿದ್ಧಾಂತ ವೈಚಾರಿಕ ಹರಿತದೆದುರು ನಿಸ್ತೇಜವಾಗುತ್ತಿರುವುದನ್ನು ಮನಗಂಡು ಕಾರಂತರಂತಹವರನ್ನು ಆಹ್ವಾನಿಸುವುದನ್ನೇ ಸ್ವಾಮಿಗಳು ನಿಲ್ಲಿಸಿದರು.

ಮೌನ ಪ್ರತಿಭಟನೆಯಾಗಿ ಕೆಲವು ವಿದ್ಯಾರ್ಥಿಗಳು ಹೈಸ್ಕೂಲ್ ವಿದ್ಯಾಭ್ಯಾಸ ಮುಗಿದ ಕೂಡಲೇ, ಮಠದ ಊಟದ ಹಂಗು ಕಳಚಿಕೊಳ್ಳುತ್ತಲೇ, ಜುಟ್ಟು ಕತ್ತರಿಸಿ "ಕ್ರಾಫ್" ಬೆಳೆಸಿಕೊಂಡರು. ಮಠದಲ್ಲಿ ಸಂಸ್ಕೃತ ಕಲಿಯುತ್ತಿದ್ದ ವಿದ್ಯಾರ್ಥಿಗಳು ಹೈಸ್ಕೂಲಿನಲ್ಲಿ ಅಧ್ಯಯನ ಮಾಡುತ್ತಿದ್ದ ಪಾಠ ಪುಸ್ತಕಗಳನ್ನು ಆಸಕ್ತಿಯಿಂದ ಓದಲು ಪ್ರಯತ್ನಿಸುತ್ತಿದ್ದರು. ಮುಂದೆ ಅವರಲ್ಲಿ ಅನೇಕರು ಖಾಸಗೀ ಅಧ್ಯಯನ ನಡೆಸಿ ಮೆಟ್ರಿಕ್ ಪರೀಕ್ಷೆ ಪಾಸಾಗಿ ಉನ್ನತ ಶಿಕ್ಷಣ ಪಡೆದು, ವಿವಿಧ ಹುದ್ದೆಗಳಿಗೆ ಸೇರಿಕೊಂಡರು. ಯುವಕರು ಕದ್ದು ಮುಚ್ಚಿ ಕೋಲ, ಬಯಲಾಟ, ನಾಟಕ, ಸಿನಿಮಾ ನೋಡುತ್ತಿದ್ದರು. ಮಠದ ಸಮೀಪದ ಗುಡ್ಡದ ಹೋಟೆಲ್‌ನಲ್ಲಿ ಏಕಾದಶಿಯೂ ಸೇರಿದಂತೆ ಆಗಾಗ ಕಾಫಿ ತಿಂಡಿ ಸೇವಿಸುತ್ತಿದ್ದರು. ಆ ಹೋಟೆಲ್‌ನಲ್ಲಿ ಅಸ್ಪೃಶ್ಯರಾದ ಹರಿಜನರಿಗೂ ಕಾಫಿ ತಿಂಡಿ ಕೊಡುತ್ತಿದ್ದರು. ನಾವು ಕೆಲ ವಿದ್ಯಾರ್ಥಿಗಳು ನಮ್ಮ ಜಾತಿ ಕೆಡುವುದೆಂಬ, ಜನಿವಾರ ಕಡಿಯುವುದೆಂಬ, ಜುಟ್ಟು ಕಳಚೀತೆಂಬ, ಮಠದ ಊಟ ತಪ್ಪೀತೆಂಬ ಭಯ ಬಿಟ್ಟು ಬಿಟ್ಟಿದ್ದೆವು. ಕೆಲವರು ಮಠದ ಕೆಲಸ ಬಿಟ್ಟು ವ್ಯವಸಾಯದಲ್ಲಿ ನಿರತರಾದರು, "ಕ್ರಾಫ್" ಬೆಳೆಸಿಕೊಂಡರು, ಯಕ್ಷಗಾನದಲ್ಲೂ ಪ್ರಸಿದ್ಧ ಅರ್ಥಧಾರಿ, ವೇಶಧಾರಿಗಳಾದರು. ಶ್ರೀಮಂತರ ಮನೆಗಳಲ್ಲಿ ವಿಧವೆಯರು ತಲೆ ಕೂದಲು ಬೋಳಿಸಿಕೊಳ್ಳದಿದ್ದರೂ, ಗಂಡಸರು ಜುಟ್ಟು ಇಟ್ಟುಕೊಳ್ಳದಿದ್ದರೂ, ಸ್ವಾಮಿಗಳು ಅವರ ಮನೆಯವರಿಗೆಲ್ಲ ಹೇಗೆ ತೀರ್ಥ ಪ್ರಸಾದ ಕೊಡುತ್ತಿದ್ದಾರೆ ಎಂದು ಧೈರ್ಯದಿಂದ ಸವಾಲು

ಹಾಕಲು ಪ್ರಾರಂಭಿಸಿದರು. ಮುಂದೆ ಉಡುಪಿಯ ಎಂ.ಜಿ.ಎಂ. ಕಾಲೇಜ್ ಪ್ರಾರಂಭವಾಗುತ್ತಿರುವಾಗ, ಪೇಜಾವರ ಸ್ವಾಮಿಗಳೂ ತಮ್ಮ ಮೊದಲ ಪರ್ಯಾಯದಲ್ಲಿ (1952-54) ಇಂಗ್ಲೀಷ್ ಕಲಿಯುವ ಬಡ ವಿದ್ಯಾರ್ಥಿಗಳಿಗೂ ಉಡುಪಿ ಮಠದಲ್ಲಿ ಉಚಿತ ಊಟ-ವಸತಿ ಸೌಕರ್ಯಗಳನ್ನು ಒದಗಿಸಲು ಪ್ರಾರಂಭಿಸಿದರು. ಸಂಸ್ಕೃತ ಕಲಿಯಬೇಕೆಂಬ ಶರತ್ತನ್ನು ಮಾತ್ರ ವಿಧಿಸಿ, ಅವರ

ಗುರುಗಳಾದ ಭಂಡಾರಿಕೆರೆ ಸ್ವಾಮಿಗಳು ಹಿಂದೆ ವಿಧಿಸಿದ ಸಂಪ್ರದಾಯದ ಹಲವಾರು ಸಂಕೋಲೆಗಳನ್ನು ಅನಿವಾರ್ಯವಾಗಿ ಕಾಲಸ್ಥಿತಿಯ ಒತ್ತಡದಿಂದಾಗಿ ಹೇರಲಾರದಾದರು.

ಮಠದಲ್ಲಿದ್ದ ಸಂಸ್ಕೃತ ಶಾಲೆಗಳ ವಿದ್ಯಾರ್ಥಿಗಳು ಗಂಡು-ಹೆಣ್ಣು ಸಹ ಶಿಕ್ಷಣದಿಂದ ವಂಚಿತರಾಗಿದ್ದರು. ವಿಜ್ಞಾನ, ಗಣಿತ ಸಾಹಿತ್ಯ, ಭೂಗೋಳ, ಇತಿಹಾಸ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ ಮುಂತಾದ ಆಧುನಿಕ ಶಿಕ್ಷಣದಿಂದಲೂ ಅವರು ವಂಚಿತರಾಗಿದ್ದರು. ಹೀಗಾಗಿ, ಅವರು ತಮ್ಮ ಕೌಮಾರ್ಯ ಅವಸ್ಥೆಯಲ್ಲಿ ಹೆಚ್ಚಾಗಿ ಸ್ವಾಮಿಗಳ, ಪಾರುಪತ್ಯಗಾರರ ಮತ್ತು ತಮ್ಮ ಲೈಂಗಿಕ ವಿಷಯಗಳ ಕುರಿತೇ ಹೆಚ್ಚು ಆಸಕ್ತಿಯಿಂದ ಮಾತನಾಡಿಕೊಳ್ಳುತ್ತಿದ್ದರು. ಹೈಸ್ಕೂಲ್, ಕಾಲೇಜು ವಿದ್ಯಾರ್ಥಿಗಳು ಮಠದಲ್ಲಿ ತಮ್ಮ ಆಧುನಿಕ ಪಠ್ಯ ವಿಷಯಗಳ ಕುರಿತು ಬಿರುಸಿನ ಚರ್ಚೆ ನಡೆಸುತ್ತಿದ್ದರು. ಅವರ ಮುಂದೆ ಸಂಸ್ಕೃತ ವಿದ್ಯಾರ್ಥಿಗಳು ಕೀಳರಿಮೆ ಅನುಭವಿಸುತ್ತಿದ್ದರು



ಪೇಜಾವರ ಸ್ವಾಮಿಗಳ ಮೊದಲ ಪರ್ಯಾಯದಲ್ಲಿ ಮತ್ತು ನಂತರದ ಇತರರ ಪರ್ಯಾಯಗಳಲ್ಲಿ ಸಾರ್ವಜನಿಕ ಔತಣಕ್ಕೆ ಲಾಡು, ಜಿಲೇಬಿ, ಹೋಳಿಗೆ ಮುಂತಾದ ಸಿಹಿ ತಿಂಡಿಗಳನ್ನು ಬಡಿಸಲು ಎಂ.ಜಿ.ಎಂ. ಕಾಲೇಜಿನ ವಿದ್ಯಾರ್ಥಿಗಳಿಗೆ ಮತ್ತು ನಂತರ ಜೀವವಿಮಾ ನಿಗಮದ ನೌಕರರಿಗೆ ಜವಾಬ್ದಾರಿ ವಹಿಸಿಕೊಡುತ್ತಿದ್ದರು. ಕಾರಣ, ಇತರ ವಿದ್ಯಾರ್ಥಿಗಳು ಮತ್ತು ಮಠದವರು ಈ ಸಿಹಿ ತಿಂಡಿಗಳನ್ನು ಪ್ರಾಮಾಣಿಕವಾಗಿ ಬಡಿಸದೇ ರಥ ಬೀದಿಯ ಹೋಟಲ್‌ಗಳಿಗೆ ಮಾರಾಟ ಮಾಡಿ ತಮ್ಮ ಜೇಬು ತುಂಬಿಸಿಯಾರೆಂಬ ಅನುಮಾನ ಸ್ವಾಮಿಗಳಿಗೆ ಇತ್ತು. ಮಠದವರಿಗೆ ಮಠದವರ ಮೇಲೆಯೇ ನಂಬಿಕೆ ಇಲ್ಲದಷ್ಟು ಈ ಸಂಸ್ಥೆಗಳು ಸಮಾಜದಲ್ಲಿ ತಮ್ಮ ಪಾತ್ರ ಕಳೆದುಕೊಳ್ಳುತ್ತಿರುವುದನ್ನು ಗಮನಿಸಬಹುದು.

ಜನ ವಿರೋಧಿ ಪ್ರತಿಗಾಮಿ ಪಾತ್ರ:

1960ರ ದಶಕದ ಪ್ರಾರಂಭದಲ್ಲಿ ಪೇಜಾವರ ಸ್ವಾಮಿಗಳು ಗೊಡ್ಡು ಸಂಪ್ರದಾಯಗಳನ್ನು ಸ್ವಲ್ಪ ಬದಿಗೆ ಸರಿಸಿದ್ದರು. ವಿವೇಕಾನಂದ, ರಾಮಕೃಷ್ಣ ಪರಮಹಂಸ, ಅರವಿಂದ, ಗಾಂಧಿ ಮೊದಲಾದವರ ವಿಚಾರಧಾರೆಗಳನ್ನು ಸಾಕಷ್ಟು ಅಧ್ಯಯನ ಮಾಡುತ್ತಿದ್ದರು. ಸಮಕಾಲೀನರೊಂದಿಗೆ ಚರ್ಚೆ ಮಾಡುತ್ತಿದ್ದರು. ಆಧುನಿಕ ಶಿಕ್ಷಣದಲ್ಲಿ, ಸಮಾಜ ಸೇವೆ ಹಾಗೂ ಸಮಾಜ ಸುಧಾರಣೆಯಲ್ಲಿ ಆಸಕ್ತಿ ಹೊಂದಿದ್ದರು.

ಒಮ್ಮೆ ಹುಬ್ಬಳ್ಳಿಯ ಹೋಟಲ್ ಮಾಲಿಕರೊಬ್ಬರು ಸ್ವಾಮಿಗಳಿಗೆ ಅಡ್ಡ ಬಿದ್ದು ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು. ಸ್ವಾಮಿಗಳು ಆ ಮಾಲಿಕರ ಮನೆಗೆ ಬಂದು ಪಾದ ಪೂಜೆ ಮಾಡಿಸಿಕೊಂಡು ಪ್ರಸಾದ ಕೊಟ್ಟು ಹೋದ ನಂತರ ತಮ್ಮ ಹೋಟೆಲ್‌ನಲ್ಲಿ ಕಾರ್ಮಿಕರ ಕಿರುಕುಳ ತಪ್ಪಿದೆ ಎಂದು ಅವರು ತಮ್ಮ ಸಂತೋಷ ತೋಡಿಕೊಂಡರು. ಘಟನೆಯಿಂದ ಅವರ ಕೆಲವು ಅಭಿಮಾನಿಗಳು ಗಾಬರಿಯಾದರು. ಸ್ವಾಮಿಗಳ ಬಗ್ಗೆ ಅವರಿಗಿದ್ದ ಗೌರವಾದರಗಳೆಲ್ಲವೂ ಚರ್ರನೇ ಬತ್ತಿ ಹೋದವು. ಕಾರಣ ಧಾರವಾಡ-ಹುಬ್ಬಳ್ಳಿ-ಪೂನಾ- ಮುಂಬೈ- ವಿಜಯವಾಡಾ- ಹೈದರಾಬಾದ್- ಬೆಂಗಳೂರು-ಮದ್ರಾಸ್ ನಗರಗಳಲ್ಲಿ ಇರುವ ಅನೇಕ ಪ್ರತಿಷ್ಠಿತ ಉಡುಪಿ ಹೋಟ್‌ಗಳಲ್ಲಿ ಕಾರ್ಮಿಕರನ್ನು ಹಿಂಸಿಸಲಾಗುತ್ತಿತ್ತು, ಶೋಷಿಸಲಾಗುತ್ತಿತ್ತು. ಕೆಲವರನ್ನು ದೋಸೆ ಕಾವಲಿಯ ಒಲೆಗೆ ತುರುಕಿಸಿ ಜೀವಂತ ಸುಡಲಾಗುತ್ತಿತ್ತು. ಅವರ ಸಂಘಗಳನ್ನು ಮುರಿದು ಹಾಕಲಾಗುತ್ತಿತ್ತು. ಬಡಬ್ರಾಹ್ಮಣರ ಮತ್ತು ಬಡ ರೈತರ ಮಕ್ಕಳೇ ಹೆಚ್ಚಾಗಿ ಹೋಟೇಲು ಕಾರ್ಮಿಕರಾಗಿದ್ದರು.

ಸ್ವಾಮಿಗಳು ಹೋಟಲ್ ಮಾಲಿಕರ ಜೊತೆ ಕಾರ್ಮಿಕರ ವಿರುದ್ಧವಾಗಿ ನಿಂತಿದ್ದಾರೆ ಎಂದು ಆಗ ಅನೇಕರಿಗೆ ತಿಳಿಯಿತು. ಮುಂದೆ ಹಲವು ಅಭಿಮಾನಿಗಳು ಸ್ವಾಮಿಗಳ ಸಂಬಂಧ ಸಂಪೂರ್ಣವಾಗಿ ಕಡಿದುಕೊಂಡೆ ಮಠದ ನಡುವಿನ ಏಕೈಕ ಕುರುಹಾದ ತಮ್ಮ ಜನಿವಾರವನ್ನು ಕಡಿದೊಗೆದು ಕಾರ್ಮಿಕ ವರ್ಗದ ಹೋರಾಟದಲ್ಲಿ ಮತ್ತು ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ರಾಜಕಾರಣದಲ್ಲಿ ಧುಮುಕಿದರು.

ಸ್ವಾತಂತ್ರ್ಯಾ ನಂತರ ಭೂ ಸುಧಾರಣೆ ಕಾಯ್ದೆ ಬರುವ ನಿರೀಕ್ಷೆಯಿಂದ ಮಠದ ಸ್ವಾಮಿಗಳು ತಮ್ಮ ಹೆಚ್ಚಿನ ಆಸ್ತಿಗಳನ್ನು, ವ್ಯವಸಾಯ ಭೂ ಹಿಡುವಳಿಗಳೂ ಸೇರಿದಂತೆ ಮಾರಾಟ ಮಾಡಿ ತಮ್ಮ ಮಠಗಳ ಬೊಕ್ಕಸ ತುಂಬಿಸಿ ಕೊಂಡಿದ್ದರು. 1970ರ ದಶಕದಲ್ಲಿ ಕರ್ನಾಟಕದಲ್ಲಿ ಭೂ ಸುಧಾರಣಾ ಕಾಯ್ದೆ ಅಂಗೀಕಾರವಾದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗರ ಮತ್ತು ಕಮ್ಯುನಿಸ್ಟರ ಮುತುವರ್ಜಿಯಿಂದ ಹಲವು ಬಡ ಚಾಲಗೇಣಿ ರೈತರಿಗೆ ತಾವು ವ್ಯವಸಾಯ ಮಾಡುತ್ತಿದ್ದ ಭೂಹಿಡುವಳಿಗಳ ಪಟ್ಟಾ ಸಿಗುವಂತಾಗಿತ್ತು. ಚಾಲಗೇಣಿದಾರರು ಮಠದ ಭೂಹಿಡುವಳಿಗಳ ಸ್ವಾಧೀನತೆಗೆ ಡಿಕ್ಲರೇಶನ್ ಕೊಡಿಸಲು ಕಮ್ಯುನಿಸ್ಟ್ ಆಫೀಸ್ ಎಲ್ಲಿದೆ ಎಂದು ಕೇಳಿ ತಿಳಿದುಕೊಳ್ಳುತ್ತಿದ್ದರು. ಮುಂದೆ ಈ ಮಠಗಳು ರೈತರ ಬಿಟ್ಟಿ ದುಡಿಮೆಯ ಮೇಲೆ ಅವಲಂಬಿಸುವುದು

ಪುಟ 14 ಕ್ಕೆ

ಪುಟ 2 ರಿಂದ

ಮಹಾ ಹೋರಾಟದ ಕರೆಗಾಗಿ ಮಹಾ ರ್‍ಯಾಲಿ

ಮಾರ್ಚ್ 9 ಡೆಲ್ಲಿ ಚಲೋ

ಗಮನಾರ್ಹ ಸಾಧನೆ. ವಿವಿಧ ದೃಷ್ಟಿಕೋನ, ರಾಜಕೀಯ ನಿಲುವುಗಳು ಇದ್ದಾಗಲೂ ಇಷ್ಟೊಂದು ಪ್ರಮಾಣದಲ್ಲಿ ಸಂಘಟನೆಗಳು ಸೇರಿ, ದೇಶದ ಜನರ ಭವಿಷ್ಯತಿನ ಉಳಿವಿಗಾಗಿ ಒಂದಾಗಿರುವುದು, ಸ್ವಾತಂತ್ರ್ಯನಂತರದಲ್ಲಿ ಪ್ರಮುಖ ಬೆಳವಣಿಗೆಯಾಗಿದೆ. ಸರ್ಕಾರದ ಈ ನೀತಿಗಳಿಗೂ - ರಾಜಕೀಯ ಧೋರಣೆಗಳಿಗೂ ಸಂಬಂಧ ಇರುವುದನ್ನು ಗುರುತಿಸಿ ಆ ಧೋರಣೆಗಳ ಬದಲಾವಣೆಗಾಗಿಯೂ ಹೋರಾಟ ನಡೆಸುತ್ತಾ ಬರಲಾಗಿದೆ. ಇಂತಹ ಪ್ರಬಲ ಪ್ರತಿರೋಧದಿಂದಾಗಿ ಹಿಂದೆ ರಾಜೀವ್ ಗಾಂಧಿ ಸರ್ಕಾರ ಸೋಲಬೇಕಾಯಿತು. ಹಾಗೆಯೇ ಪಿ.ವಿ.ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಧೂಳೀಪಟವಾಯಿತು. ಇಂತಹುದೇ ನೀತಿಗಳನ್ನು ಅನುಸರಿಸಿದ ವಿವಿಧ ರಾಜ್ಯ ಸರ್ಕಾರಗಳು, ಅದರಲ್ಲಿಯೂ ಮುಖ್ಯವಾಗಿ ಬಿಜೆಪಿ ಆಡಳಿತದ ದೆಹಲಿ, ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಇತರ ಹಲವಾರು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಸರಕಾರಗಳು ಪತನಗೊಂಡಿವೆ. ಇಲ್ಲವೇ ಬಲ ಕಡಿಮೆಯಾಗಿದೆ.

ಇದಲ್ಲದೆ ಈ ವಿಶಾಲ ಹೋರಾಟದಿಂದಾಗಿ, ಕೇಂದ್ರದಲ್ಲಿ ಆಳುತ್ತಾ ಬಂದ ಸರ್ಕಾರಗಳು ಮನಬಂದಂತೆ ಉದಾರೀಕರಣ ಮಾಡಲು ಸಾಧ್ಯವಾಗದೇ, ಪಾರ್ಲಿಮೆಂಟ್‌ನಲ್ಲಿಯೂ ಭಾರೀ ಪ್ರತಿರೋಧ ಎದುರಿಸಬೇಕಾಗಿ ಬಂದಿದೆ. ಬ್ಯಾಂಕ್, ವಿಮಾ ಖಾಸಗೀಕರಣದಂತಹ ಮಸೂದೆಗಳ ವಿರುದ್ಧ ಉಂಟಾದ ಪ್ರತಿರೋಧ ದಾಖಲಾರ್ಹ. ಪೇಟೆಂಟ್ ಮಸೂದೆ, ಗ್ಯಾಟ್-ಡೆಂಕಲ್ ಒಪ್ಪಂದಗಳ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ, ಜೈಲುಭರೋ, ಕಾನೂನುಭಂಗ ಚಳುವಳಿಯ ದೇಶಪ್ರೇಮದ ನೈಜತೆಯ ಅಲೆಗಳನ್ನು ಎಬ್ಬಿಸಿತು. ಕನಿಷ್ಠ 6 ಬಾರಿ ನಡೆದ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಗಳು 'ಭಾರತ್ ಬಂದ್' ಎನ್ನುವಂತಾಯಿತು. ವಿದ್ಯುತ್, ಬಂದರುಗಳ ಖಾಸಗೀಕರಣದ ವಿರುದ್ಧ ಸಿಡಿದೆದ್ದ ಪ್ರತಿಭಟನೆ ತೀರಾ ಇತ್ತೀಚಿನದಾಗಿದ್ದು, ಉತ್ತರ ಪ್ರದೇಶದ ಬಿಜೆಪಿ ಹಾಗೂ ಕೇಂದ್ರದ ವಾಜಪೇಯಿ ಸರ್ಕಾರ ತಮ್ಮ ನಿಲುವನ್ನು ಹಿಂತೆಗೆದುಕೊಳ್ಳಲೇ ಬೇಕಾಗಿ ಬಂದದ್ದು ದುಡಿಯುವ ವರ್ಗದ ಜನತೆಗೆ ಸಂದ ಜಯ. ಈ ಸರ್ಕಾರಗಳಿಗೆ ಧೋರಣೆಗಳಿಗೆ ಕೊಟ್ಟ ಪ್ರಹಾರ. ಆದರಿಂದಾಗಿಯೇ ಕೇಂದ್ರದ ಸಚಿವ ಕುಮಾರಮಂಗಳಂ ಉತ್ತರ ಪ್ರದೇಶದ ವಿದ್ಯುತ್‌ಚ್ಛಕ್ತಿ ಕಾರ್ಮಿಕರು ನಡೆಸಿದ ಹೋರಾಟದ ಹಿಂದೆ 'ಮಾಫಿಯಾ' ಇದೆ ಎಂದೆಲ್ಲಾ ಹುಚ್ಚರಂತೆ ಅರಚುತ್ತಿರುವುದು. ಇವುಗಳಿಗೆ ಗರಿ ಇಟ್ಟಂತೆ ಫೆಬ್ರವರಿ 2 ರ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರ ದೇಶದೆಲ್ಲೆಡೆ ಭಾರಿ ಯಶಸ್ಸು ಪಡೆದಿರುವುದು. ಈ ಸ್ಫೂರ್ತಿದಾಯಕ ಬೆಳವಣಿಗೆಯ ಸನ್ನಿವೇಶದಲ್ಲಿ ಮಾರ್ಚ್ 9 ರಂದು 'ಪಾರ್ಲಿಮೆಂಟ್ ಚಲೋ' ನಡೆಯುತ್ತಿದೆ. ಇಂತಹುದೇ ನೀತಿಗಳನ್ನು ಜಗತ್ತಿನ ಹಲವೆಡೆ

(ದಕ್ಷಿಣ ಕೊರಿಯಾದಲ್ಲಿ) ಜನ ಸೋಲಿಸುತ್ತಿದ್ದಾರೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ನಂತರದಲ್ಲಿ ದೇಶ ಇನ್ನೂ ಗಂಭೀರವಾದ ವಿನಾಶಕಾರಿಯಾದ ಪರಿಸ್ಥಿತಿಗೆ ನೂಕಲ್ಪಡುತ್ತಿದೆ. ಜನಸಾಮಾನ್ಯರು ಬಳಸುವ ಆಹಾರ ಮುಂತಾದ ಗ್ರಾಹಕರ ವಸ್ತುಗಳ ಬೆಲೆಗಳ ಏರಿಕೆ ಕಡಿವಾಣವಿಲ್ಲದ ಕುದುರೆಯಂತಾಗಿದೆ. ಸರ್ಕಾರವೇನೋ ಹಣದುಬ್ಬರ ಕಡಿಮೆಯಾಗುತ್ತಿದೆ ಎನ್ನುತ್ತಿದೆ. ಆದರೆ ಬೆಲೆಗಳು ಮಾತ್ರ ಕಡಿಮೆಯಾಗಿಲ್ಲ. ಆದರೆ ಕೇವಲ ಒಂದು ವರ್ಷದಲ್ಲೇ ಅಂದರೆ 1997 ರಲ್ಲಿ ಶೇ 38 ರಷ್ಟು (36 ಕೋಟಿ ಜನರು) ಬಡತನದ ರೇಖೆಯಲ್ಲಿದ್ದವರು. 1999 ರಲ್ಲಿ ಶೇ 43(43 ಕೋಟಿ) ರಷ್ಟಾಗಿದ್ದಾರೆ. ದೇಶದ 43 ಕೋಟಿ ಜನಕ್ಕೆ ಒಂದೊತ್ತು ಊಟದ ಗ್ಯಾರಂಟಿ ಇಲ್ಲ. 3 ರೂಪಾಯಿ ಆದಾಯ ಇಲ್ಲ. ಬಹಳಷ್ಟು ಕೈಗಾರಿಕೆಗಳು ಮುಚ್ಚುತ್ತಿರುವುದರಿಂದ ಅಥವಾ ದುಡಿಯುವವರನ್ನು ಹೊರದಬ್ಬುವುದರಿಂದ ಕೆಲಸ ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ. ನಿರುದ್ಯೋಗ ಹೆಚ್ಚುತ್ತಲೇ ಇದೆ. 'ಗುತ್ತಿಗೆ ಕಾರ್ಮಿಕ' ಪದ್ಧತಿಯನ್ನು ಜಾರಿಗೆ ತರುತ್ತಿದ್ದ, ಕೆಲಸದ ಗ್ಯಾರಂಟಿ ಇಲ್ಲದ, ಬೇಕಾದಾಗ ದುಡಿಸಿಕೊಂಡು ಹೊರಹಾಕುವುದು ನಡೆದಿದೆ.

ಉದಾರೀಕರಣದಿಂದಾಗಿ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗುತ್ತಿದೆ. ನಮ್ಮ ಕಂಪನಿಗಳ ಕಲ್ಲಿದ್ದಲು ಮಾರಾಟ ಆಗದೇ ಉಳಿದಿದೆ. ಸಿದ್ಧ ಉಕ್ಕು ಮತ್ತು ಕಬ್ಬಿಣವನ್ನು ವಿದೇಶಗಳಿಂದ ತರಿಸುತ್ತಿರುವುದರಿಂದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದಂತಹ ಲಾಭ ಮಾಡುತ್ತಿದ್ದ ಕೈಗಾರಿಕೆಗಳು ಹಾನಿಗೊಳಗಾಗುತ್ತಿವೆ. ನಮ್ಮ ಕೈಗಾರಿಕೆಗಳಿಗೆ ಅಗತ್ಯವಾಗಿರುವ ಕಚ್ಚಾ ಮಾಲು ವಿದೇಶದಿಂದ ತರಿಸುವಾಗ ಉತ್ಪಾದನೆ ಮಾಡಿದರೆ ವಿದೇಶದಿಂದ ತಂದ ಕಬ್ಬಿಣದ ಬೆಲೆ ಹೆಚ್ಚಾಗುವುದರಿಂದ ಉತ್ಪಾದನೆ ಮಾಡದೇ ಕಾರ್ಖಾನೆ ಮುಚ್ಚಬೇಕಾಗುತ್ತಿದೆ.

ವಿದೇಶಿ ಕಂಪನಿಗಳು ಹೂಡುತ್ತಿವೆ ಎನ್ನಲಾದ ಬಂಡವಾಳವು ಬಹುತೇಕವಾಗಿ ಗ್ರಾಹಕರ ಭೋಗ ವಸ್ತು ರೂಪಗಳಲ್ಲಿ ಬರುತ್ತಿದೆ. ಕೆಲವೆಡೆ ಇತರ ಕಂಪನಿಗಳನ್ನು ಮಿಳಿತಗೊಳಿಸಿಕೊಳ್ಳುವ ರೂಪದಲ್ಲಿಯೂ ಬಂದಿದೆ. ಶೇರುಗಳಾಗಿ ಕುಂತಿದೆ. ಹೀಗಾಗಿ ಉದ್ಯೋಗ ಸೃಷ್ಟಿಸುವುದು ಅಸಾಧ್ಯವಾಗಿದೆ. ಸರ್ಕಾರವು ಈಗಾಗಲೇ ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸಿದ್ದು, ಹಡಗು-ಬಂದರುಗಳನ್ನು


ವಿದ್ಯುತ್ ಮತ್ತು ಟೆಲಿಕಾಂಗಳಂತಹ ಪ್ರಮುಖ ರಂಗಗಳನ್ನು ಧನಿಕರಿಗೆ ಮಾರಲಾಗುತ್ತಿದೆ. ರಸ್ತೆ, ಸೇತುವೆಗಳಂತಹ ಮೂಲಭೂತ ಸೌಕರ್ಯಗಳನ್ನು ದೊಡ್ಡ ವ್ಯಾಪಾರಿಗಳಿಗೆ ನೀಡಲಾಗುತ್ತಿದೆ. ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್‌ಗಳ ನಿರ್ದೇಶನಗಳು ಕೇವಲ ಬಹುರಾಷ್ಟ್ರೀಯ ಕಂಪನಿಗಳ ಹಿತಗಳನ್ನೇ ಕಾಯುತ್ತಿವೆ. ಬ್ಯಾಂಕ್‌ಗಳಲ್ಲಿ ಶೇ 50 ರಷ್ಟು ಶೇರುಗಳನ್ನು ಸರ್ಕಾರ ಕಡಿತಗೊಳಿಸಲು ಮುಂದಾಗುತ್ತಿದೆ. 50,000 ಕೋಟಿಯಷ್ಟು ಹಣವನ್ನು ಸಾಲವಾಗಿ ಪಡೆದಿದ್ದ ಅತಿದೊಡ್ಡ ಶ್ರೀಮಂತರು, ಕಂಪನಿಗಳು ವಾಪಸು ಮುಳುಗಿಸಿದ್ದಾರೆ. ಮೂಲಭೂತ ತಾಂತ್ರಿಕ ಅಗತ್ಯಗಳಿಲ್ಲದೇ ವಿಮಾ ಕ್ಷೇತ್ರವನ್ನು ಖಾಸಗೀರಂಗದವರಿಗೆ ನೀಡಲಾಗುತ್ತಿದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉತ್ಪಾದನೆಗಳನ್ನೇ ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುತ್ತಿರುವುದರಿಂದ ಆ ಕೈಗಾರಿಕೆಗಳು ನಾಶವಾಗುತ್ತಿವೆ.

ಕೃಷಿರಂಗಕ್ಕೆ ಸಬ್ಸಿಡಿ ಕಡಿತ ವಿದೇಶಿ ಬೆಳೆ ಉತ್ಪನ್ನಗಳ ಆಮದು, ಗೊಬ್ಬರದ ಬೆಲೆ ಏರಿಕೆ ಪೇಟೆಂಟ್ ಕಾಯ್ದೆಯ ಅಂಗೀಕಾರ, ಬೆಳೆಯ ಬೆಲೆ ಕುಸಿತ, ಸಾಲದ ಹೊರೆ ತಾಳದೇ ಆತ್ಮಹತ್ಯೆ ನಿತ್ಯದ ಅಂಶಗಳಾಗಿವೆ. ನಿರ್ಬೀಜಕರಣ ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ ರೈತರನ್ನು ದೂಡುತ್ತಿದೆ. ಹೀಗಾಗಿ ಗ್ರಾಮಾಂತರ ಜನ ದಿವಾಳಿಯಾಗುತ್ತಿದ್ದಾರೆ. ಜಮೀನ್ದಾರರು, ಕೈಗಾರಿಕೋದ್ಯಮಿಗಳು ಕೊಬ್ಬಿ ಬೆಳೆಯುತ್ತಿದ್ದಾರೆ. ಶಿಕ್ಷಣದ ಹಕ್ಕನ್ನು ಜನಸಾಮಾನ್ಯರಿಂದ ಕಸಿಯಲಾಗುತ್ತಿದೆ. ಅದೊಂದು ಭಾರೀ ವ್ಯಾಪಾರದ ಸರಕಾಗಿದೆ. ಶಿಕ್ಷಣರಂಗದಲ್ಲಿ ಕೋಮುವಾದೀಕರಣ ಉಂಟು ಮಾಡಲಾಗುತ್ತಿದೆ. ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ಹೆಚ್ಚುತ್ತಿದೆ. ದಲಿತರು, ತುಳಿತಕ್ಕೊಳಗಾದವರ ಬವಣೆಗಳು ಹೇಳತೀರದು.

ದೇಶದೊಳಗಿನ ಇಂತಹ ಸನ್ನಿವೇಶವನ್ನು ಕೋಮುವಾದಿ ವಿಭಜನೆ, ಸಂಘರ್ಷಗಳಿಗೆ, ಫ್ಯಾಸಿಸ್ಟ್ ಮನೋಭಾವದ ಆಡಳಿತ ಹೇರಿಕೆಗೆ ನಿರಂತರ ಯತ್ನಗಳು ಸಾಗಿವೆ. ಈ ಮೂಲಕ ಭೂಮಾಲಕರು, ಬಂಡವಾಳಗಾರರು, ದೊಡ್ಡ ವ್ಯಾಪಾರಸ್ಥರ ಹಿತಗಳನ್ನು ಕಾಯಲು ಕೋಮು ವಿಭಜನೆ, ದೇಶ ವಿಭಜನೆಯ ತಂತ್ರವನ್ನು ರಕ್ಷಣೆಯನ್ನಾಗಿ ಬಳಸಲಾಗುತ್ತಿದೆ. ಈ ನಡುವೆ ಪಾರ್ಲಿಮೆಂಟರಿ ಸಂವಿಧಾನ ವ್ಯವಸ್ಥೆ ಯನ್ನು ಬುಡಮೇಲು ಮಾಡಿ, ಅಧ್ಯಕ್ಷೀಯ ಮಾದರಿಯ ಆಡಳಿತವೆಂಬ ಅತ್ಯಂತ ಸರ್ವಾಧಿಕಾರಿ ವ್ಯವಸ್ಥೆ ತರಲು ಹವಣಿಕೆ ನಡೆದಿದೆ. ಅಮೆರಿಕಾದೊಂದಿಗೆ ಇತ್ತೀಚೆಗೆ ನಡೆದ ಒಪ್ಪಂದದಿಂದಾಗಿ ಅಲ್ಲಿಂದ ತರುವ ವಸ್ತುಗಳ ಆಮದು ಸುಂಕ ಕಡಿಮೆಯಾಗಿ ಭಾರತದ ರೈತರು, ಸಣ್ಣ ಕೈಗಾರಿಕೆಗಳು ನೆಲ ಕಚ್ಚಲಿವೆ. ಆದಾಗ್ಯೂ ಭಾರತವನ್ನು ಅಮೆರಿಕಾಕ್ಕೆ ಗುಲಾಮನನ್ನಾಗಿಸುವ ಯತ್ನಗಳು ನಡೆದಿವೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರದ ಈ ಎಲ್ಲಾ ಕ್ರಮಗಳನ್ನು ಹಿಮ್ಮೆಟ್ಟಿಸಲೇಬೇಕು. ಹೆಜ್ಜೆ ಹೆಜ್ಜೆಗಳಿಗೂ ಎದುರಿಸಿ ಸೋಲಿಸಬೇಕು.

ಈ ರಣಕಹಳೆಯನ್ನು ನವದೆಹಲಿಯಲ್ಲಿ ನಡೆದ ಸಮಾವೇಶ ಮೊಳಗಿಸಿದೆ. ದೇಶಪ್ರೇಮಿ ಜನತೆ ಸಿಡಿದೇಳಬೇಕು. ಪ್ರತಿಭಟಿಸಬೇಕು. ಆದ್ದರಿಂದ 10 ಲಕ್ಷ ಜನರು ಮಾರ್ಚ್ 9 ರಂದು ಪಾರ್ಲಿಮೆಂಟ್ ಚಲೋ ನಡೆಸಿ ಆಳುವವರ ಎದೆ ನಡುಗಿಸುವಂತೆ ದೇಶದ ಜನತೆ ಘರ್ಜಿಸಬೇಕಿದೆ. ಬನ್ನಿ ನೀವೂ- ನಾವು ಎಲ್ಲರೂ ಕೈಜೋಡಿಸೋಣ. ದೇಶ ದ್ರೋಹಿ, ಜನದ್ರೋಹಿಗಳನ್ನು ತೊಲಗಿಸಿ. ಭಾರತದ ಭವಿಷ್ಯತ್ತು ನಿರ್ಧಾರವಾಗುವುದು ಕೇವಲ ಪಾರ್ಲಿಮೆಂಟ್ ಒಳಗೇ ನಡೆವ ಹೋರಾಟಗಳಿಂದಲ್ಲ. ಅದರಾಚೆ ಬೀದಿ ಬೀದಿ ಗಳಲ್ಲಿ ಹೊಲ-ಕೈಗಾರಿಕೆಗಳಲ್ಲಿ ನಡೆಯುವ ಹೋರಾಟದಿಂದ ಮಾತ್ರ. ದೇಶದಲ್ಲಿ ಕಾಂಗ್ರೆಸ್- ಬಿಜೆಪಿ, ಮತ್ತಿತರೆ ಬಂಡವಾಳಶಾಹಿ ಪಕ್ಷಗಳು ಅದೇ ನೀತಿಗಳನ್ನು ಬೆಂಬಲಿಸುತ್ತಿವೆ ಎಂಬುದನ್ನು ಸಹ ಅರಿಯಬೇಕು. ಪರ್ಯಾಯದತ್ತ ಚಿಂತನೆ ಸಾಗಬೇಕು.

○



ಪರ್ಯಾಯ ನೀತಿಗಾಗಿ ಶ್ರಮಜೀವಿಗಳ ರ್‍ಯಾಲಿ

ಎನ್.ಪಿ.ಎಂ.ಓ. ಪ್ರಮುಖ ಬೇಡಿಕೆಗಳು

1. ದೇಶದ, ಜನತೆಯ ಹಿತಗಳಿಗಾಗಿ ಆರ್ಥಿಕ ನೀತಿಗಳ ಪುನರ್‌ರಚನೆ.

2. ಸಾರ್ವಜನಿಕ ಮತ್ತು ಸರ್ಕಾರಿ ಸ್ವಾಮ್ಯದ ಕೈಗಾರೀಕರಣಗಳ, ಖಾಸಗೀಕರಣ, ಬಂಡವಾಳ ಹಿಂತೆಗೆತ ನಿಲ್ಲಬೇಕು, ಕಾರ್ಮಿಕರ ಕಡಿತ-ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಬೇಕು.

3. ಮುಚ್ಚಿರುವ ಕೈಗಾರಿಕೆಗಳ ಆರಂಭಕ್ಕೆ ಕ್ರಮ.

4. ಸುಲಭ ದರಗಳಲ್ಲಿ ರೇಷನ್ ಪೂರೈಕೆ, ಹೆಚ್ಚು ನೀಡಿಕೆ. ಕಳ್ಳ ದಾಸ್ತಾನುದಾರರ ಮೇಲೆ ಕ್ರಮ.

5. ಕೃಷಿ ನೀರಾವರಿಗಾಗಿ ಹೆಚ್ಚಿನ ಹಣ ನೀಡಿಕೆ, ಬೆಳೆಗಳಿಗೆ ನ್ಯಾಯಸಮ್ಮತ ಬೆಲೆ, ಬೆಳೆ ವಿಮೆ ಜಾರಿ. ವಿದೇಶದಿಂದ ತರಿಸುವುದು ನಿಲ್ಲಿಸಬೇಕು. ಭೂಸುಧಾರಣೆ ಆಗಲೇಬೇಕು. ಭೂಮಿ ಹಂಚಬೇಕು.

6. ಕೃಷಿ ಕೂಲಿಕಾರರ ರಕ್ಷಣೆಗೆ ಕೇಂದ್ರೀಯ ಶಾಸನ

7. ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಶ್ರೀಮಂತರ ಸಾಲ ಪಾವತಿ ಆಗಬೇಕು.

8. ಉದ್ಯೋಗ-ಶಿಕ್ಷಣದ ಹಕ್ಕು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಬೇಕು. ನೇಮಕಾತಿ ನಿರ್ಬಂಧ ತೆಗೆದುಹಾಕಿ, ಶಿಕ್ಷಣದ ವ್ಯಾಪಾರೀಕರಣ, ಕೋಮುವಾದೀಕರಣ ನಿಲ್ಲಲೇಬೇಕು. ಉಚಿತ ಕಡ್ಡಾಯ ಶಿಕ್ಷಣ ನೀಡಬೇಕು. ಬಜೆಟ್‌ನಲ್ಲಿ ಶೇ 10 ರಷ್ಟು ಹಣ ಮೀಸಲಿಡಿ.

9. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ಮೀಸಲಾತಿ ನೀಡಬೇಕು. ಶಾಸನ ಅಂಗೀಕರಿಸಬೇಕು. ಮಹಿಳೆಯರು, ದಲಿತರು, ದುರ್ಬಲರ ಮೇಲಿನ ದೌರ್ಜನ್ಯ ನಿಲ್ಲಬೇಕು.

10. ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ಕೂಲಿ ನೀಡಬೇಕು.

11. ಮಾಧ್ಯಮಗಳಲ್ಲಿ ಸೆಕ್ಯುಲರ್ ಅಂಶಗಳ ಉಲ್ಲಂಘನೆ ಕೂಡದು. ಹಿಂಸೆ, ಅತಿರೇಕ, ಅಂಧಶ್ರದ್ಧೆ ಪ್ರಸಾರ ನಿಲ್ಲಿಸಿ.

12. ಸಾರ್ವಜನಿಕ ಕ್ಷೇತ್ರದಲ್ಲಿನ ಭ್ರಷ್ಟಾಚಾರಕ್ಕೆ ತಡೆ. ಕಠಿಣ ಕ್ರಮಕ್ಕೆ ಆಗ್ರಹ.

13. ಅಣ್ವಸ್ತ್ರಗಳ ಶಸ್ತ್ರೀಕರಣ ಬೇಡವೇ ಬೇಡ. ಸಿಟಿಬಿಟಿ, ಎನ್‌ಪಿಟಿಗೆ ಸಹಿ ಹಾಕಕೂಡದು.

14. ಸಂವಿಧಾನ ಪುನರ್‌ರಚನೆ ಮಾಡಬಾರದು.

ಕಥೆ

ಇಲ್ಲಿಯವರೆಗೆ......

ಆಸ್ಟ್ರೇಲಿಯ ದೇಶದ ಮೂಲನಿವಾಸಿಗಳಾದ ಗಿರಿಜನಗಳು ಯುರೋಪಿನಿಂದ ಆ ಪ್ರದೇಶಕ್ಕೆ ವಲಸೆ ಬಂದ ಬಿಳಿಯರಿಂದ ಅನುಭವಿಸಿದ ದಾರುಣ ಯಾತನೆಗಳ ಕಥೆ ಇದು. ಉತ್ತಮ ಶಿಕ್ಷಣವನ್ನು ಪಡೆದಿದ್ದರೂ ಬಿಳಿಯರ ಮನೆಗಳಲ್ಲಿ ಮುಸುರೆ ಮಾಡಿಕೊಂಡೆ ಬದುಕಬೇಕಾಗಿದ್ದ ಮೇರಿ ತನ್ನ ದಿನದ ಕೆಲಸ ಮುಗಿಸಿಕೊಂಡು ಗಿರಿಜನರಿಗೆಂದೇ ಮೀಸಲಾಗಿದ್ದ ಬಹಿಷ್ಕೃತ ಸೆಟ್ಲ್‌ಮೆಂಟ್(ಊರ ಹೊರಗಿನ ಕೇರಿ)ಗೆ ಬರುವಾಗ ಒಬ್ಬ ಗಿರಿಜನರ ಹಣ್ಣು ಹಣ್ಣು ಮುದುಕನೊಬ್ಬನನ್ನು ಸಂಧಿಸುತ್ತಾಳೆ. ಅವನು ಎನ್'ಗೂಲ ಎಂಬ ಹೆಸರಿನ ಗಿರಿಜನ ಹುಡುಗಿಯೊಬ್ಬಳ ಬಗ್ಗೆ ಏನಾದರೂ ಗೊತ್ತೇ ಎಂದು ಕೇಳುತ್ತಾನೆ. ನನಗೇನೂ ಗೊತ್ತಿಲ್ಲ ಎಂದು ಉತ್ತರಿಸಿ ಮನೆಗೆ ಬಂದರೂ ಆ ಹೆಸರಿನೊಂದಿಗೆ ತನಗೇನೋ ಬಳಕೆ ಇದ್ದಂತೆನಿಸಿ ಅವಳ ಮನಸ್ಸಿನ ಸ್ವಾಸ್ಥ್ಯ ಕದಡಿತು. ಆದರೆ ನೆನಪಾಗಲಿಲ್ಲ.....

ಮುಂದೆ ಓದಿ......

ಎನ್'ಗೂಲಾ

ಕೆಥರಿನ್ ಸುಸನ್ನ ಪ್ರಿಚರ್ಡ್ (ಆಸ್ಟ್ರೇಲಿಯ)

ಎದುರಿಗಿನ ಆ ರೂಕ್ಷ ಪ್ರದೇಶದಲ್ಲಿ ಮಾತ್ರವೇ ದೇಶೀಯರು ಭೇಟಿಯಾಗಲು ಮತ್ತು ತಮ್ಮ ಸಂಸಾರಗಳನ್ನು ನಡೆಸಲು ಅಪ್ಪಣೆ ನೀಡಲಾಗಿತ್ತು. ಗುಡ್ಡದ ಇಳಿಜಾರು ಪ್ರದೇಶದ ಸುತ್ತ ಇಪ್ಪತ್ತು ಮೂವತ್ತು ದೇಶೀಯರ ಕುಟುಂಬಗಳು ಅವಳಂಥವೇ ಆದ ಹರಕು-ಮುರುಕು ಗುಡಿಸಲುಗಳಲ್ಲಿ ಸಂಸಾರಗಳನ್ನು ನಿರ್ವಹಿಸುತ್ತಿದ್ದವು. ಆ ಪ್ರದೇಶವು ಚಳಿಗಾಲದಲ್ಲಿ ಜವುಗು ತುಂಬಿ ಕಿಚಿಕಿಚಿಯಾಗುತ್ತಿದ್ದರೆ ಬೇಸಿಗೆಯಲ್ಲಿ ಒಣಗಿ ಒಣಕಲಾದ ಒರಟು ಪ್ರದೇಶವಾಗಿರುತ್ತಿತ್ತು. ಅಲ್ಲಿಂದ ಈ ಗುಡಿಸಲುಗಳೆಲ್ಲ ಭೂಮಿಯಿಂದ ಮೇಲೆದ್ದ ಕೊಳಕು ನಾಯಿಕೊಡೆಗಳಂತೆ ತೋರುತ್ತಿದ್ದವು.

ಕೆಲವು ಗುಡಿಸಲುಗಳಿಂದ ಹೊಗೆ ಹಾಯುತ್ತಿರುವುದು, ಬತ್ತಲೆಯಾದ ಸಣ್ಣ ಸಣ್ಣ ಮಕ್ಕಳು ಅಂಗಳದಲ್ಲಿ ಆಟವಾಡುತ್ತಿರುವುದು, ಮನೆಯಿಂದ ಮನೆಗೆ ಅಲೆಯುತ್ತಿರುವುದು, ಐದಾರು ಜನ ಹೆಂಗಸರು ಗುಂಪು ಸೇರಿ ಇಸ್ಪೀಟಾಡುತ್ತಿರುವುದು ಎಲ್ಲವೂ ಮೇರಿಗೆ ಕಾಣುತ್ತಿತ್ತು.

"ಎನ್'ಗೂಲ! ಎನ್' ಗೂಲಾ!" ಮೇರಿಯ ಮೆದುಳಲ್ಲಿ ಸೆಳಕೊಂದು ಹಾಯ್ದಂತೆ ಆ ಶಬ್ದ ಮತ್ತೆ ನೆನಪಾಯಿತು. ಆ ಶಬ್ದ ಅವಳ ಬೆಂಬತ್ತಿತ್ತು. ಮೆದುಳನ್ನು ಕೆದಕುತ್ತಿತ್ತು. ಮನಸ್ಸಿನ ಅಸಮಾಧಾನವನ್ನು ಅಲ್ಲೋಲ ಕಲ್ಲೋಲಗೊಳಿಸುತ್ತಿತ್ತು. ವಿವಿಧ ಭಾವನೆಗಳ ತಾಕಲಾಟವನ್ನು ತೀವ್ರಗೊಳಿಸುತ್ತಿತ್ತು. ಯಾರಾಕೆ? ಎಲ್ಲಿಯವಳಾಕೆ? ತನಗೊಂದೂ ತಿಳಿಯದು - ತಾನು ಆಸ್ಪತ್ರೆಯಲ್ಲಿದ್ದ ರೋಗಗ್ರಸ್ತ ದೇಶೀಯರನ್ನು ನೋಡಲು ಹೋಗುತ್ತಿದ್ದಾಗ ಮುದಿ ಹೆಂಗಸೊಬ್ಬಾಕೆ ಏನನ್ನೋ ಹೇಳಿದ ನೆನಪು ಆಕೆಗೆ ಅಷ್ಟೆ: ಅಂತ್ಯ ಕಾಣುತ್ತಿದ್ದ ಆ ವೃದ್ಧೆಗೆ ಚಿತ್ತ ವಿಭ್ರಮಣೆಯಾಗಿತ್ತು. ಮೇರಿ ಆಕೆಯ ಬದಿಯಲ್ಲಿ ನಿಂತುಕೊಂಡಿದ್ದಳು.

"ನೀನು ಪೋರ್ಟ್ ಹೆಡ್ಲ್ಯಾಂಡಿನ ಹುಡುಗಿ" ಮುದುಕಿ ಮೆತ್ತಗೆ ಗೊಣಗುಟ್ಟಿದಳು. "ನಾನೂ ಅದೇ. ಬುಲ್ಬಾರಿ ಬುಡಕಟ್ಟಿಗೆ ಸೇರಿದಾಕೆ."

"ನಿನಗೆ ಹೇಗೆ ಗೊತ್ತು?"

ಸಾಯುತ್ತಿದ್ದ ಆ ಮುದುಕಿ ಗೆದ್ದಲುಗಳ ಬಗ್ಗೆ ಹಾಗೂ ಆಕೆಯ ಹಣೆಯ ಮೇಲಿದ್ದ ಗುರುತಿನ ಬಗ್ಗೆ ಅದೇನೇನೋ ಬಡಬಡಿಸಿದ್ದಳು-ನಡುಗುವ ಧ್ವನಿಯಲ್ಲಿ. ಅನಂತರ ಮೇರಿ ಸೆಟ್ಲ್‌ಮೆಂಟಿನಲ್ಲೆಲ್ಲ ತಾನು ಬುಲ್ಬಾರಿ ಬುಡಕಟ್ಟಿಗೆ ಸೇರಿದವಳೆಂದೂ ಪೋರ್ಟ್ ಹೆಡ್‌ಲ್ಯಾಂಡಿನವಳೆಂದೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಳು. ಆದರೆ ಆಕೆ ಇದನ್ನು ಟೆಡ್‌ನ ಬಳಿಯಲ್ಲಾಗಲಿ ಅಥವಾ ಬೇರಾವ ಬಿಳಿಯನ ಮುಂದಾಗಲೀ ಬಾಯಿಬಿಟ್ಟಿರಲಿಲ್ಲ. ತಾನು ಯಾರೋ ಅಲ್ಲ. ತಾನು ಯಾರಿಗೋ, ಎಲ್ಲಿಗೋ ಸಂಬಂಧಿಸಿದಾಕೆ ಎಂಬ ವಿಚಾರ ಆಕೆಗೆ ಅನಿರ್ವಚನೀಯವಾದ ಅಂತರಂಗದ ಹರ್ಷವನ್ನು ಹೆಚ್ಚಿಸಿತ್ತು.

ಎದುರಿಗಿನ ಗುಡ್ಡದಂಚಿನಾಚೆಯಿಂದ ಮಂದಗೆಂಪು ಉರಿ ಬೆಳಗುತ್ತಿರುವುದು ಕಾಣುತ್ತಿತ್ತು. ಒಂದೆಡೆ ಧೂಳು ಒಟ್ಟುಗೂಡಿ ಮೇಲೆಳುತ್ತಿದ್ದರೆ ಇನ್ನೊಂದೆಡೆ ಗುಡ್ಡದ ಬದಿಯ ಗುಡಿಸಲುಗಳಿಂದ ಬೆಳಕು ಚಿಮ್ಮುತ್ತಿತ್ತು.

"ಎನ್'ಗೂಲ! ಎನ್' ಗೂಲಾ!"

ಉರಿಹಾಕಿಕೊಂಡು ಕುಳಿತಿದ್ದ ಮುದಿ ಮನುಷ್ಯ ದಾಕ್ಷಿಣಾತ್ಯ ನಾಡಭಾಷೆಯೊಂದರಲ್ಲಿ ಹಾಡಲಾರಂಭಿಸಿರುವುದು ಮೇರಿಗೆ ಕೇಳತೊಡಗಿತು. ಬ್ರೆಂಡ್ ನೆಲ್ಲಿಯ ಒಡನಾಟದಲ್ಲಿ ಮೇರಿ ಆ ಭಾಷೆಯ ಅನೇಕ ಶಬ್ದಗಳನ್ನು ಕೇಳಿ ತಿಳಿದುಕೊಂಡಿದ್ದಳು. ಕರಿಯರ ಕುಲಕ್ಕೆ ಒಂದಾನೊಂದು ಕಾಲಕ್ಕೆ ಸೇರಿದ್ದ ಪಂಗಡದಾಕೆಯಾದ ಬ್ರೆಂಡ್‌ನೆಲ್ಲಿಯ ಹಾಡುಗಳನ್ನು ಆಲಿಸುತ್ತ ಹಕ್ಕಿಪಕ್ಕಿ ಗಿಡಮರಗಳನ್ನು ಕುರಿತು ಕತೆಗಳನ್ನು ಸವಿಯುತ್ತ ಮೇರಿ ಕೆಲವು ಶಬ್ದಗಳನ್ನು ಬಲ್ಲವಳಾಗಿದ್ದಳು.

ಪುಟಾಣಿಯೆ, ಓ ಪುಟಾಣಿಯೆ
ಏ ಕಳೆದು ಹೋದ ಪಿಳ್ಳೆಯೆ
ಓ ನನ್ನ ಕನಸಿನ ಕೂಸೆ
ಎಲ್ಲಿ, ಎಲ್ಲಿರುವೆ ನೀನು?
ಗ್ರೆಟ್ನಿಟ್-
ಅಲೆದೇ ಅಲೆದೆ ಬಹುದೂರ, ಬಹುಕಾಲ
ಅರಚುತ್ತ, ಅರಸುತ್ತ ನಿನ್ನ.
ಈಗವನ ಮೂಳೆ ನಿತ್ರಾಣ
ಕಣ್ಣೋ ದೃಷ್ಟಿಹೀನ
ಕೊನೆಗಾಣುತ್ತಿದೆ ಜೀವನದ ಯಾನ

ಈ ವ್ಯಾಕುಲಗೀತೆ ಹರಿದೇ ಹರಿಯಿತು. ಶೋಕದ ನೆರೆಯೇರಿ ಪ್ರವಹಿಸಿಯೇ ಪ್ರವಹಿಸಿತು. ಮುದುಕ ಹಾಡುವುದನ್ನು ಮೇರಿ ಲಕ್ಷ್ಯಪೂರ್ವಕವಾಗಿ ಕೇಳಿದಳು. ಮುದುಕನ ಧ್ವನಿ ಮೊದಮೊದಲು ತತ್ತರಿಸಿ ಕಂಪಿಸಿತು. ಅನಂತರ ಮೇಲೇರತೊಡಗಿತು. ಆ ಬಳಿಕ ತಾರಸ್ವರವಾಗಿ ಹೃದಯಭೇದಕವಾಗಿ ಮೊರೆಯಿತು: "ಎನ್'ಗೂಲ! ಎನ್' ಗೂಲಾ!" ಈ ಚಿತ್ತವೇಧಕ ಕೂಗನ್ನು ಕೇಳಿ ಮೇರಿ ಚಲವಿಚಲನಗೊಂಡಳು.

ಆಕೆ ಬಿರಬಿರನೆ ನಡೆದು ಉರಿ ಹಾಕಿಕೊಂಡು ಮುದುಕ ಕುಳಿತಿರುವಲ್ಲಿಗೇ ಬಂದಳು. ಉರಿಯ ಬೆಳಕಿನಲ್ಲಿ ನಿಂತಿದ್ದ ಆಕೆಯನ್ನು ಬೆಚ್ಚಿಬಿದ್ದ ಮತ್ತು ಕಳಾಹೀನ ಕಣ್ಣುಗಳಿಂದ ನೋಡಿದ.

"ಯಾರೀಕೆ ಈ ಎನ್' ಗೂಲ?"

"ನನ್ನ ಮಗಳು"

ಮುದುಕ ಆಕೆಯನ್ನು ಮತ್ತೊಮ್ಮೆ ನಿಟ್ಟಿಸಿ ನೋಡಿದ. ಹಾಡಿನಲ್ಲಿ ತುಂಬಿ ಬಂದಿದ್ದ ಅಳಲಿನಿಂದ ಮುದುಕನ ಮುಖ ಭಾರವಾಗಿತ್ತು.

"ನೀನಾರು?"

"ನಾನು ಮೇರಿ. ನನ್ನ ಪತಿಯೊಡನೆ ಅಲ್ಲಿರುತ್ತೇನೆ"

"ವೊಂಗಿ ಹೆಂಗಸೆ?"

"ಯಲ್ಲರ್ ಬಿಡ್ಡೀ"

ಮುದುಕ ಅವಳ ಧ್ವನಿಯ - ಮಾತಿನ-ವೈಶಿಷ್ಟ್ಯವನ್ನು ಗ್ರಹಿಸಿದ.

"ಎನ್'ಗೂಲ! ಯಲ್ಲರ್ಬಿಡ್ಡೀ" ಮುದುಕ ಪಿಸುಗುಟ್ಟಿದ.

"ಅವಳ ವಿಷಯೋವಾಗಿ ನನಗೆ ಹೇಳು" ಎಂದು ಮೇರಿ ನುಡಿಯುತ್ತ ಮುದುಕನ ಎದುರು ಕುಳಿತಳು. "ನಾನು ಬುಲ್ಬಾರಿ (ಬುಡಕಟ್ಟಿನವಳು)"

ವೃದ್ಧ ಮನುಷ್ಯ ತಲೆ ಅಲ್ಲಾಡಿಸಿದ. ಮುಖದ ಮೇಲೆ ದೀರ್ಘ ರೇಖೆಗಳು ಮೂಡಿದುವು. ತಮ್ಮಿಬ್ಬರ ಮಧ್ಯೆ ಯಾವುದೋ ಸಂಬಂಧವಿರುವಂತೆ ಆಕೆ ಬುಡಕಟ್ಟಿನ ಜನರ ಶಿಷ್ಟಾಚಾರಗಳಿಗೆ ತೋರಿಸಿದ ಗೌರವದಿಂದ ಮುದುಕನ ಮನಸ್ಸಿಗೆ ಹಗುರಾದಂತೆ ಎನಿಸಿತು.

ಆದರೆ ಈ ಗಲೀಜು ವೃದ್ಧನೊಂದಿಗೆ ಆಕೆಗೆ ಯಾವುದೇ ಬಗೆಯ ಸಂಬಂಧವೂ ಬೇಕಿರಲಿಲ್ಲ. ಭಾವನೆಗಳ ಹೊಯ್ದಾಟದಲ್ಲಿ ಮೇರಿ ಹೀಗೆ ಮನಸ್ಸಿನಲ್ಲಿ ಅಂದೂ ಅಂದುಕೊಂಡಳು. ಮೇರಿ ಬಿಳಿಯರ ಮಧ್ಯೆ ಕಳೆದ ಬಾಳಿನಿಂದಾಗಿ ಮೂಲನಿವಾಸಿಗಳ ಆಚಾರವಿಚಾರಗಳಿಗೆ ಹಿಂದಿರುಗಲಾರದಷ್ಟು ದೂರ ಕ್ರಮಿಸಿ ಬಂದಿದ್ದಳು. ಅವಳೇಕೆ ತಾನು ಇಂಥ ಬುಡಕಟ್ಟಿನವಳು ಎಂದು ಹೇಳಿಕೊಂಡಳು? ಅಥವಾ ಅವರಿಬ್ಬರೂ ನಿಷೇಧಿತ ಸಂಬಂಧವನ್ನು ಹೊಂದಿದ್ದರೆ? ಅಥವಾ ಮುದುಕನ ಮನಸ್ಸಮಾಧಾನಕ್ಕಾಗಿಯೋ?

ಪ್ರಾಯಶಃ ಮೇರಿ ಏನು ಆಲೋಚಿಸುತ್ತಿರಬಹುದೆಂಬುದನ್ನು ಮುದುಕ ತಿಳಿದುಕೊಂಡಹಾಗಿತ್ತು. ದುಗುಡ ದುಮ್ಮಾನಗಳಿಂದ ತುಂಬಿದ್ದ ಆತನ ದೊಡ್ಡದಾದ ಕಪ್ಪು ಮುಖವನ್ನು ನೋಡಿದಾಗ ಮೇರಿಯ ದೃಷ್ಟಿಯಲ್ಲಿ ಸ್ವಭಾವಜನ್ಯ ಅನುಕಂಪ ಮಿಡಿಯಿತು.

ಉರಿಯಿಂದ ತೂರಿ ಬರುತ್ತಿದ್ದ ಬೆಳಕು ಆತನ ಕಣ್ಣಲ್ಲಿ ಥಳಥಳಿಸುತ್ತಿತ್ತು.

ಅಸ್ತವ್ಯಸ್ತವಾಗಿದ್ದ ಆತನ ತಲೆಗೂದಲುಗಳು ಕೆದರಿ ನಿಂತಿದ್ದವು. ಮೈಮೇಲಿದ್ದ ಬಟ್ಟೆಗಳು ಹರಿದು ಚಿಂದಿ ಚಿಂದಿಯಾಗಿದ್ದವು. ಅಲ್ಲಲ್ಲಿ ತೇಪೆ ಹಾಕಲಾಗಿತ್ತು. ಹೀಗಿದ್ದರೂ ಕೂಡ ಆ ಮುದುಕ ಅವರ ಬುಡಕಟ್ಟಿನಲ್ಲಿ ತುಂಬಾ ಮಹತ್ವದ ವ್ಯಕ್ತಿಯಾಗಿರಲೇಬೇಕೆಂದು ತಿಳಿದುಕೊಂಡಿದ್ದಳು.

"ಎನ್'ಗೂಲ ನನ್ನ ಮಗಳು ಹೌದು ಅಲ್ಲ" ಮುದುಕ ಹೇಳಲಾರಂಭಿಸಿದ: "ನಾನು ವಬಾರ್ರೀ ಬುಡಕಟ್ಟಿಗೆ ಸೇರಿದ ಮನುಷ್ಯ ನಮ್ಮ ತಂದೆ ನನಗೆ ಇಟ್ಟ ಹೆಸರು ಗ್ರೆಲ್ನಿಟ್ ಎಂದು ಬಿಳಿಯರು ನನ್ನನ್ನು ಜೋ ಮೋಸಸ್ ಎನ್ನುವರು. ಹೋರಾಟದ ಬಳಿಕ ಅವರು ನನ್ನನ್ನು ಗಲಗು ಬೆಳೆದಿದ್ದ ಹಾರಿಯೊಂದರಲ್ಲಿ ಹಿಡಿದರು. ಈ ಕದನದಲ್ಲಿ ನಮ್ಮವರನೇಕರು ಸತ್ತು ಹೋದರು. ನಮ್ಮ ಬೌಜೆರಾ (ಬೌಜೆರಾ ಬುಡಕಟ್ಟಿನ ಜನ ನಾಡು) ದೂರ ದಕ್ಷಿಣದಲ್ಲಿಯ ಕಲ್ಗಾನ ಹೊಳೆಯ ದಂಡೆಯಗುಂಟ ಹಬ್ಬಿದೆ.

ಗ್ರೆಲ್ನಿಟ್ ತನಗೆ ಬಿಳಿಯರ ಭಾಷೆಯೊಂದಲ್ಲದೆ ಬೇರಾವ ಭಾಷೆಯೂ ಮಾತನಾಡಲು ಬಾರದು ಎನ್ನುವಂತೆ ಮಾತನಾಡಬಲ್ಲನು ಎಂದು ಮೇರಿ ತಿಳಿದುಕೊಂಡಳು. ಆದರೆ ಆತ ಆಗಾಗ ನಾಡಭಾಷೆಯ ಶಬ್ದಗಳನ್ನೂ ಸೆಟ್ಲ್‌ಮೆಂಟ್‌ನಲ್ಲಿದ್ದ ವಿವಿಧ ದೇಶಿ ಭಾಷೆಗಳ ಪದಗಳನ್ನೂ ಬಳಸಿ ಮಾತನಾಡುತ್ತಿದ್ದ.

ಮಧ್ಯೆ ಮಧ್ಯೆ ಅನೇಕ ಉಪಕತೆಗಳೊಡನೆ ಆತ ಮೇರಿಯ ಮುಂದೆ ಹೇಳಿದ ಕತೆ ಇಷ್ಟು:

ದಕ್ಷಿಣ ಪ್ರಾಂತಕ್ಕೆ ಮೊಟ್ಟಮೊದಲು ಬಂದಿದ್ದ ಬಿಳಿಯನ ಮಡದಿ ಅಲ್ಲಿ ಸಾಯದೆ ಉಳಿದಿದ್ದ ಅಲ್ಲಿಯ ಬುಡಕಟ್ಟಿನವರ ಕೆಲವರಲ್ಲಿಯ ಒಬ್ಬ ಹುಡುಗನನ್ನು ತೆಗೆದುಕೊಂಡು ತನ್ನ ಮಗನೊಂದಿಗೇ ಸಾಕಿ ಬೆಳೆಸಿದಳು. ಇಬ್ಬರೂ ಬಾಲಕರು ಜೊತೆ ಜೊತೆಯಾಗೇ ಬೆಳೆದರು. ಆತ ಅಶ್ವಾರೋಹಣವನ್ನು ಕಲಿತರೆ ಈತ ದನಗಾಹಿಯಾದ. ತರುಣ ಚಾಕ್ ಫಿಂಟರ್ಪನ್ ಬಡಗು ದಿಶೆಯತ್ತ ಪೋರ್ಟ್ ಹೆಡ್‌ಲ್ಯಾಂಡಿನಾಚೆ ಭೂಮಿಯನ್ನು ವಶಪಡಿಸಿಕೊಳ್ಳಲು ತೆರಳಿದರೆ ಗ್ರೆಲ್ನಿಟ್‌ನೂ ಅವನೊಂದಿಗೆ ತೆರಳಿ ಜೇರಾಲ್ ಜಾನುವಾರ ಕೇಂದ್ರದ ಪ್ರಮುಖನಾದ. ಅಲ್ಲೇ ಅಲ್ಲಿಯ ಮೂಲನಿವಾಸಿಗಳೊಡನೆ ಭಲ್ಲೆ ಕಾಳಗವೊಂದನ್ನು ಮಾಡಿ ಅವರ ಹೆಣ್ಣನ್ನೂ ಗೆದ್ದು ಆಕೆಯೊಡನೆ ದೇಶೀಯರ ಠಾಣ್ಯದಲ್ಲೇ ವಾಸವಾಗಿರತೊಡಗಿದ.

ಬುಡಕಟ್ಟಿನ ಹೆಳಬರಿಗೆ, ಮುದುಕರಿಗೆ ಬಿಳಿಯ ಜನರನ್ನು ಕಂಡರಾಗುತ್ತಿದ್ದಿಲ್ಲ. ತಾಯಿ ಗರ್ಭಿಣಿಯಾಗಿದ್ದಾಗ ಆ ಗರ್ಭದ ಮೂಲಕ ಕಲ್ಲು ಬಂಡೆಗಳಿಂದಲೋ, ಕೊಳಕಾಸಾರ - ಪ್ರಾಣಿಗಳಿಂದಲೋ ಮಗುವಿಗೆ ಗತಕಾಲದ ಹಿರಿಯರ ವೀರ್ಯಬಲದ ಆತ್ಮಶಕ್ತಿ ಬರುತ್ತದೆಯೆಂಬ ನಂಬಿಕೆ ಇವರಲ್ಲಿ ಇದ್ದರೂ ಕೂಡ ಇತ್ತೀಚೆಗೆ ತಮ್ಮ ಹೆಗಸರು ಬಿಳಿಯರ ಸಂಗಕ್ಕೆ ಬಿದ್ದ ಫಲವಾಗಿ ಇಡೀ ಬುಡಕಟ್ಟೇ ದುರ್ಬಲವಾಗಿ ಹೋಗಿದೆಯೆಂಬ ತೀರ್ಮಾನಕ್ಕೆ ಬಂದಿದ್ದರು. ಇದರಿಂದ ರಕ್ಷಿಸದಿದ್ದರೆ ಈಗಾಗಲೇ ಅನೇಕ ಬುಡಕಟ್ಟುಗಳ ನಿರ್ಮೂಲನವಾಗಿ ಹೋಗಿರುವಂತೆ ತಮ್ಮ ಬುಡಕಟ್ಟೂ ನಾಶವಾಗಿ ಹೋಗುತ್ತದೆಯೆಂದು ಭೀತಿಗೊಂಡಿದ್ದರು. ತಿಳಿಬಣ್ಣದ ಮಕ್ಕಳು ಮೂಲನಿವಾಸಿಗಳ ಕುಲದ ನಿಜವಾದ ಬೀಜಗಳಲ್ಲ. ಆದರೆ ದೇಶೀಯ ಹೆಂಗಸರ ಮತ್ತು ಶ್ವೇತ ಗಂಡಸರ

ದಿಳ್ಳೀಗೆ ಹೊಂಟೇವಿ

ಹಳ್ಳೀಯ ಜನ ನಾವು
ದಿಳ್ಳೀಗೆ ಹೊಂಟೇವಿ
ಬರತೀರೇನ್ರಿ ನೀವು ಬರತೀರೇನ್ರಿ?
ಕೆಂಪು ಕ್ವಾಟೆಯ ಮ್ಯಾಲೆ
ತೊಯ್ಯು ತೂಗಡಿಸೋ ಧ್ವಜಕ
ಝಳ ಬಡಿಸಿ ಉಸಿರೂದಿ ಹಾರ್ಸಾಕ ರೀ.

ಹಳ್ಳೀಯ ಜನ ನಾವು

ಊರ್ಹೊಂದು ಮೂಲ್ಯಾಗ
ಚಪ್ಪರದ ಸೂರ್ನ್ಯಾಗ
ಝೀಗುಡುವ ಇರುಳನ್ನ ಕಳೀತೀವಿ ರೀ
ಹಗಲಂತ ಒಂದೆ ಬಂದ್ರ
ಡೊಳ್ ಹೊಟ್ಟೀ ಕಾಟಕ್ಕ
ಬಿಸಿಲಾಗ ರಸಬಸಿದು ದೋಕ್ತೀವಿ ರೀ

ಲೆಕ್ಕಿಲ್ಲ ಬುಕ್ಕಿಲ್ಲ
ಬ್ಯಾಂಕ್ನ್ಯಾಗ ಖಾತಿಲ್ಲ
ನೀರ್ನ್ಯಾಗ ಬರೀ ಸೊನ್ನೀ ಬರಿತೀವಿ ರೀ
ಹುಡುಗೂರುಷ್ಟೀ ಕಳಿಸಿ
ತಂಗ್ಯನ್ನ ಬೇಡೀಸಿ
ತುತ್ತೆ ತಿಂದು ಹೊತ್ತನ್ನ ನೂಕ್ತೀವಿ ರೀ

ಹಳ್ಳಿಯ ಜನ ನಾವು

ರಾಡ್ಯಾಗ ಉರಳ್ಯಾಡಿ
ಕತ್ಲಾಗ ತಡಕಾಡಿ
'ಏಸ್' ದಿನ ಹೀಂಗಂತ! ಕಳೆಯೋದು ರೀ?
ಹರೇದಾಗ ಮುದಿ ಕಾಡಿ
ಕಂದವ್ವನ ಸಾವೆ ನೋಡಿ
ಇನ್ನ್ಯಾಲ ಇರಲಿಕ್ಕ ಆಗೋಲ್ಲ ರೀ!

ನಾವೆ ಕೂಗೋ ಕೂಗಂತೂ
ಎಂದೂ ಅದಕೆ ಮುಟ್ಲಿಲ್ಲ
ನಮ್ಮ ಬಿಸಿಯುಸಿರು
ಇಂದೂ ಅದಕೆ ತಟ್ಟಿಲ್ಲ
ಸುಮ್ಮಿದ್ರ
ಸಮಾಧಿ ಗ್ಯಾರಂಟಿ ರೀ

ಅರಮನೀ ಹೊಂಬಿಳಿಕ
ಕಿರುಮನೆಗೂ ಹಾಯ್ಸಾಕ
ಮಾಡೀಯ ಸಂಪತ್ತ
ಗುಡಸ್ಲೀಗೂ ಹರಿಸಾಕ
ಅಲ್ಲಿಂದ ಧ್ವಜ ಹಿಡಿದು ತರಬೇಕು ರೀ

ಹಳ್ಳೀಯ ಜನ ನಾವು
ದಿಳ್ಳೀಗೆ ಹೊಂಟೇವಿ
ಬರತೀರೇನ್ರೀ ನೀವು ಬರತೀರೇನ್ರಿ ?

ಮಲ್ಲಿಕಾರ್ಜುನಗೌಡ ತೂಲಹಳ್ಳಿ

ಕೃಪೆ: 'ಬೆಂಕಿ ನೀಲಿಯ ಹೂವು' ವಿದ್ಯಾರ್ಥಿಗಳ ಕವನ ಸಂಕಲದಿಂದ ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು-29
ಸಂಪಾದಕರು: ಚಿ. ಶ್ರೀನಿವಾಸರಾಜು

ಕೇರಳ ಪಂಚಾಯತ್ ರಾಜ್ ......

ಪುಟ 9 ರಿಂದ

ಕೊನೆಯಲ್ಲಿ ಕೇರಳದ ಮಹಿಳೆ ಸದಸ್ಯರನ್ನು ಅದರ ಅನುಭವದ ಬಗ್ಗೆ ಪ್ರಶ್ನಿಸಿದಾಗ ಅವರು ತಮಗೆ ಅಧಿಕಾರಿಗಳನ್ನು ನಿಯಂತ್ರಿಸುವುದು ಹಾಗೂ ಅವರ ಮೂಲಕ ಕೆಲಸ ಪಡೆಯುವಲ್ಲಿನ ಹಾಗೂ ಸಭೆಗಳಲ್ಲಿ ಮಾತನಾಡುವ, ಭಾಷಣ ಮಾಡುವ ಸಾಮರ್ಥ್ಯ ಹೆಚ್ಚಾಗಿದೆಯೆಂದು ಉತ್ತರ ನೀಡಿದ್ದಾರೆ. ಈ ಯೋಜನೆಯಲ್ಲಿ ಭಾಗ ವಹಿಸುವುದಕ್ಕೆ ಮೊದಲಿನ ತಮ್ಮ ಪರಿಸ್ಥಿತಿಗೆ ಹೋಲಿಸಿದರೆ ತಮ್ಮಲ್ಲಿ ಶೇ. 40ರಷ್ಟು ಬೆಳವಣಿಗೆಯಾಗಿದೆಯೆಂದು ಈ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ಹೀಗೆ ಪ್ರತಿಯೊಬ್ಬ ಮಹಿಳಾ ಪ್ರತಿನಿಧಿಯೂ ತಮ್ಮ ಚುನಾಯಿತ ಅವಧಿಯಾದ ಐದು ವರ್ಷಗಳಲ್ಲಿ ಐದು ವಾರ್ಷಿಕ ಯೋಜನೆ ಗಳನ್ನು ರೂಪಿಸುವುದರಲ್ಲಿ ಭಾಗವಹಿಸುವ ಮೂಲಕ ವಿವಿಧ ವಿಷಯಗಳ ಬಗ್ಗೆ, ಆಡಳಿತಾತ್ಮಕ ನೀತಿ ನಿಯಮಗಳ ಬಗ್ಗ ಉತ್ತಮ ಜ್ಞಾನ ಪಡೆಯುವ ಅವಕಾಶವನ್ನು ಪಡೆದಿದ್ದಾರೆ. **ಹೀಗಾಗಿ ಕೇರಳದಲ್ಲಿ ಮಹಿಳಾ ಪಂಚಾಯತಿ ಸದಸ್ಯರಿಗೆ ಬದಲಾಗಿ ಅವರ ಗಂಡಂದಿರು ಆ ಸ್ಥಾನವನ್ನಾಕ್ರಮಿಸುವ, ಪಂಚಾಯ್ತಿ ಸಭೆ ಅದರ ಕಛೇರಿಗಳಿಗೆ ಬಂದು ಸದಸ್ಯರ ಪಕ್ಕದಲ್ಲಿ ಕುಳಿತು ಅವರ ಬದಲಾಗಿ ಕೆಲಸಮಾಡುವ ಒಂದೇ ಒಂದು ಸಾಧ್ಯತೆಯೂ** ಇಲ್ಲ. ಅದರ ಫಲವಾಗಿ ಮಹಿಳಾ ಪ್ರತಿನಿಧಿ ಸ್ವಸಾಮರ್ಥ್ಯದಿಂದ ಕೆಲಸ ಮಾಡುವ ಆ ಮೂಲಕ ಸಮಾಜಕ್ಕೆ ಕಾಣಿಕೆ ಸಲ್ಲಿಸುವ ಪ್ರಯತ್ನ ನಡೆಸಿದ್ದಾಳೆ.

ಪ್ರತಿ ಸದಸ್ಯರೂ ಪೂರ್ಣಾವಧಿ ಕೆಲಸಗಾರರು.

ಇದರೊಂದಿಗೆ ಕೇರಳದ ಪಂಚಾಯತ್ ವ್ಯವಸ್ಥೆಯಲ್ಲಿ ಗಮನಿಸಬೇಕಾದ ಮತ್ತೊಂದು ವೈಶಿಷ್ಟ್ಯವೆದರೆ ಪ್ರತಿಪಂಚಾಯತ್ ಸದಸ್ಯನೂ/ಳೂ ಗ್ರಾಮಾಭಿವೃದ್ಧಿ ಪೂರ್ಣಾವಧಿ ಹೊಣೆ ಹೊತ್ತ ಕಾರ್ಯಕರ್ತರಾಗಿರುವುದು ಹಾಗೂ ಪ್ರತಿ ಪಂಚಾಯತ್ ಸದಸ್ಯರಿಗೆ ವೇತನವನ್ನು ನೀಡುವುದು.

ಅವರ ವೇತನಗಳು ಈ ರೀತಿ ಇವೆ

ಪಂಚಾಯತ್ ರೂ.ಗಳಲ್ಲಿ	ಗ್ರಾಮ	ತಾಲ್ಲೂಕು	ಜಿಲ್ಲಾ
ಸದಸ್ಯ/ಸ್ಯೆ	1000	1250	1750
ಉಪಸಮಿತಿಗಳ ಅಧ್ಯಕ್ಷ/ಕ್ಷೆ	1500	1750	2000
ಗ್ರಾಮ ಪಂಚಾಯತ್ ಉಪಾಧ್ಯಕ್ಷ/ಕ್ಷೆ	2500	3000	3500
ಗ್ರಾಮ ಪಂಚಾಯತ್ ಅಧ್ಯಕ್ಷ/ಕ್ಷೆ	3500	4000	4500



ನಮ್ಮ ರಾಜ್ಯದಲ್ಲಿ ಎಲ್ಲಾ ಹಂತದ ಸದಸ್ಯರಿಗೆ ಅಧ್ಯಕ್ಷ-ಉಪಾಧ್ಯಕ್ಷರಿಗೆ ಕೇವಲ ಸಭಾಶುಲ್ಕ(Sitting Fees) ಜಿ.ಪಂಚಾಯತ್ ಅಧ್ಯಕ್ಷರಿಗೆ ಮಾತ್ರ ರಾಜ್ಯಮಂತ್ರಿ ಸ್ಥಾನದ ಗೌರವ ಹಾಗೂ ವೇತನ ಎಂಬ ಬೇಧವಿಲ್ಲ.

ಭ್ರಷ್ಟಾಚಾರ ನಿಯಂತ್ರಣ

ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರಿಕರಣವನ್ನು ಹಲವು ಜನ ಭ್ರಷ್ಟತೆಯ ವಿಕೇಂದ್ರೀ ಕರಣವೆಂದು ಜರೆಯುತ್ತಾರೆ. ಈ ಭ್ರಷ್ಟತೆಯಲ್ಲಿ ಮಹಿಳಾ ಸದಸ್ಯರು ಪುರುಷರಿಗಿಂತ ಮುಂದೆ ಸಾಗಿಲ್ಲವಾದರೂ ಅನೇಕ ಕಡೆ ಅವರಿಗೆ ಸ್ಪರ್ಧೆ ನೀಡುತ್ತಿದ್ದಾರೆ ಎಂಬುದಕ್ಕೆ ಹಲವು ಉದಾಹರಣೆಗಳನ್ನು ನೀಡುತ್ತಾರೆ. ಕೇರಳದಲ್ಲಿ ಈ ಭ್ರಷ್ಟತೆಯ ನಿಯಂತ್ರಣ ಹೇಗೆ ಎಂಬ ಪ್ರಶ್ನೆ ಏಳುತ್ತದೆ. ಕೇರಳದಲ್ಲಿ ಪಂಚಾಯತ್ ಕಾರ್ಯಗಳ ಪೂರ್ಣಪಾರದರ್ಶಕತೆಯ ಮೂಲಕ, ಜನರನ್ನು ಪ್ರತಿ ಹಂತದಲ್ಲಿ ಭಾಗೀದಾರರನ್ನಾಗಿ ಮಾಡಿಕೊಳ್ಳುವ ಮೂಲಕ ಭ್ರಷ್ಟತೆಯ ನಿಯಂತ್ರಣ ಸಾಧ್ಯವಾಗಿದೆ. ಯಾವುದೇ ಯೋಜನೆಯ ಫಲಾನುಭವಿ ಗಳನ್ನು ಒಂದು ಸಮಿತಿಯಾಗಿ ರಚಿಸಿ ಅವರ ಮೂಲಕವೇ ಆಯ್ಕೆ, ಜಾರಿ ಮೊದಲಾದವು ಗಳನ್ನು ಮಾಡುವುದು. ಹಾಗೆಯೇ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ವಿವಿಧ ಕೆಲಸಗಳ ಅಂದಾಜು ಪಟ್ಟಿ, ವೇಳಾಪಟ್ಟಿಯನ್ನು ಪಂಚಾಯತ್ ನೋಟಿಸ್ ಬೋರ್ಡಿನಲ್ಲಿ ಯೋಜನೆಯನ್ನು ಜಾರಿ ಮಾಡುವುದಕ್ಕಾಗಿ ಹಲವು ವಾರಗಳ ಮೊದಲೆ ಪ್ರಕಟಿಸ ಬೇಕು. ಪತ್ರಿಕೆಗಳ ಮೂಲಕ ಹಲವು ವಿವರಗಳೂ ಜನರಿಗೆ ಸಿಗುವಂತಾಗಬೇಕು ಎಂಬ ನಿಯಮಗಳ ಮೂಲಕ ಜನರನ್ನೇ ಭ್ರಷ್ಟಾಚಾರ ನಿಯಂತ್ರಣ ಮಾಡುವ ಕಾವಲು ಪಡೆಯಂತೆ ಕೆಲಸ ಮಾಡುವ ಅವಕಾಶ ನೀಡಲಾಗಿದೆ.

ಮಹಿಳಾ ಸಮುದಾಯಕ್ಕೆ ತರಬೇತಿ

ಹೀಗೆ ಯೋಜನೆಗಳನ್ನು ರೂಪಿಸುವ ವಿವಿಧ ಹಂತಗಳಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಜನಸಮುದಾಯಕ್ಕೆ ಹೊಣೆಗಾರರನ್ನಾಗಿ ಮಾಡಿ ಅವರ ಚಟುವಟಿಕೆಗಳ ಮೇಲೆ ಕಣ್ಣಿಡಿಸುವಂತೆ ಮಾಡುವ ಮೂಲಕ ಇಡೀ ಸಮಾಜಕ್ಕೆ, ಮಹಿಳಾ ಸಮುದಾಯಕ್ಕೆ ಆಡಳಿತ ವಿಷಯದ ತರಬೇತಿ ಚುನಾವಣೆಗೆ ನಿಲ್ಲುವ ಮೊದಲೇ ಸಿಗುವಂತಾಗಿದೆ. ಲಕ್ಷಗಟ್ಟಳೆ ಮಹಿಳೆಯರಿಗೆ ಸಿಕ್ಕ ವಿವಿಧ ಹಂತಗಳ ಅನುಭವ ಚುನಾವಣೆಗಳ ಸ್ಪರ್ಧಿಗಳ ತಿಳುವಳಿಕೆ ಅನುಭವ ಮಟ್ಟವನ್ನು ಎತ್ತರಿಸಲು ಆ ಮೂಲಕ ಮುಂದಿನ ಚುನಾವಣೆಗಳಲ್ಲಿಯೂ ಉತ್ತಮ ಮಹಿಳಾ ಪ್ರತಿನಿಧಿಗಳ ಆಯ್ಕೆಯಾಗಲು ಅವಕಾಶ ಕಲ್ಪಿಸಿದೆ.

ಇತರ ರಾಜ್ಯಗಳ ಪ್ರತಿನಿಧಿಗಳಿಗಿಂತ ಕೇರಳ ರಾಜ್ಯದ ಮಹಿಳಾ ಚುನಾಯಿತ ಪ್ರತಿನಿಧಿಗಳು, ಮಹಿಳಾ ಸಮುದಾಯಕ್ಕೆ ಹೆಚ್ಚು ತಿಳುವಳಿಕೆ, ಸಾಮರ್ಥ್ಯ ದಿಂದ ಕೆಲಸ ಮಾಡುವ ಅವಕಾಶ ಲಭ್ಯವಾಗಿದೆ. ಅದನ್ನು ಹಲವರು ಉಪಯೋಗಿಸಿ ಕೊಂಡು ವ್ಯಕ್ತಿತ್ವದ ಬೆಳವಣಿಗೆಯನ್ನು ಸಾಧಿಸಿದ್ದಾರೆ ನಿಜ. **ಆದರೆ ಅಲ್ಲಿ ಮಹಿಳೆಯರಿಗೆ ಸಮಸ್ಯೆಯೇ ಇಲ್ಲ, ಎಲ್ಲರೂ ಪುರಷರಿಗೆ ಸಮಾನ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಭಾವಿಸಬಾರದು ಎಂಬ ಎಚ್ಚರಿಕೆಯನ್ನು ನೀಡಬಯಸುತ್ತೇನೆ.** ಗ್ರಾಮ ಮಟ್ಟದಲ್ಲಿ ಮಹಿಳೆಯರ ಪಾತ್ರ ಹೆಚ್ಚಿದ್ದರೂ ಮೇಲಿನ ಮಟ್ಟಗಳಲ್ಲಿ ಹಾಗೂ ಪರಿಣತರು ಅವಶ್ಯವಾದೆಡೆ ಅವರ ಪಾತ್ರ ಇನ್ನೂ ಕಡಿಮೆಯೆ. ಅದನ್ನು ಸುಧಾರಿಸಲು ಜನರೂಪಿತ ಯೋಜನೆಯ ಎರಡನೇಯ ವರ್ಷದಲ್ಲಿ ತೀವ್ರ ಪ್ರಯತ್ನ ಆರಂಭವಾಗಿದೆ. ○

ಮಠಗಳ ಅಂತರಂಗ-ಬಹಿರಂಗ

ಪುಟ 11 ರಿಂದ

ಸಾಧ್ಯವಾಗದಂತಾಯಿತು. ಆಗ ಬೆಳೆದು ಬರುತ್ತಿದ್ದ ಅಗರ್ಭ ಶ್ರೀಮಂತ ವ್ಯಾಪಾರೋದ್ಯಮಿಗಳು ಮಠಗಳ ವೈಭವಗಳಿಗೆ, ಪರ್ಯಾಯ ಉತ್ಸವಗಳಿಗೆ ಬೃಹತ್ ಪ್ರಮಾಣದಲ್ಲಿ ಧನ ಸಹಾಯ ಮಾಡಲು ಪ್ರಾರಂಭಿಸಿದರು. ದಕ್ಷಿಣ ಕನ್ನಡ, ಗೋವಾ, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ ಮುಂತಾದ ಪ್ರದೇಶಗಳಿಂದ ಶ್ರೀಮಂತ ವ್ಯಾಪಾರೋದ್ಯಮಿಗಳ ನೆರವಿನಿಂದ ಬೆಳ್ಳಿ- ಚಿನ್ನದ ರಥಗಳು ಮತ್ತು ಪಲ್ಲಕ್ಕಿಗಳು, ಶ್ರೀ ಕೃಷ್ಣ ದೇವರಿಗೆ ವಜ್ರ ವೈಢೂರ್ಯಗಳ ಕಿರೀಟಗಳು, ಭಕ್ತಾಧಿಗಳಿಗೆ ವಸತಿಗೃಹಗಳು, ಉತ್ತರ ಭಾರತದ ಬಿರ್ಲಾ ಮಂದಿರಗಳಂತೆ ಕಂಗೊಳಿಸಲು ಕೃಷ್ಣ ಮಠಕ್ಕೆ ಅಮೃತಶಿಲಾ ಚಪ್ಪಡಿಗಳು ಇತ್ಯಾದಿಗಳನ್ನು ಒದಗಿಸಿ ಯಾತ್ರಿಕರನ್ನು ಬೃಹತ್ ಪ್ರಮಾಣದಲ್ಲಿ ಆಕರ್ಷಿಸಲಾಯಿತು. ಮಠಗಳ ಸುತ್ತಮುತ್ತ ಸ್ಟಾರ್ ಹೋಟೆಲ್‌ಗಳು, ಬಾರ್‌ಗಳು, ಕ್ಯಾಬರೆ ನೃತ್ಯ ಮಂದಿರಗಳು, ಕಲ್ಯಾಣ ಮಂಟಪಗಳು, ಸಿನಿಮಾ ಮಂದಿರಗಳು, ಇತರ ವ್ಯಾಪಾರೋಧ್ಯಮಗಳು ಎದ್ದು ಬರಲಾರಂಭಿಸಿದವು. ಉಡುಪಿ ಬೆಳ್ಳಿ- ಬಂಗಾರ ಪಾತ್ರೆ ಉಡುಗೆ ತೊಡುಗೆ, ಶಿಕ್ಷಣ, ಆರೋಗ್ಯ-ಆಸ್ಪತ್ರೆ ಮುಂತಾದವುಗಳ ಪ್ರಮುಖ ಕೇಂದ್ರವಾಗಿ ಬೆಳೆಯಿತು. **1970ರ ದಶಕದಲ್ಲಿಯೇ ಪೇಜಾವರ ಸ್ವಾಮಿಗಳೂ ಸೇರಿದಂತೆ ಕೆಲವು ಸ್ವಾಮಿಗಳು ವಿಶ್ವ ಹಿಂದೂ ಪರಿಷತ್, ಆರ್ ಎಸ್. ಎಸ್, ಜನಸಂಘ, ನಂತರ ಬಿ.ಜೆ.ಪಿ. ಗಳತ್ತ ತಮ್ಮ ಸಂಪೂರ್ಣ ಒಲವು ಹರಿಸಿದರು.** ಕೆಲವು ಸ್ವಾಮಿಗಳು ತಟಸ್ಥವಾಗಿ ಉಳಿದರು ಮತ್ತು ಕೆಲವು ಬೇರೆ ಪಕ್ಷಗಳ ಪಾಳಯದಲ್ಲಿ ತಮ್ಮ ಹಿತಾಸಕ್ತಿ ಕಂಡುಕೊಂಡರು. ಒಟ್ಟಿನಲ್ಲಿ ಮಠಗಳು ಪಾಳಯಗಾರಿ ವ್ಯವಸ್ಥೆಯ ಅಂಗಗಳಾಗಿದ್ದವುಗಳು, ಈಗ ಬಂಡವಾಳಶಾಹಿ ವ್ಯವಸ್ಥೆಯ ಬೆಂಬಲದಿಂದ ಪಾಳಯಗಾರಿ ಮೌಲ್ಯಗಳನ್ನು ಹಿಂದೂತ್ವವಾದ ಹಾಗೂ ಕೋಮುವಾದಗಳನ್ನು ಎತ್ತಿ ಹಿಡಿಯುವ ಸಂಸ್ಥೆಗಳಾಗಿ ಮಾರ್ಪಾಡಾಗಿವೆ.

ಈ ಮಠಗಳಲ್ಲಿ, ಇವುಗಳು ನಡೆಸುವ ಮಾಧ್ವ ಸಿದ್ಧಾಂತದ ಸಂಸ್ಥೆಗಳಲ್ಲಿ ಸಂಸ್ಕೃತ ಹಾಗೂ ತತ್ವಜ್ಞಾನಕ್ಕೆ ಸೀಮಿತವಾಗಿಯಾದರೂ ಏನು ವಿದ್ವತ್‌ಪೂರ್ಣ ಕೆಲಸಕಾರ್ಯಗಳು ನಡೆಯುತ್ತಿವೆ? ಪೂನಾದ ಪ್ರಸಿದ್ಧ ಭಂಡಾರಕರ ಸಂಸ್ಥೆಯಂತೆ ಕೇರಳದ ಸಂಸ್ಕೃತ ವಿಶ್ವವಿದ್ಯಾಲಯದಂತೆ ಹಂಪಿಯ ಕನ್ನಡ ವಿಶ್ವ ವಿದ್ಯಾಲಯದಂತೆ, ಸಂಸ್ಕೃತ ಭಾಷೆ ಮತ್ತು ಸಾಹಿತ್ಯ, ಇತರ ಭಾಷೆಗಳ ಸಾಹಿತ್ಯಗಳ ಬೆಳವಣಿಗೆ, ಮಾಧ್ವ ಸಿದ್ಧಾಂತವೂ ಸೇರಿದಂತೆ ಭಾರತದ ಹಾಗೂ ಪ್ರಪಂಚದ ತತ್ವಜ್ಞಾನಗಳ ತುಲನಾತ್ಮಕ ಅಧ್ಯಯನ, ದಾಸ ಸಾಹಿತ್ಯ ಹಾಗೂ ಸಮಾಜ ಸುಧಾರಣೆ, ಹಿಂದಿನ ವೈದಿಕ ಸಂಸ್ಕೃತಿಯಲ್ಲಿ ಹುದುಗಿದ್ದ ಜನವಿರೋಧಿ ಜಾತಿ ಮತ್ತು ವರ್ಣಾಶ್ರಮ ಪದ್ಧತಿಗಳನ್ನು ಹೋಗಲಾಡಿಸಲು ಸಂಶೋಧನೆ ಹಾಗೂ ಕಾರ್ಯಯೋಜನೆ ದೇಶದ ಏಕತೆ, ಸಮಗ್ರತೆ ಮತ್ತು ಸಾರ್ವಭೌಮತೆ ಉಳಿಸಿ ಬೆಳೆಸಲು ವಿಚಾರ ಮಂಥನ ಇತ್ಯಾದಿಗಳೇನಾದರೂ ಈ ಸಂಸ್ಥೆಗಳಲ್ಲಿ ನಡೆಯುತ್ತಿವೆಯೇ? ಇವರು ಮಧ್ವಾಚಾರ್ಯರು, ವಾದಿರಾಜರು ಬರೆದ ಪುಸ್ತಕಗಳನ್ನು ಜನಸಾಮಾನ್ಯರು ವಿಮರ್ಶಾತ್ಮಕವಾಗಿ ಮಾತೃಭಾಷೆಯಲ್ಲಿ ಅಧ್ಯಯನ ಮಾಡಲು ಪ್ರೇರೇಪಿಸುವುದಿಲ್ಲ. ಬದಲು ಅವುಗಳು ಪವಿತ್ರ ಗ್ರಂಥಗಳೆಂದು ರೇಷ್ಮೆ ಬಟ್ಟೆಯಲ್ಲಿ ಸುತ್ತಿ ಬೆಳ್ಳಿ-ಬೆಂಗಾರದ ಪಲ್ಲಕಿಯಲ್ಲಿಟ್ಟು ರಥಬೀದಿಯಲ್ಲಿ ಮೆರವಣಿಗೆ ಮಾಡಿಸಿ ಮೃಷ್ಟಾನ್ನ ಮತ್ತು ಚೌಕಿಯಲ್ಲಿ ಇವರು ಭರ್ಜರಿ ಊಟ ಮಾಡುತ್ತಾರೆ ಅಷ್ಟೇ. 1950ರ ದಶಕದ ಪ್ರಾರಂಭದಲ್ಲಿ ಎಂ.ಜಿ.ಎಂ. ಕಾಲೇಜಿನ ತತ್ವಜ್ಞಾನದ ಪ್ರಾಧ್ಯಾಪಕರೊಬ್ಬರು ಸಂಖ್ಯಾ ಶಾಸ್ತ್ರದಲ್ಲಿ ಡಾಕ್ಟರೇಟ್ ಮಾಡಲು ಉಡುಪಿ ಮತ್ತು ಶೃಂಗೇರಿ ಮಠಗಳಲ್ಲಿ ಆಕರ ಗ್ರಂಥಗಳಿಗಾಗಿ ಮತ್ತು ಮಾರ್ಗದರ್ಶಿಗಳಿಗಾಗಿ ಪರದಾಡಿ ವಿಫಲರಾಗಿ, ಕೊನೆಗೆ ಶ್ರೀಲಂಕಾದ ಕೊಲೊಂಬೋ ವಿಶ್ವವಿದ್ಯಾಲಯದ ನೆರವು ಪಡೆದು ತಮ್ಮ ಡಾಕ್ಟರೇಟ್ ಮುಗಿಸಿದ್ದು ಈಗ ನೆನಪಿಗೆ ಬರುತ್ತಿದೆ.

ಸ್ವಾಮಿಗಳು ಈಗ ಶ್ರೀ ಕೃಷ್ಣನನ್ನು ಪೂಜಿಸುವುದಿಲ್ಲ. ವಜ್ರವೈಢೂರ್ಯಗಳಿರುವ ವಿಗ್ರಹದ ಮೇಲಿನ ಕಿರೀಟವನ್ನು ಪೂಜಿಸುತ್ತಾರೆ. ಅದಕ್ಕೆ ಮನಸೋತು ಶ್ರೀಮಂತ ಭಕ್ತರೂ ತೆರಿಗೆಗಳ್ಳರೂ ಲಕ್ಷ- ಕೋಟಿ ಗಟ್ಟಲೇ ಹಣ ಈ ಮಠಗಳಿಗೆ ದಾನ ನೀಡುತ್ತಿದ್ದಾರೆ. ಮತ್ತು ಸ್ವಾಮಿಗಳಿಗೆ ಬೆಳ್ಳಿ- ಬಂಗಾರ-ನಗನಾಣ್ಯ ಅಕ್ಕಿ-ಬೆಲ್ಲಗಳಿಂದ ತುಲಾಭಾರ ಮಾಡಿಸುತ್ತಾರೆ. ವ್ಯಾಪಾರ ವ್ಯವಹಾರಗಳಲ್ಲಿ ತಮ್ಮ ಪಾಪ ಪರಿಹಾರ ಮಾಡಿಕೊಂಡು ಮಹಾದಾನಿಗಳೆಂದು ಜನರಿಂದ ಮೆಚ್ಚುಗೆ ಗಳಿಸಿ ಧನ್ಯರಾಗುತ್ತಾರೆ. ಜನಸಾಮಾನ್ಯರೂ ತಮಗಿಲ್ಲದ ಬೆಳ್ಳಿ -ಚಿನ್ನ-ವಜ್ರ- ವೈಢೂರ್ಯ-ಪೀತಾಂಬರ-ಸೀರೆ ಧೋತ್ರಗಳನ್ನೇ ದೇವರೆಂದು ನಂಬುತ್ತಾರೆ ಇಂತಹ ಶ್ರೀಮಂತ ದೇವರ ಅನುಗ್ರಹ ತಮಗೂ ಆಗಲಿ ಮತ್ತು ತಾವು ಬಡತನ ದಾರಿದ್ರ್ಯಗಳಿಂದ ಪಾರಾಗಲಿ ಎಂದು ಪ್ರಾರ್ಥಿಸುತ್ತಾರೆ. ಸ್ವಾಮಿಗಳನ್ನು ದೇವರ ಪ್ರವಾದಿಗಳೆಂದು ನಂಬುತ್ತಾರೆ. ಶ್ರೀಮಂತ ವ್ಯಾಪಾರೋದ್ಯಮಗಳನ್ನು ತಮ್ಮ ಮುಖಂಡರೆಂದು ತಿಳಿದು ಚುನಾವಣೆಗಳಲ್ಲಿ ಅವರಿಗೆ ಮತ ನೀಡಿ ಆರಿಸುತ್ತಾರೆ. ಮಠಗಳ ಧರ್ಮ ಪ್ರಚಾರಗಳು ಹೈ-ಟೆಕ್ ಜಾಲಗಳಲ್ಲಿ ಇನ್ನಷ್ಟು ಪ್ರಭಾವಿತವಾಗಿ ನಡೆಯುತ್ತಿವೆ. ಭಕ್ತಿಯ ಮಾಯಾಜಾಲದಿಂದ, ತೆರಿಗೆ ರಹಿತ ಹಾಗೂ ಸರಕಾರ ರಹಿತ ಸಮಾಜ ನಿರ್ಮಾಣದ ಕುರಿತು ಐ.ಎಂ.ಎಫ್- ಜಾಗತಿಕ ಬ್ಯಾಂಕುಗಳಿಗೆ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅಧ್ಯಯನ ಮಾಡಲು ಉಡುಪಿಯ ಮಠಗಳು ಮುಖ್ಯ ಕೇಂದ್ರ ಬಿಂದುಗಳಾಗಲಿವೆ.

ಈ ಮಠಗಳ ಅಧ್ಯಯನ ಸಂಸ್ಥೆಗಳಲ್ಲಿ ದೇಶ ವಿದೇಶಗಳ ವೈದಿಕ ಸಂಪ್ರದಾಯಸ್ಥರ ಮನೆ ಮಂದಿರಗಳಲ್ಲಿ ವ್ಯಾಪಾರೋಧ್ಯಮಿಗಳ ಕಾರ್ಯಾಲಯಗಳಲ್ಲಿ, ಮದುವೆ, ಮುಂಜಿ, ನಾಮಕರಣ, ಗೃಹ ಪ್ರವೇಶ, ಅಂಗಡಿ ಪೂಜೆ, ಗುದ್ದಲಿ ಪೂಜೆ, ವಾಸ್ತು, ದೇವತಾರ್ಚನೆ, ಜ್ಯೋತೀ ಫಲ ಪ್ರತಿಸ್ಪರ್ಧಿಗಳ ಬಲ ಕುಗ್ಗಿಸಲು ಹೋಮ-ಹವನ-ಯಜ್ಞ-ಯಾಗ-ಮಂತ್ರ, ಮಾಟ ಇತ್ಯಾದಿಗಳಿಗೆ ಪುರೋಹಿತರನ್ನು ತರಬೇತಿ ಗೊಳಿಸಲಾಗುತ್ತಿದೆ ಅಷ್ಟೇ. ಕಂಪ್ಯೂಟರ್ ಮತ್ತು ಇಂಟರ್‌ನೆಟ್ ಯುಗದಲ್ಲಿ ಮಠಗಳ ವ್ಯಾಪಾರಿ ಪುರೋಹಿತಶಾಹಿ ಪಾತ್ರವು ಶೀಘ್ರವಾಗಿ ಇಳಿಯುತ್ತಿದೆ. ಆಚಾರ್ಯ ಮಾಧ್ವರು ತಮ್ಮ ವೇದಾಂತ ವಿಮರ್ಶಾ ಗ್ರಂಥಗಳಲ್ಲಿ ಚಾರ್ವಾಕರು, ಭೌತಿಕವಾದಿಗಳೂ, ಸಾಂಖ್ಯಾಕಾರರೂ ಸೇರಿದಂತೆ ತನ್ನ ಕಾಲದವರೆಗಿನ ಎಲ್ಲ ಶಾಖೆಗಳ ತತ್ವಜ್ಞಾನಿಗಳಿಗೆ ವಂದನೆಗಳನ್ನು ಸಲ್ಲಿಸಿರುತ್ತಾರೆ. ಆದರೆ, ಅವರ ಶಿಷ್ಯ ಪರಂಪರೆಯ ಭಂಡಾರಿಕೆರೆ- ಫಲಿಮಾರು, ಪೇಜಾವರ ಸ್ವಾಮಿಗಳು ತಾವು ನಂಬಿದ್ದು ಮತ್ತು ಹೇಳಿದ್ದು ಮಾತ್ರ ಸತ್ಯ ಎಂದು ತಿಳಿಯುವ ಹಠವಾದಿಗಳಾಗಿದ್ದಾರೆ. ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಪಾರಸಿ ಧರ್ಮಗಳ ಕುರಿತು ನೆಹರು-ಗಾಂಧಿ ಮತ್ತು ಎಡಪಂಥೀಯ ವಿಚಾರಧಾರೆಗಳ ಕುರಿತು ಅಸಹನೆಗಳಿಂದ ಕುದಿಯುತ್ತಿದ್ದಾರೆ. ಭಾರತವು ಬಹು ಸಂಸ್ಕೃತಿಯ, ಅನೇಕತೆಗಳಲ್ಲಿ ಏಕತೆಯನ್ನು ಕಾಣುವ ಧರ್ಮ ಸಹಿಷ್ಣುಣತೆಯ ಪರಂಪರೆ ಇರುವ ದೇಶ ಎಂದು ತಿಳಿಯುವುದೇ ಇಲ್ಲ. ಹೀಗಾಗಿ ಭೂ ಮಾಲಿಕರ ಹಾಗೂ ವ್ಯಾಪಾರೋಧ್ಯಮಿಗಳ ಮತ್ತು ಈಗ ವಿದೇಶಿಯರ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ವಿಶ್ವ ಹಿಂದೂ ಪರಿಷತ್, ಆರ್.ಎಸ್.ಎಸ್., ಬಿಜೆಪಿ ಮುಂತಾದ ಸಂಘ ಪರಿವಾರದ ಕೋಮುವಾದಿ ರಾಜಕೀಯದಲ್ಲಿ ಸಕ್ರಿಯವಾಗಿ ಮಠದ ಈ ಸ್ವಾಮಿಗಳು ಭಾಗವಹಿಸುತ್ತಿರುವುದು ವಿಷಾದನೀಯ.

ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕೆಡವಿ ರಾಮ ಮಂದಿರ ನಿರ್ಮಾಣಕ್ಕಾಗಿ ನಡೆಯುತ್ತಿದ್ದ ಎಲ್ಲಾ ರಥ ಯಾತ್ರೆಗಳಲ್ಲಿ, ಕರಸೇವೆಗಳಲ್ಲಿ ಈ ಇಬ್ಬರು ಸ್ವಾಮಿಗಳು ಹೆಚ್ಚಾಗಿ ಭಾಗವಹಿಸುತ್ತಾ ಬಂದ ಪರಿಣಾಮವಾಗಿ ದೇಶಾದ್ಯಂತ ಸಂಭವಿಸಿದ ಕೋಮು ಗಲಭೆಗಳ ರಕ್ತಪಾತದ ಪಾಪ- ಶಾಪಗಳನ್ನು ಇವರು ಹೊತ್ತಿರುತ್ತಾರೆ. ರಾಮ ಯುಗ ಯುಗಾಂತ ರಗಳ ಹಿಂದೆ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯಲ್ಲಿನ ನಿರ್ಧಿಷ್ಟ ಸ್ಥಳ ಬಿಂದುವಿನಲ್ಲಿ ಜನ್ಮ ತಾಳಿದ ಎಂದೂ, ಅಲ್ಲಿಯ ಮಸೀದಿ ಕೆಡವಿ ಮಂದಿರ ಕಟ್ಟುವುದು ಹಿಂದೂ ಭಕ್ತರಿಗೆ ಅಗತ್ಯ ಎಂದೂ, ಅದು ನಂಬಿಕೆ-ಶ್ರದ್ಧೆಯ ವಿಷಯ ಎಂದೂ, ಚಾರಿತ್ರಿಕ ಪುರಾವೆಗಳಿಗೆ ಮತ್ತು ತರ್ಕಕ್ಕೆ ನಿಲುಕದ ವಿಷಯ ಎಂದೂ ಪೇಜಾವರ ಸ್ವಾಮಿಗಳು ವಾದಿಸುತ್ತಾರೆ. ಅಯೋಧ್ಯೆಯ ಬಾಬ್ರಿ ಮಸೀದಿಯಲ್ಲಿ ರಾಮ ಮಂದಿರ ಕಟ್ಟುವ ಮೂಲಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಯಾತ್ರಾ ಸ್ಥಳ ನಿರ್ಮಿಸಿ ಮುಗ್ಧ ಭಕ್ತಾದಿಗಳ ಶೋಷಣೆಯಿಂದ ವ್ಯಾಪಾರೋದ್ಯಮಗಳನ್ನು ಇನ್ನಷ್ಟು ಕುದುರಿಸಿ ಕೊಳ್ಳುವುದೇ ಈ ಎಲ್ಲಾ ವಾದಗಳ ಉದ್ದೇಶ ಎಂದು ತಿಳಿಯಲು ಜನರಿಗೆ ಹೆಚ್ಚು ಕಾಲ ಬೇಕಾಗದು.

ಮಠದ ಸ್ವಾಮಿಗಳು ತಮ್ಮ ಧಾರ್ಮಿಕ ವಿಷಯಗಳಿಗೆ ಮಾತ್ರ ಸೀಮಿತವಾಗಿರಬೇಕು ಅಥವಾ ಮಠ ಬಿಟ್ಟು ಶ್ರೀಸಾಮಾನ್ಯರಾಗಿ ರಾಜಕಾರಣದಲ್ಲಿ ತೊಡಗಬೇಕು, ಧಾರ್ಮಿಕ ಮತ್ತು ರಾಜಕೀಯ ಎರಡರಲ್ಲೂ ಮೂಗುತೂರಿಸುವ ದುಸ್ಸಾಹಸ ಮಾಡಬಾರದೆಂದು ಭಕ್ತರು, ಜನರು ಒತ್ತಾಯಿಸದೇ ಇರಬಾರದು. ○

ವಾಜಪೇಯಿ ಮುಖವಾಡ ಕಳಚಿ ಬಿದ್ದಿದೆ

ಪುಟ 7 ರಿಂದ

ಬದಲಿಸಲು, ರಾಜಕೀಯದಲ್ಲಿ ಭಾಗವಹಿಸಲು ಕೂಡಾ ಸಾಧ್ಯವಿದೆ"!

ಸರ್ದಾರ್ ಪಟೇಲ್ ಟೀಕೆ

ಮಹಾತ್ಮಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ಆರ್.ಎಸ್.ಎಸ್. ಮೇಲೆ ಹೇರಿದ ನಿಷೇಧವನ್ನು ತೆಗೆಯಬೇಕೆಂದು ಪ್ರಾರ್ಥಿಸಿ ಗೋಲ್ವಾಲ್ಕರ್ ಬರೆದ ಪತ್ರಕ್ಕೆ ಸೆಪ್ಟೆಂಬರ್ 11, 1948 ರಂದು ಪ್ರತ್ಯುತ್ತರ ನೀಡುತ್ತಾ ಆಗಿನ ಗೃಹಮಂತ್ರಿ ಸರ್ದಾರ್ ಪಟೇಲ್ ಹೀಗೆ ಬರೆದಿದ್ದರು - "ಹಿಂದೂಗಳನ್ನು ಸಂಘಟಿಸುವುದು, ಅವರಿಗೆ ಸಹಾಯ ಮಾಡುವುದು ಒಂದು ವಿಷಯ. ಆದರೆ ಅದರ ತೊಂದರೆಗಳಿಗಾಗಿ ಮುಗ್ಧ ಜನಗಳ ಮೇಲೆ, ಅಸಹಾಯಕ ಪುರುಷರು, ಮಹಿಳೆಯರು, ಮಕ್ಕಳ ಮೇಲೆ ಹಗೆ ತೀರಿಸಿಕೊಳ್ಳಲು ಹೋಗುವುದು ಬೇರೆಯೇ ವಿಷಯ- ಅವರೆಲ್ಲಾ ಭಾಷಣಗಳು ವಿಷಮಯವಾಗಿದ್ದವು. ಹಿಂದೂಗಳಲ್ಲಿ ಹುರುಪು ತುಂಬಿ ಅವರ ರಕ್ಷಣೆಗಾಗಿ ಸಂಘಟಿಸಲು ವಿಷ ಹರಡಿಸುವ ಅಗತ್ಯವೇನೂ ಇಲ್ಲ. ಈ ವಿಷದ ಅಂತಿಮ ಫಲಿತಾಂಶವಾಗಿ ದೇಶ ಗಾಂಧೀಜಿಯ ಅಮೂಲ್ಯ ಜೀವದ ಬಲಿಕೊಡಬೇಕಾಯಿತು...... ಆರ್.ಎಸ್.ಎಸ್. ಮಂದಿ ಗಾಂಧೀಜಿಯ ಹತ್ಯೆಯ ನಂತರ ಸಂತೋಷ ವ್ಯಕ್ತಪಡಿಸಿದರು, ಸಿಹಿ ಹಂಚಿದರು ಎಂಬ ಸುದ್ದಿ ಕೇಳಿ ಜನಗಳ ವಿರೋಧ ಇನ್ನೂ ತಿವ್ರಗೊಂಡಿತು. ಇಂತಹ ಪರಿಸ್ಥಿತಿಗಳಲ್ಲಿ ಸರಕಾರ ಆರ್.ಎಸ್.ಎಸ್. ವಿರುದ್ಧ ಕ್ರಮಕೈಗೊಳ್ಳುವುದು ಅನಿವಾರ್ಯವಾಗಿತ್ತು.

ಮಲ್ಕಾನಿ-ಲಿಮೆಯ ಚರ್ಚೆ

ಜನತಾ ಪಕ್ಷದ ವಿಭಜನೆ

ಹಲವು ವರ್ಷಗಳ ನಂತರ ಏಪ್ರಿಲ್ 8, 1979 ರಂದು ಆರ್.ಎಸ್.ಎಸ್. ಮತ್ತು ಬಿಜೆಪಿ ಪ್ರಮುಖರಲ್ಲೊಬ್ಬರಾದ ಕೆ.ಆರ್.ಮಲ್ಕಾನಿ ಹೀಗೆ ಬರೆದರು "ನಿಜ ಸಂಗತಿಯೆಂದರೆ ಆರ್.ಎಸ್.ಎಸ್. ರಾಜಕೀಯ ಸಂಘಟನೆಯಲ್ಲ. ಅದು, ನಾನೊಂದು ಹೊಸ ಪದ ಸೃಷ್ಟಿಸಬಹುದಾದರೆ, ತಾತ್ವಿಕ ರಾಜಕೀಯ ಸಂಘಟನೆ. ಅದಕ್ಕೆ ಅಧಿಕಾರದಲ್ಲಿ ಆಸಕ್ತಿಯಿಲ್ಲ. ಆದರೆ ಒಂದು ದೇಶದ ರಾಜಕೀಯವನ್ನು ರೂಪಿಸುವ ಅಂಶಗಳು ಮತ್ತು ಶಕ್ತಿಗಳ ಬಗ್ಗೆ ಅದಕ್ಕೆ ಬಹಳ ಆಸಕ್ತಿಯಿದೆ. .... ಆದರೆ ಅದು ರಾಜಕೀಯದ ಮೇಲೆ, ಅದರಾಚೆಗೆ ನಿಲ್ಲುತ್ತದೆ, ಒಂದು ರೀತಿಯ ಸಾಂಸ್ಥಿಕ ರಾಜಗುರು"

ಸೋಶಲಿಸ್ಟ್ ಮುಖಂಡ ಮಧುಲಿಮೆಯವರು ಮಲ್ಕಾನಿಯವರಿಗೆ ಪ್ರತ್ಯುತ್ತರ ನೀಡಿ 'ಸಂಡೇ(ಜೂನ್ 10, 1979) ಪತ್ರಿಕೆಯಲ್ಲಿ ಹೀಗೆ ಬರೆದರು - "ಆರ್.ಎಸ್.ಎಸ್. ಮಾರ್ಗ ಬಹಳ ಸ್ಪಷ್ಟ. ಇದೊಂದು ಪಕ್ಷಕ್ಕಿಂತಲೂ ಮೇಲಿನ, ಅರೆ-ಮಿಲಿಟರಿ ಸಂಘಟನೆ, ಪ್ರಭುತ್ವವನ್ನು ಕೈವಶ ಮಾಡಿಕೊಂಡು ನಾಝಿ ಮುಖಂಡರಂತೆ ಒಂದು ಸರ್ವಾಧಿಕಾರಿ ಆಡಳಿತವನ್ನು ಸ್ಥಾಪಿಸ ಬಯಸುವ ಸಂಘಟನೆ"

ಈ ಮಲ್ಕಾನಿ-ಲಿಮೆಯ ಚರ್ಚೆಯ ಹಿನ್ನೆಲೆಯಲ್ಲಿ ಆಗಿನ ಜನತಾಪಕ್ಷದಲ್ಲಿ 'ದ್ವಿಸದಸ್ಯತ್ವ' (ಆರ್.ಎಸ್.ಎಸ್. ಮತ್ತು ಜನತಾಪಕ್ಷ ಎರಡರದ್ದು ಸದಸ್ಯತ್ವ ಹೊಂದಿರುವುದು) ರ ಪ್ರಶ್ನೆಯನ್ನು 1979 ರಲ್ಲಿ ಜನತಾಪಾರ್ಟಿಯ ಆರ್.ಎಸ್.ಎಸ್.ಗೆ ಸೇರಿಲ್ಲದ ಸದಸ್ಯರು ಎತ್ತಿದರು. ಕೊನೆಗೆ ಇದು ಜನತಾಪಾರ್ಟಿಯ ವಿಭಜನೆಗೆ ಮೊರಾರ್ಜಿ ದೇಸಾಯಿ ಸರಕಾರದ ಪತನಕ್ಕೆ ಕಾರಣವಾಯಿತು.

ಹಿಟ್ಲರ್-ಮುಸಲೋನಿ ಪ್ರಿಯ ಸಂಘಟನೆ

ಆರ್.ಎಸ್.ಎಸ್. ಕೇವಲ ಒಂದು ರಾಜಕೀಯ ಸಂಘಟನೆಯಲ್ಲ; ಅದು ಬೇರೆಯದೇ ರೀತಿಯ ರಾಜಕೀಯ ಸಂಘಟನೆ, ಅದು ಅಸಹಿಷ್ಣುತೆಯನ್ನು ಬೋಧಿಸುತ್ತದೆ; ಅದರ ಅಂತಸ್ಸತ್ವವೇ ಪ್ರಜಾಪ್ರಭುತ್ವ-ವಿರೋಧಿ ಹಾಗೂ ಧರ್ಮನಿರಪೇಕ್ಷ-ವಿರೋಧಿ. ಎಲ್ಲಕ್ಕೂ ಮುಖ್ಯವಾಗಿ ಅದು ಫ್ಯಾಸಿಸ್ಟ್ ಮಾದರಿಯ ಸಂಘಟನೆ.

ಆರ್.ಎಸ್.ಎಸ್. ಸ್ಥಾಪಕ ಹೆಡ್ಗೆವಾರರವರ ಗುರು ಹಾಗೂ ಮಿತ್ರ ಬಿ.ಎಸ್.ಮೂಂಜೆ ಮುಸೋಲಿನಿಯ ಇಟಲಿಗೆ ಭೇಟಿ ನೀಡಿದ ನಂತರ ತನ್ನ ದಿನಚರಿಯಲ್ಲಿ ಮಾಡಿರುವ ಟಿಪ್ಪಣಿ ಗಮನಾರ್ಹ"ಸುಮಾರಾಗಿ ಭಾರತೀಯರಂತೆಯೇ ಸ್ವಭಾವತಃ ಆರಾಮ ಪ್ರಿಯರಾದ, ಕ್ಷತ್ರಿಯರಲ್ಲದ ಇಟಾಲಿಯನ್ನರನ್ನು ನೋಡಿ ಅದರ ಮೂಲ ದೌರ್ಬಲ್ಯವನ್ನು ಮನಗಂಡು ಇಟಲಿಯ ಮಿಲಿಟರಿ ಪುನರುತ್ಥಾನಕ್ಕೆ ಮುಸೊಲಿನಿ ರೂಪಿಸಿದ ಮೌನದ' ಬಗ್ಗೆ ಆ ಟಿಪ್ಪಣಿಯಲ್ಲಿ ಮೆಚ್ಚುಗೆ ವ್ಯಕ್ತಪಡಿಸುತ್ತಾ "ಭಾರತ ಅದರಲ್ಲೂ ಹಿಂದೂ ಭಾರತಕ್ಕೆ ಇಂತಹ ಸಂಘಟನೆ ಬೇಕಾಗಿದೆ. ನಾಗಪುರದಲ್ಲಿನ ಡಾ. ಹೆಗ್ಡೆವಾರವರ ರಾಷ್ಟ್ರೀಯ ಸ್ವಯಂ ಸೇವಕ ಸಂಘ-ಇಂತಹ ಒಂದು ಸಂಘಟನೆ" ಎಂದು ಅವರು ಬರೆದಿದ್ದಾರೆ! ಹೆಡ್ಗೆವಾರ್ ಮತ್ತು ಗೋಲ್ವಾಲ್ಕರ್ ಮುಸೊಲಿನಿ ಮಾತ್ರವಲ್ಲ ಹಿಟ್ಲರನನ್ನೂ ಹೊಗಳಿರುವವರು. ಇಂತಹ ಒಂದು ಸಂಘಟನೆ ರಾಜಕೀಯೇತರ ಸಂಘಟನೆ ಅಲ್ಲ 'ಸಾಮಾಜಿಕ' ಸಂಘಟನೆ ಎಂದು ನಾವು ನಂಬಬೇಕೆಂದು ವಾಜಪೇಯಿಯವರು ಬಯಸುತ್ತಾರೆ!

ಈಗ ಅಡ್ವಾಣಿಯವರು, ಉತ್ತರ ಪ್ರದೇಶದ ಮುಖ್ಯಮಂತ್ರಿಗಳೂ ಸೇರಿಕೊಂಡಿರುವುದನ್ನು ನೋಡಿದಾಗ ಇವೆಲ್ಲಾ ಕೇವಲ ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡ ತುಣುಕು ವಿಚಾರಗಳಲ್ಲ, ತಮ್ಮ ಅಜೆಂಡಾವನ್ನು ಮುಂದೊತ್ತುವ ಅವರ ಒಂದು ಪ್ರಜ್ಞಾಪೂರ್ವಕ ಪ್ರಯತ್ನ ಎಂಬುದು ಸ್ಪಷ್ಟವಾಗುತ್ತದೆ.


ಎನ್.ಡಿ.ಎ. ಶಿಬಿರದಲ್ಲಿರುವ ಬಿಜೆಪಿಯ ಧರ್ಮನಿರಪೇಕ್ಷ ಮಿತ್ರರು ಈಗಲಾದರೂ ಮನಗಾಣಬೇಕು-ತಮ್ಮ ಮೌನಕ್ಕೆ ದೇಶ ಭಾರೀ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಅರಿಯಬೇಕು. ಅಡ್ವಾಣಿ ಹೇಳಿದ್ದಾರೆ - ನಮ್ಮ ಯಾವ ಮಿತ್ರರೂ ಆಕ್ಷೇಪ ಎತ್ತಿಲ್ಲ ಎಂದು. ಈ ಹಿಂದೆ ಈ ರೀತಿ ಅವರು ಪ್ರದರ್ಶಿಸಿದ ದಿವ್ಯಮೌನವೇ ಪ್ರಧಾನಿಗಳು ತಮ್ಮ ನಿಜ ಅಜೆಂಡಾ ಹೊರಗೆಡಹಲು ಪ್ರೋತ್ಸಾಹ ನೀಡಿದ್ದು. ಇಡೀ ಆಡಳಿತದಲ್ಲಿ ತಮ್ಮ ನೆಚ್ಚಿನ ಬಂಟರನ್ನು ತುಂಬಿಸಲು ತಾವು ಪ್ರಯತ್ನಿಸುತ್ತಿದ್ದೇವೆ ಎಂಬುದನ್ನು ಬಿಜೆಪಿ ಮುಖಂಡರು ನಿಚ್ಚಳಗೊಳಿಸಿದ್ದಾರೆ. ಎನ್.ಡಿ.ಎ. ಪಾಲುದಾರರು ಇದನ್ನು ಎಷ್ಟು ಬೇಗ ಅರಿಯುತ್ತಾರೋ ಅಷ್ಟು ದೇಶಕ್ಕೆ ಜನತೆಗೆ ಒಳ್ಳೆಯದು.

ಮಹಾ ಶ್ರೀಮಂತರ ಹಗಲು ದರೋಡೆಗಳು

ಪುಟ 4 ರಿಂದ

ಇಲ್ಲ. ಏಕೆಂದರೆ ಇತ್ತೀಚೆಗೆ ಹಲವು ವರ್ಷಗಳಿಂದ ಬಿಜೆಪಿಯ ಚುನಾವಣೆಗೆ ಬೇಕಾಗುವ ಹಣ ಪೂರೈಕೆ ನಡೆಸುತ್ತಿದ್ದವರು ಈ ಕೈಗಾರಿಕೋದ್ಯಮಿಗಳು. ಸಾಲ ವಸೂಲು ಮಾಡಲು ಕ್ರಮ ಕೈಗೊಳ್ಳುವ ಬದಲಾಗಿ ಬಿಜೆಪಿ ನೇತೃತ್ವದ ಸರಕಾರವು ಸಾಲ ವಾಪಸು ಮಾಡದ ಕೈಗಾರಿಕಾ ಪತಿಗಳ ಪರವಾಗಿ ಬ್ಯಾಂಕುಗಳನ್ನು ಖಾಸಗೀಕರಣ ಮಾಡುವ ಹುನ್ನಾರದಲ್ಲಿದೆ.

ಇನ್ನೊಂದು ಪ್ರಮುಖವಾದ ಅಂಶವೆಂದರೆ 10 ಕೋಟಿ ರೂಗಳಿಗಿಂತ ಹೆಚ್ಚು 'ಕೆಟ್ಟಸಾಲ' ವಾಗಿರುವ ಕಂಪನಿಗಳ ಪೈಕಿ ಸರಕಾರಿ ಉದ್ದಿಮೆಗಳು 541ರಲ್ಲಿ 12 ಮಾತ್ರ. 13,260 ಕೋಟಿ ರೂ. ಗಳಲ್ಲಿ 250 ಕೋಟಿ ರೂ. ಮಾತ್ರ. ಆದ್ದರಿಂದ ಸರಕಾರಿ ಉದ್ದಿಮೆಗಳು ಬಿಳಿ ಆನೆ ಎಂದು ಕೈಗಾರಿಕೋದ್ಯಮಿಗಳು ಹೇಳುವುದರ ಹೂರಣ ಬಯಲಿಗೆ ಬೀಳುತ್ತದೆ. ಹಾಗೆ ಹೇಳುತ್ತಾ ಲಾಭ ದಾಯಕವಾದ ಉದ್ದಿಮೆ ಗಳನ್ನು ಕೊಂಡುಕೊಳ್ಳುವುದಕ್ಕಾಗಿ ಸಾರ್ವಜನಿಕರಿಗೆ, ಬ್ಯಾಂಕುಗಳಿಗೆ ಸರಕಾರಕ್ಕೆ ಮಾಡಿದ ವಂಚನೆಯಿಂದ ಶೇಖರಣೆಯಾದ ಹಣದಿಂದ ಸರ್ಕಾರದ ಸೂತ್ರವನ್ನು ಹಿಡಿದಿಟ್ಟುಕೊಳ್ಳುತ್ತಾರೆ. ಇಂತಹ ವ್ಯಕ್ತಿಗಳ ಬೆಂಬಲದಿಂದಲೇ ಬಿಜೆಪಿ ನೇತೃತ್ವದ 'ಮುಖವಾಡ' ವಾಜಪೇಯಿ ಸರಕಾರ ಬದುಕುಳಿದಿದೆ.



ಬ್ಯಾಂಕಿಗೆ ಭಾರಿ ಬಾಕಿ ತೆತ್ತಬೇಕಾಗಿರುವ ಘೋರ್ಪಡೆ

ಕರ್ನಾಟಕ ರಾಜ್ಯದ 25 ಕಂಪನಿಗಳು ಕನಿಷ್ಟ 500 ಕೋಟಿ ರೂ.ಗಳಷ್ಟು ಸಾಲವನ್ನು ವಾಪಸು ಮಾಡಬೇಕಾಗಿದೆ. ಕಳೆದ 4-5 ವರ್ಷಗಳಿಂದ ಬ್ಯಾಂಕುಗಳು ಈ ಸಾಲದ ಮೇಲೆ ಬಡ್ಡಿ ಹಾಕುತ್ತಿಲ್ಲ. ಇದರಿಂದ ಬ್ಯಾಂಕುಗಳಿಗೆ ವರ್ಷಕ್ಕೆ 100 ಕೋಟಿ ರೂ. ನಷ್ಟವಾಗುತ್ತಿದೆ. ಒಂದು ವರ್ಷಕ್ಕೆ ಶೇ 20 ರ ಬಡ್ಡಿಯಂತೆ.

ಮುಚ್ಚುವ ಹಂತದಲ್ಲಿರುವ ಯುಕೋ ಬ್ಯಾಂಕ್



ರಾಜ್ಯದ ಹಲವಾರು ನೀರಾವರಿ ಯೋಜನೆಗಳು, ವಿದ್ಯುತ್ ಯೋಜನೆಗಳು ಸರಕಾರದ ಬಳಿ ಹಣ ಇಲ್ಲವೆಂದು ಬಾಕಿ ಉಳಿದಿವೆ. ಗುಲ್ಬರ್ಗದ ಬೆಣ್ಣೆ ತೊರೆ ಯೋಜನೆ, ಬಿಜಾಪುರದ ಮುಳವಾಡ ಏತ ನೀರಾವರಿ ಯೋಜನೆ ಇತ್ಯಾದಿಗಳಿಗೆ ನೂರು ಕೋಟಿರೂ. ಒದಗಿಸಿದರೆ 30,000 ಎಕ್ರೆ ಜಮೀನು ಹಚ್ಚಹಸರಾಗುತ್ತದೆ. ರೈತರು ಹೊಚ್ಚ ಹೊಸಬಾಳನ್ನು ಬೆಳಗಲು ಸಾಧ್ಯವಾಗುತ್ತದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರವಾಗಲೀ, ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರವಾಗಲೀ ಈ ಕೆಲಸವನ್ನು ಮಾಡಲು ಸಾಧ್ಯವೇ? ಖಂಡಿತಾ ಇಲ್ಲ. ಜನಸಮೂಹದ ಸಂಘಟನಾತ್ಮಕ ಹೋರಾಟ ಮಾತ್ರವೇ ಇವರ ನೀತಿಗಳನ್ನು ಬದಲಿಸಲು ಸಾಧ್ಯ.

ನಾರಾಯಣ ಮೂರ್ತಿ, ದೇಶಪಾಂಡೆ ಮೊದಲಾದ ಶ್ರೀಮಂತರಿಂದ ಬೆಂಗಳೂರಿನ ಅಭಿವೃದ್ಧಿಗೆ ದಾನ ನೀಡಿ ಎಂದು ಭಿಕ್ಷೆ ಬೇಡುವ ಬದಲು, ಕೇಂದ್ರ ಸರ್ಕಾರ ಜನರು ನೀಡಿದ ಅಧಿಕಾರವನ್ನು ಉಪಯೋಗಿಸಿ ಶ್ರೀಮಂತರು ನೀಡಬೇಕಾದ ಸಾಲ ಮತ್ತು ತೆರಿಗೆಯನ್ನು ಸರಿಯಾಗಿ ವಸೂಲಿ ಮಾಡಿದರೆ, ಬೆಂಗಳೂರನ್ನು ಮಾತ್ರ ಸಿಂಗಪೂರ ಮಾಡುವುದೇಕೆ? ಇಡೀ ಕರ್ನಾಟಕದ ಬಡ ಜನರ ಕಣ್ಣೀರನ್ನು ಒರಸಿ, ಸಮೃದ್ಧಿಯಾಗಿ ಮಾಡಲು ಸಾಧ್ಯವಿದೆ.

Behind every great success there is a crime (ಎಲ್ಲ ಭರ್ಜರಿ ಯಶಸ್ಸಿನ ಹಿಂದೆ ವಂಚನೆಯೂ ಅಡಗಿದೆ) ಎಂಬ ಇಂಗ್ಲೀಷ್ ಗಾದೆಯಂತೆ ಶ್ರೀಮಂತರೆಂದು ತಾನೆ ಪಟ್ಟ ಹಚ್ಚಿಕೊಂಡಿರುವ ಕೈಗಾರಿಕೋದ್ಯಮಿಗಳ, ದೊಡ್ಡ ಜಮೀನ್ದಾರರ ನಿಜ ಹೂರಣವನ್ನು ಬಯಲಿಗೆಳೆದು ಜನರ ಮುಂದಿಡಬೇಕಾಗಿದೆ.

ಈ ಕೆಲಸವನ್ನು ಬಿಜೆಪಿ, ಕಾಂಗ್ರೆಸ್ ಪಕ್ಷಗಳು ಅವರ ನೇತೃತ್ವದ ಸರಕಾರಗಳು ಮಾಡುವುದಿಲ್ಲ. ಒಬ್ಬ ವ್ಯಕ್ತಿ ಅಥವಾ ಕೆಲವು ವ್ಯಕ್ತಿಗಳಿಂದಲೂ ಈ ಕೆಲಸ ಮಾಡಲು ಸಾಧ್ಯವಿಲ್ಲ. ದೊಡ್ಡ ಸಂಘಟನಾ ಶಕ್ತಿಯೇ ಬೇಕಾಗುತ್ತದೆ. ರೈತ ಕಾರ್ಮಿಕರ, ವಿದ್ಯಾರ್ಥಿ-ಯುವಜನರ, ಮಹಿಳೆಯರು-ಶಿಕ್ಷಕರಾದಿಯಾಗಿ ದೊಡ್ಡ ಜನ ಸಮೂಹವನ್ನೇ ಅಣಿನೆರೆಸಬೇಕಾಗಿದೆ. ಆ ದಿಸೆಯಲ್ಲಿ ತೀವ್ರಗತಿಯಲ್ಲಿ ಮುಂದುವರಿಯಬೇಕಾಗಿದೆ.

ಎನ್.ಗೂಲಾ

ಪುಟ 13 ರಿಂದ

ಅಂಗಸಂಗದ ಫಲ ಎಂಬುದು ಅನುಭವ ಕಲಿಸಿದ ಪಾಠ. ಈ ಕಾರಣದಿಂದ ಅವರ ಬುಡಕಟ್ಟಿನ ಹೆಂಗಸರು ಬಿಳಿಯರಿಗೆ ತಮ್ಮ ದೇಹಗಳನ್ನರ್ಪಿಸದಂತೆ ಕಠೋರ ನಿರ್ಬಂಧಗಳನ್ನು ಹೇರಿದ್ದರು. ಮಿನುಗುವ ಕರಿ ಚರ್ಮದ ತಮ್ಮ ಮಕ್ಕಳನ್ನು ತೋರಿಸುವುದೆಂದರೆ ಆ ಹೆಂಗಸರಲ್ಲಿ ಪ್ರಚಂಡ ಆವೇಶದ ಅಭಿಮಾನ ಕುದಿಯುತ್ತಿತ್ತು. ಅಂದರೆ ತಮ್ಮ ಮೂಲಕುಲದ ಹಸನಾದ ಮಕ್ಕಳೆಂಬ ಹೆಮ್ಮೆ ಅವರಿಗೆ. ಆದರೆ ಗ್ವೆಲ್ನಿಟ್‌ನ ಹೆಂಡತಿ ಮಿಟ್ಸೂನ್ ದಟ್ಟಕಾಂಸ್ಯ ವರ್ಣ ಗಂಡುಮಕ್ಕಳನ್ನು ಹೆತ್ತಾಗ ಆಕೆಯಲ್ಲಿ ತುಂಬಿದಷ್ಟು ಅಭಿಮಾನ ಬೇರಾರಲ್ಲೂ ಇರಲಿಲ್ಲ.


ಆನಂತರ ಆಕೆ ಹೆಣ್ಣು ಮಗುವೊಂದಕ್ಕೆ ಜನ್ಮವಿತ್ತಳು. ಅವಳ ಬಾಣಂತಿತನಕ್ಕಾಗಿ ಇದ್ದ ಮುದಿ ಹೆಂಗಸರು ಮಗುವನ್ನು ಕಂಡಾಗ ಅದೇನೋ ಅನುಮಾನ ತಾಳಿದರು. ಮಿಟ್ಸೂನ್‌ಳಲ್ಲಂತೂ ತೀವ್ರವಾದ ನಾಚಿಕೆ ಮತ್ತು ರೋಷಗಳೆರಡೂ ಉಕ್ಕೇರಿ ಹೊರಚೆಲ್ಲಿದ್ದವು. ಗ್ವೆಲ್ನಿಟ್‌ನೂ ಮಗುವನ್ನು ವೀಕ್ಷಿಸಿದಾಗ ಯಾವುದು ನಿಷೇಧಿಸಲ್ಪಟ್ಟಿತ್ತೋ, ಮಿಟ್ಸೊನಳಿಂದ ತಿಳಿದುಕೊಂಡು ಬಿಟ್ಟ. ಆತ ಆ ಬುಡಕಟ್ಟಿನವರಲ್ಲಿ ಪರಕೀಯನಾಗಿದ್ದರೂ ಶುದ್ಧರಕ್ತದವನಾಗಿದ್ದ. ತನ್ನಾಕೆಯ ಕುಲಕ್ಕೆ ಸೇರಿದ್ದ ಆ ಬುಡಕಟ್ಟಿನವರು ಇವನಲ್ಲಿ ಸಂಪೂರ್ಣ ವಿಶ್ವಾಸ ತಳೆದಿದ್ದರು. ಜೊತೆಗೆ ಬುಡಕಟ್ಟಿನ ಎಲ್ಲಾ ಹಕ್ಕು, ಮಾನ ಸನ್ಮಾನಗಳನ್ನು ನೀಡಿದ್ದರು. ಆಧರೆ ಆ ಹೆಣ್ಣು ಮಗುವಿನಿಂದಾಗಿ ತನಗೆ ಘೋರ ಅಪಮಾನ ಮತ್ತು ಅಪಕೀರ್ತಿಗಳನ್ನು ತಂದಿತ್ತಾಗ ಕೆರಳಿ ಕೋಪಾವಿಷ್ಟನಾಗಿ ಕನಲಿದ. ಆದರೆ ಮಿಟ್ಸೊನಳಲ್ಲಿ ತುಂಬಿ ಉರಿಯುತ್ತಿದ್ದ ಕೋಪ ಇನ್ನೂ ಉಗ್ರವಾಗಿತ್ತು.

"ಇದಕ್ಕೆ ಕಾರಣ ಧನಿ." ಎಂದು ಮಿಟ್ಸೂನ್ ಹೇಳಿದಳು. ಈ ಮೂಲ ಹೇಳುವಾಗ ಗತ ನೆನಪಿನ ಆಘಾತದಿಂದ ವೃದ್ಧನ ಧ್ವನಿ ಕಂಪಿಸುತ್ತಿತ್ತು. ಮಿಟ್ಸೂನ್ ಹೇಳಿದಳು. "ಗ್ವೆಲ್ನಿಟ್ ನೀನು ಜಾನುವಾರಗಳನ್ನು ನೋಡಿಕೊಳ್ಳಲು ಹೊರಗೆ ಹೋಗಿದ್ದಾಗ ಧನಿಯ ದೊಡ್ಡ ಮನೆಗೆ ಸಾಮಾನುಗಳಿಗಾಗಿ ಹೋಗಿದ್ದೆ. ಆತ ನನ್ನನ್ನು ಮಳಿಗೆಯ ಒಳಗೆ ಕೊಂಡೊಯ್ದು ಬಾಗಿಲು ಹಾಕಿಕೊಂಡ. ಏನೂ ಆಗುವುದಿಲ್ಲ. ಯಾರಿಗೂ ತಿಳಿಯದು ಎಂದು ಹೇಳಿದ. ಈಗ ನನ್ನ ನಾಚಿಕೆಗೆ ಈ ಮಗು ಇಲ್ಲಿ ಬಂದಿದೆ. ಐಯ್ಯೋeeee?

ಮುಂದಿನ ವಾರಕ್ಕೆ



ದೇಶದ ಮಾನಸಿಕ ದುರಂತ: ನಾಗದೇವತೆ



ಇತ್ತೀಚಿಗೆ ತೆರೆಕಂಡ ನಾಗದೇವತೆ ಚಿತ್ರ ನಾಗದೇವತೆಯ ಪುರಾಣ ಕತೆಯನ್ನು ವಿವರಿಸಲಾಗಿದೆ. ನಾಗರ ಹಾವುಗಳನ್ನು ಕೊಂದರೆ ಸಂಕಷ್ಟಕೀಡಾಗುತ್ತಾರೆ. ಭಕ್ತಿಯಿಂದ ಪೂಜಿಸಿದರೆ ಸಮಸ್ಯೆಗಳಿಂದ ಪಾರಾಗುತ್ತಾರೆಂಬುದನ್ನು ಇಲ್ಲಿ ತೋರಿಸಲಾಗಿದೆ. ಮಕ್ಕಳಿಲ್ಲದೆ ಅಪಹಾಸ್ಯಕೀಡಾದ ಹೆಣ್ಣೊಬ್ಬಳು ನಾಗರ ಹಾವನ್ನು ಭಕ್ತಿಯಿಂದ ಪೂಜಿಸಿದ ನಂತರ ಹೆಣ್ಣು ಮಗಳು ನಾಗಲಕ್ಷ್ಮಿ (ಪ್ರೇಮ) ಜನಿಸುತ್ತಾಳೆ ಇವಳು ಜೀವನ ಪರ್ಯಂತ ನಾಗದೇವತೆಯ ಪರಮ ಭಕ್ತಳಾಗುತ್ತಾಳೆ. ನಾಗಲಕ್ಷ್ಮಿ ಮದುವೆಯಾದ ಪತಿ ಶಿವಲಿಂಗ (ಸಾಯಿಕುಮಾರ್) ವಿಷಮಾನವನಾಗಿರುತ್ತಾನೆ. ಕಾರಣ ಶಿವಲಿಂಗನ ಮಲತಾಯಿ ಆಸ್ತಿ ಲಪಟಾಯಿಸಲು ಶಿವಲಿಂಗನಿಗೆ ವಿಷಯವನ್ನು ದೇಹದಲ್ಲಿ ಸೇರಿ ಸಿರುತ್ತಾಳೆ ಆದ್ದರಿಂದ ಶಿವಲಿಂಗ ಸ್ತ್ರೀಯರ ಜೊತೆ ಸೇರಿದರೆ ಸ್ತ್ರೀಯರು ಸಾಯುತ್ತಾರೆ. ನಾಗಲಕ್ಷ್ಮಿ ನಾಗದೇವತೆಯ ಮೊರೆ ಹೋಗಿ ವ್ರತಗಳನ್ನು ಆಚರಿಸಿ ತನ್ನ ಪತಿಯನ್ನು ವಿಷಮುಕ್ತನನ್ನಾಗಿ ಪಡೆಯುತ್ತಾಳೆ, ಇದು ಚಿತ್ರದ ಕಥೆ ಕಂಪ್ಯೂಟರ ಯುಗ, ಅತ್ಯಂತ ಆಧುನಿಕ ವೈಜ್ಞಾನಿಕ ಪರಿಸರಗಳ ಯುಗದಲ್ಲಿ ಸಮಾಜದ ಒಳಗೆ ದೇಹದ ಬಗ್ಗೆ ನಡೆಯುವ ಕ್ರಿಯೆ ಪ್ರತಿಕ್ರಿಯೆಗಳಿಗೆ ಕಾರಣಗಳನ್ನು ಕಂಡು ಹಿಡಿದಿದ್ದಾರೆ ಪ್ರಾಕೃತಿಕ ಪ್ರಯೋಗಗಳು ಹಾಗೂ ಸಂಶೋಧನೆಗಳ ನಿರಂತರವಾಗಿ ನಡೆಯುತ್ತ ಕಾರಣಗಳನ್ನು ಕಂಡು ಹಿಡಿಯುತ್ತಿದ್ದಾರೆ. ಜನರು ಕಾಯಿಲೆಗಳು, ಮಕ್ಕಳಿಲ್ಲದಿರುವುದು ಇವುಗಳಿಗೆ ದೇಹದೊಳಗಡೆಯ ಸುತ್ತಲಿನ ಪರಿಸರದೊಳಗಡೆಯ ಅಂಶಗಳೇ ಕಾರಣ ಎಂದು ಅನ್ವೇಷಿಸಿ ಸೂಕ್ತ ಚಿಕಿತ್ಸೆಗಳಿಂದ ಅವನ್ನು ನಿವಾರಿಸಿಕೊಳ್ಳತ್ತಿದಂತೆ ಅದೇ ರೀತಿ ಬದುಕಿನ ಕಷ್ಟಗಳಿಗೂ ಕಾರಣಗಳು ಈ ಸಮಾಜಗೊಳಗಡೆಯೇ ಇದೆ ಬಡತನ ಇವು ಸಾಮಾಜಿಕ ರೋಗಗಳು ಇಡಿ ಸಮಾಜ ಅದನ್ನು ಪರಿಹರಿಸಬೇಕು ಎಂಬ ತಿಳುವಳಿಕೆ ಬಲವಾಗಿ ಹರಡಿದೆ ಆದರೆ ಅದೇ ಸಮಯದಲ್ಲಿ ಆಧುನಿಕ ವಿಜ್ಞಾನ ವಿಚಾರ ಪೂರ್ವಕವಾಗಿ ಅಲ್ಲಗಳೆಯುವ ಕಂದಾಚಾರಗಳನ್ನು ಪ್ರಚಾರ ಮಾಡುವುದಕ್ಕಾಗಿ ಅದೇ ವಿಜ್ಞಾನ ತಂತ್ರ ಜ್ಞಾನದ ಮಾಧ್ಯಮಗಳನ್ನು ಟಿ.ವಿ. ಸಿನಿಮಾಗಳನ್ನು ಬಳಸಿಕೊಳ್ಳುತ್ತಿವೆ ಈ ಸಿನಿಮಾದಲ್ಲಿ ಕಂಪ್ಯೂಟರ್‌ಗ್ರಾಫಿಕ್ಸ್ ಎಂಬ ಅತ್ಯಾಧುನಿಕ ತಂತ್ರ ಜ್ಞಾನವನ್ನು ಬಳಸಿಕೊಂಡು ಅದೇ ತಂತ್ರಜ್ಞಾನ ನೀಡಿದ ಆಧುನಿಕ ವಿಚಾರ, ವಿಜ್ಞಾನಗಳನ್ನು ನಿರಾಕರಿಸಲು ಬಳಸಿಕೊಂಡಿರುವುದು ದುರಂತವೇಸರಿ.

ಇದಕ್ಕೆ ನಮ್ಮದೇಶದಲ್ಲಿ ಅನಕ್ಷರಸ್ತರು ಸಾಕ್ಷರಸ್ಥರಾದರೂ ಓದುವ ಶಕ್ತಿ ಇಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿರುವುದು ಒಂದು ಕಾರಣ.

ಜೊತೆಗೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ವೃತ್ತಗಳು, ಸತ್ಯಾನಾರಾಯಣ ಪೂಜೆ, ಪುರಾಣ ಹರಿಕಥೆಗಳು ಒಂದು ಕಡೆ ಪತ್ರಿಕೆ ಟಿ.ವಿ.ಗಳಂತಹ ಮಾಧ್ಯಮಗಳು ಕಂದ ಚಾರಗಳನ್ನು ಪ್ರಚಾರ ಮಾಡುತ್ತಿವೆ. ನಮ್ಮದೇಶದೊಳಗೆ ಸಂಸ್ಥೆಗಳು, ಮಠಗಳು ಸ್ವಾಮಿಗಳು ಆಳುವ ವರ್ಗಗಳು, ಪಟ್ಟ ಭದ್ರಹಿತಾಸಕ್ತಿಗಳು ದೊಡ್ಡ ಪ್ರಮಾಣದಲ್ಲಿ ಹಣ ನೀಡುತ್ತಿವೆ. ಸರ್ಕಾರ ಇದನ್ನು ಬೆಂಬಲಿಸುತ್ತಾ ಬಂದಿದೆ. ಅಂತಹ ಒಂದು ಪ್ರಯತ್ನವಾಗಿಯೇ ಈ ಸಿನಿಮಾ ಅವತರಿಸಿದೆ.

ಈ ಸಿನೆಮಾದ ಮೂಲ ಉದ್ದೇಶ ದೇಹದ ಹಾಗೂ ಬದುಕಿನ ಸಮಸ್ಯೆಗಳನ್ನು ವಿನಾರಿಸಿಕೊಳ್ಳಲು ವೈಜ್ಞಾನಿಕ ವೈಚಾರಿಕ ವಿಧಾನಗಳನ್ನು ಅನುಸರಿಸುವುದನ್ನು ತಪ್ಪಿಸಿ ಕಂದಾಚಾರಗಳತ್ತ ವ್ರತ, ನಾಗಪೂಜೆಗಳತ್ತ ಸೆಳೆಯುವುದೇ ಆಗಿದೆ ಆದರೆ ಚಿತ್ರ ಅಷ್ಟಕ್ಕೇ ನಿಲ್ಲುವುದಿಲ್ಲ ಮಹಿಳೆಯರನ್ನು ಕುಟುಂಬದವರನ್ನು ಸಮಸ್ಯೆಯ ಮೂಲ ಎಂದು ಹಲವು ಪ್ರಸಂಗಗಳ ಮೂಲಕ ಚಿತ್ರಿಸಲಾಗಿದೆ. ಮಲತಾಯಿಯನ್ನೇ ಚಿತ್ರದ ಕೇಂದ್ರ ಖಳನಾಯಕಿಯನ್ನಾಗಿ ಚಿತ್ರಿಸಿರುವುದು ಪುರುಷ ತನ್ನ ಪತ್ನಿಯನ್ನು ತ್ಯಜಿಸಿ ಮತ್ತೊಂದು ಹೆಣ್ಣಿನ ಜೊತೆ ಸೇರಿಕೊಂಡರೆ ಅದರ ಎಲ್ಲಾ ಹೊಣೆಯನ್ನು ಮೊದಲ ಹೆಂಡತಿಯ ಮೇಲೆಯೆ ಹೊರಿಸುವುದು ಕಥಾನಾಯಕ ಇಬ್ಬರ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದರೆ ಅದಕ್ಕೆ ಅವನು ಯಾವರೀತಿ ಯಲ್ಲಿಯೂ ಹೊಣೆಗಾರನಲ್ಲವೆಂಬಂತೆ ಚಿತ್ರಿಸಿರುವುದು. ಇವೆಲ್ಲಾ ಕಂದಾಚಾರದ ಉದ್ದೇಶವೇ ಮಹಿಳೆಯನ್ನು ಅಸಮಾನತೆಯ ಕೂಪಕ್ಕೆ ತಳ್ಳುವುದು ಎಂಬುದು ಸ್ಪಷ್ಟವಾಗುತ್ತದೆ.

ಇದಲ್ಲದೆ ಸಿನಿಮಾ ನಿರ್ಮಾಪಕ ಹಣಕೊಟ್ಟು ಸಿನಿಮಾ ಥಿಯೇಟರ್‌ನಲ್ಲಿ ದೇವರು ಮೈಮೇಲೆ ಬಂದಂತೆ ವರ್ತಿಸುವಂತೆ ಪ್ರೇರೇಪಿಸಿರುವುದು ಪತ್ರಿಕೆಗಳ ಮೂಲಕ ಬೆಳಕಿಗೆ ಬಂದಿದೆ. ಸಿನಿಮಾ ಮಂದಿರಗಳಲ್ಲಿ ನಾಗದೇವತೆಯ ಮೂರ್ತಿಯನ್ನು ಪೂಜಿಸುವುದು ಚಿತ್ರ ಮಂದಿರದಲ್ಲಿ ಚಿತ್ರ ಪ್ರದರ್ಶನ ಸಮಯದಲ್ಲಿ ನಾಗರ ಹಾವು ಪರದೆಯ ಹತ್ತಿರ ಹೆಡೆಯೆತ್ತಿ ನಿಂತಿತೆಂದು ಪ್ರೇಕ್ಷಕರು ಭಯ ಭಕ್ತರಾಗಿ ಚಿತ್ರ ವೀಕ್ಷಿಸಿದರೆಂದು ಪ್ರಚಾರಗಳನ್ನು ಹಬ್ಬಿಸುವುದು ಇಂತಹ ಕೀಳು ಮಟ್ಟಕ್ಕೆ ಇಳಿದಿದ್ದಾರೆ ಇಂಥ ಚಿತ್ರಗಳನ್ನು ಪೂರ್ತಿಯಾಗಿ ವಿರೋಧಿಸುವಂತಾಗಬೇಕು ಅಲ್ಲದೆ ಇಂಥ ಸಿನಿಮಾಗಳ ವಿರುದ್ಧ ಸಮಾಜದೊಳಗೆ ದೊಡ್ಡ ಸಂಘರ್ಷ ನಡೆಯಬೇಕು.

ಮೊದಲೆ ಹೇಳಿದಂತೆ ಗ್ರಾಫಿಕ್ಸ್ ಮೂಲಕ ಹಾವಿನ ಬೃಹದಾಕಾರದ ಹೆಡೆ ಶರೀರ ಬಾಲ ಎಲ್ಲ ಭಯನಕ, ರೋಚಕ ಎನ್ನಿಸಿದರೂ ಆಂಗ್ಲ ಭಾಷೆ ಚಿತ್ರಗಳನ್ನು ನೋಡಿದವರಿಗೆ ವಿಶೇಷತೆ ಏನೂ ಇಲ್ಲಿ ಇಲ್ಲ ಡಿ.ಟಿ.ಎಸ್ ಮೂಲಕ ಅಬ್ಬರದ ಸಂಗೀತವನ್ನು ಹಂಸಲೇಖ ನೀಡಿದರೂ ವಿಫಲವಾಗಿದೆ ಆದರೆ ಕೇವಲ ಕನ್ನಡಬಲ್ಲ ಬಡ ಜನರನ್ನು ಈ ಕಂದಾಚಾರ ಪ್ರಚೋದಕ ಸಿನೆಮಾದತ್ತ ಸೆಳೆಯಲು ಸಹಾಯಕಾರಿಯಾಗಿದೆ.

ಚಿತ್ರದಲ್ಲಿ ಸಾಯಿಕುಮಾರ್ ಪ್ರೇಮ, ಸೌಂದರ್ಯ ಚಾರುಲತಾ ಇವರೆಲ್ಲಾ ಪಾತ್ರವಹಿಸಿದ್ದಾರೆ. ಆದರೆ ಕಥೆಯ ಸ್ವರೂಪವೇ ವಿರೂಪದಾಗಿರುವುದರಿಂದ ನಟನೆಗೆ ಹೆಚ್ಚು ಅವಕಾಶವೇನುಇಲ್ಲ.

ಒಟ್ಟಿನಲ್ಲಿ ಜನತೆ ಇಂತಹ ಸಿನೆಮಾಗಳನ್ನು ಬಹಿಷ್ಕರಿಸುವಂತಹ ವಾತಾವರಣ ಮೂಡಬೇಕು ಕಂದಾಚಾರದ ವಿರುದ್ಧ ನಿರಂತರ ಸಂಘರ್ಷ ನಡೆಯಬೇಕು.

ಮಹಾನ್ ಸಿನೇಮಾಗಳು

'ಸೈಕಲ್ ಕಳ್ಳರು'

ಕಟುವಾಸ್ತವದ ಅತ್ಯುತ್ತಮ ಚಿತ್ರಣ

ಇಟಲಿಯ ವಿಟ್ಟೋರಿಯೊ ಡಿಸಿಕಾ ಎಂಬಾತ 1949 ರಲ್ಲಿ ನಿರ್ಮಿಸಿದ 'ಸೈಕಲ್ ಕಳ್ಳರು' ಶತಮಾನದ ಮಹಾನ್ ಚಿತ್ರವೆಂದು ನಿರ್ವಿವಾದಿತವಾಗಿ ಪರಿಗಣಿತವಾದದ್ದು ಚಿತ್ರ ಬಿಡುಗಡೆಯಾದಾಗ ಇಟಲಿಯಲ್ಲಿ ಭಾರಿ ಜನಪ್ರಿಯತೆ ಗಳಿಸಿದ ಈ ಚಿತ್ರ ಅವಧಿಯಲ್ಲಿ 'ನವವಾಸ್ತವ ಪಂಥ'ವೆಂದು ಹೆಸರಾಗಿದ್ದ ಚಿತ್ರಗಳಲ್ಲಿ ಅತ್ಯುತ್ತಮ ಮಾದರಿ ಎನ್ನಿಸಿಕೊಂಡದ್ದು. ಬಿಡುಗಡೆಯಾದಾಗ ಒಂದು ಕಡೆ ಇದು ಇಟಲಿಯ ಮಾನ ಕಳೆಯುವ ಚಿತ್ರ ಎಂದು ಆಳುವವರು ಮೂಗು ಮುರಿದರೆ, ಚಿತ್ರ ಎರಡನೇ ಮಹಾಯುದ್ಧ ನಂತರದ ಇಟಲಿಯ ಕಾರ್ಮಿಕರ ಕಟು ವಾಸ್ತವದ ಅತ್ಯುತ್ತಮ ಚಿತ್ರಣವಾದರೂ ಭವಿಷ್ಯದ ಬಗ್ಗೆ ನಿರಾಸೆ ಹುಟ್ಟಿಸುವಂಥದ್ದು ಎಂಬ ಟೀಕೆಗೆ ಒಳಗಾಗಿತ್ತು. ಆದರೂ ಜನಸಾಮಾನ್ಯರಲ್ಲಿ ಅತ್ಯಂತ ಜನಪ್ರಿಯವಾದ ಅಪರೂಪದ ಶತಮಾನದ ಮಹಾನ್ ಸಿನಿಮಾಗಳಲ್ಲೊಂದು. ಚಿತ್ರದ ಕಥಾವಸ್ತು, ಸಿನಿಮಾ ಚರಿತ್ರೆಯಲ್ಲಿ ಅದರ ಮಹತ್ವ, ಚಿತ್ರದ ನಿರ್ದೇಶಕ ಡಿಸಿಕಾ ಬಗ್ಗೆ ಓದಿ

ಈ ಚಿತ್ರದ ಮೂಲ ಕಥೆ ಬಾರ್ಟೋಲಿನಿ ಎಂಬಾತನದು. ಚಿತ್ರಲೇಖನ ಬರೆದವನು, ಡಿಸಿಕಾನ ಜತೆ ದೀರ್ಘಕಾಲ ಕೆಲಸ ಮಾಡಿದ ಸಿಸರೆ ಜವಟ್ಟಿನಿ ಎನ್ನುವಾತ.

ಚಿತ್ರದ ನಾಯಕನಾಗಿ ನಟಿಸಲು ಪ್ರಸಿದ್ಧ ನಟನೊಬ್ಬನನ್ನು ಆರಿಸಿಕೊಳ್ಳಬೇಕೆಂದಿದ್ದ ಡಿ ಸಿಕಾ ಕಾರಣಾಂತರದಿಂದ ಕೊನೆಗೆ, ನಟನೆಯ ಗಂಧವೂ ಗೊತ್ತಿಲ್ಲದ ಸಾಮಾನ್ಯ ಕಾರ್ಮಿಕನೊಬ್ಬನನ್ನು ಆಯ್ದುಕೊಂಡ. ಪುಟ್ಟ ಮಗನ ಪಾತ್ರಕ್ಕೆ ದಾರಿಯಲ್ಲಿ ಕಂಡ ಹುಡುಗನೊಬ್ಬನನ್ನು ಆಯ್ದುಕೊಂಡ. ಆ ಹುಡುಗ ಸಿಕ್ಕಿದ್ದು ತನ್ನ ಅದೃಷ್ಟ ಎಂದು ಹೇಳಿಕೊಂಡಿದ್ದಾನೆ ಡಿ ಸಿಕಾ. ಚಿತ್ರದಲ್ಲಿ ಬರುವ ಪಾತ್ರಗಳೆಲ್ಲಕ್ಕೂ ಹೀಗೆ, ಆಯಾ ಕ್ಷೇತ್ರದಲ್ಲೇ ಇದ್ದ ನಿಜವ್ಯಕ್ತಿಗಳನ್ನು ಆಯ್ದುಕೊಳ್ಳಲಾಯಿತು. ಇಡೀ ಚಿತ್ರ ನಿಜ ಸ್ಥಳಗಳಲ್ಲೇ ಚಿತ್ರಿತವಾಯಿತು.

Bycicle Thievs ಚಿತ್ರ ಕಾಣಿಸುವ ಮುಖ್ಯವಾದ ಕೆಲವು ಅಂಶಗಳು ಇವು:

ಇಲ್ಲಿನ ಪಾತ್ರಗಳು ಸನ್ನಿವೇಶಗಳು ಎಲ್ಲವೂ ವಾಸ್ತವವನ್ನೇ ನೇರ ಚಿತ್ರಿಸಿಕೊಂಡವು. ಇಂಥ ಅಧಿಕೃತ ವಾಸ್ತವತೆಯಿಂದಾಗಿ, ಆ ನಗರ ಆ ಬೀದಿಗಳು ಈ ಜನ - ಇವನ್ನೆಲ್ಲ ತನ್ನ ಸುತ್ತಣವೇ ತನ್ನವೇ ಎಂದುಕೊಳ್ಳುವಂತಾಗುತ್ತದೆ. ಚಿತ್ರದ ಸನ್ನಿವೇಶದಲ್ಲಿ ಪ್ರೇಕ್ಷಕ ನೇರ ಭಾಗಿಯಾಗುವುದು ಸಾಧ್ಯವಾಗಿ ಚಿತ್ರ ತೀವ್ರ ಪರಿಣಾಮವನ್ನುಂಟುಮಾಡುತ್ತದೆ ಚಿತ್ರದ ಅನುಭವ ಪ್ರೇಕ್ಷಕನ ನೇರ ಅನುಭವವೇ ಎಂಬಂತಾಗಿಬಿಡುತ್ತದೆ. ಕಥೆ ತುಂಬ ಸರಳವಾದದ್ದು. ಒಂದು ಸಣ್ಣ ಘಟನೆ ಎನ್ನುವಂಥದು. ಈ ಸರಳತೆ ಪ್ರೇಕ್ಷಕನ ಗಮನವನ್ನು ತಕ್ಷಣ ಸೆಳೆದು ಕೇಂದ್ರೀಕರಿಸಿಕೊಳ್ಳುತ್ತದೆ. ಆದರೆ ಈ ಸರಳತೆ ಬರೀ ಮುಗ್ಧತೆಯೋ ನಿರ್ಬೋಧತೆಯೋ ಅಲ್ಲ ಎನ್ನುವುದು ಗಮನಿಸಬೇಕು. ಇದು ಅಂಟೋನಿಯೋನ ದಾರುಣಸ್ಥಿತಿಯ ಕಥೆಯಾಗಿರುವಂತೆಯೇ ಕುಟುಂಬದ ಕಥೆಯೂ ಹೌದು, ವರ್ಗದ ಕಥೆಯೂ ಹೌದು. ಕೊನೆಗೆ ಯುದ್ಧ ದಾರಿದ್ರ್ಯಗಳ ವಿಶ್ವಕಥೆಯೂ ಹೌದು. ಅಂಟೋನಿಯೋನ ಸಂಕಟಗಳನ್ನು ಚಿತ್ರಿಸುವ ಈ ಚಿತ್ರ ಆತನ ಮುಗ್ಧತೆ, ಮೌಢ್ಯ, ಚಂಚಲತೆ, ಪ್ರೀತಿ, ಕೋಪ-ಇವುಗಳನ್ನು ಚಿತ್ರಿಸುತ್ತದೆ.

ಚಿತ್ರದಲ್ಲಿ ವ್ಯಕ್ತವಾಗುವ ಸಾಮಾಜಿಕ ಪ್ರಜ್ಞೆ, ಸಾಮಾನ್ಯ ಜನರ ಬದುಕಿನ ದಿನನಿತ್ಯದ ಬವಣೆಗಳ-ಬಗ್ಗೆ ಕಳಕಳಿ- ಇವೆಲ್ಲ ಚಿತ್ರವನ್ನು ತೀವ್ರಗೊಳಿಸಿವೆ.

ಚಿತ್ರದ ಸಮಗ್ರ ಅನುಭವ ಅದರ ಕಥಾಸಂವಿಧಾನದಲ್ಲಿ, ಚಿತ್ರದ ಕರಾರುವಾಕ್ಕಾದ ಲಯದಲ್ಲಿ. ಒಟ್ಟಿನ ಶೈಲಿಯಲ್ಲಿ ಸಮಗ್ರವಾಗಿ ಅಭಿವ್ಯಕ್ತಗೊಳ್ಳುತ್ತದೆ.

ಎಲ್ಲಕಿಂತ ಹೆಚ್ಚಾಗಿ - ಇಲ್ಲಿ ರೂಕ್ಷ ಬದುಕಿನ ಕಾರ್ಪಣ್ಯಗಳನ್ನು ಪುಟ್ಟ ಬ್ರುನೋನ ಹಸುಳೆಗಣ್ಣುಗಳ ಮೂಲಕವೇ ಕಾಣಿಸುವುದರಿಂದ -ಇಡೀ ಚಿತ್ರದ ಅನುಭವಕ್ಕೆ ಒಂದು ವಿಶಿಷ್ಟ ಮಾರ್ದವ ಒದಗಿದೆ. ಚಿತ್ರಕೃತಿಯ ಆಧಾರಶೃತಿಯಾಗಿ ಸತತ ಮಿಡಿಯುವ ಆಳವಾದ ಮಾನವೀಯತೆ ಚಿತ್ರವನ್ನು ಆತ್ಮೀಯಗೊಳಿಸುತ್ತದೆ.

- ಹೀಗೆ, ಈ ಚಿತ್ರದ ಮುಖ್ಯಾಂಶಗಳೇ ನವವಾಸ್ತವ ಪಂಥದ ಲಕ್ಷಣಗಳೆಂದು ಹೇಳಬಹುದಾಗಿದೆ.

ನಿಯೋ ರಿಯಲಿಸ್ಟ್ ಪಂಥದ ಅತ್ಯುತ್ತಮ ಮಾದರಿಯಾದ ಈ ಚಿತ್ರ, ಚಲನಚಿತ್ರದ ಶ್ರೇಷ್ಠ ಕೃತಿಗಳಲ್ಲಿ ಒಂದೆನಿಸಿಕೊಂಡಿದೆ. ಜಗತ್ತಿನ ಅನೇಕ ಪ್ರಮುಖ ನಿರ್ದೇಶಕರು ಈ ಚಿತ್ರದಿಂದ ಪ್ರಭಾವಿತರಾಗಿದ್ದಾರೆ. ಸತ್ಯಜಿತ್ ರಾಯ್ ಈ ಚಿತ್ರ ತಮ್ಮ ಮೇಲೆ ಪ್ರಭಾವ ಬೀರಿರುವುದನ್ನು ಹೇಳಿಕೊಂಡಿದ್ದಾರೆ.

ಇಟಲಿಯಲ್ಲಿ 'ನವವಾಸ್ತವವಾದ' ಸಿನಿಮಾ

2ನೇ ಮಹಾಯುದ್ಧ ಮುಗಿದ ಹೊಸತರಲ್ಲಿ, 1945 ರಲ್ಲಿ ಇಟಲಿಯ ಹೊಸಬನೊಬ್ಬ ತಯಾರಿಸಿದ The Open City ಎಂಬ ಚಿತ್ರ ಇದ್ದಕ್ಕಿದ್ದಂತೆ ಇಡೀ ಜಗತ್ತಿನ ಗಮನವನ್ನು ಸೆಳೆಯಿತು. ಅದರ ನಿರ್ದೇಶಕ ಆಗಿನ್ನೂ ಅಪ್ರಸಿದ್ಧನಾಗಿದ್ದ (ಆನಂತರ ವಿಶ್ವಖ್ಯಾತಿ ಪಡೆದ) ರೊಸಲಿನಿ. ಆತನ ಈ ಚಿತ್ರ ಯುದ್ಧದ ಭಯಂಕರ ಪರಿಣಾಮವನ್ನು ಅತ್ಯಂತ ಶಕ್ತಿಯುತವಾಗಿ ಚಿತ್ರಿಸುವಂಥದಾಗಿತ್ತು. ಯಾವ ಅದ್ದೂರಿ ಆಡಂಬರಗಳಿಲ್ಲದ ಅತ್ಯಂತ ಸರಳವಾದ ಮತ್ತು ಅತ್ಯಂತ ವಾಸ್ತವಿಕವಾದ ಚಿತ್ರಣ, ಆಳವಾದ ಮಾನವೀಯತೆ, ಬದುಕಿನ ಬಗ್ಗೆ ತೀವ್ರ ಕಾಳಜಿ - ಇವು ಈ ಹೊಸ ಚಿತ್ರದ ಮುಖ್ಯ ಅಂಶಗಳಾಗಿದ್ದವು. ಮುಂದೆ ಇದೇ ಒಂದು ಪಂಥವಾಗಿ ಬೆಳೆದು 'ನವವಾಸ್ತವಪಂಥ' (Neorealism) ಎಂಬ ಹೆಸರಾಯಿತು.

'ಸೈಕಲ್ ಕಳ್ಳರು' ಕಥಾವಸ್ತು

ಮುಂದಿನ ವಾರಕ್ಕೆ


'ಸೈಕಲ್ ಕಳ್ಳರು' ಚಿತ್ರದ ಒಂದು ದೃಶ್ಯ

PRB DECR 319 79/79 AIKYA RANGA WEEKLY
Reg. No. 17015/64 KRNM/BGS-405 MAG (2)
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ